# ಡಾ|| ರಾಜ್‌ಕುಮಾರ್ ಅಕಾಡೆಮಿ ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು

**ಜೂನ್ ೧ನೇ ವಾರ**

01-06-2026 TO 06-06-2026



## ನೌಕಾಪಡೆ: ಕೃಷ್ಣ ಸ್ವಾಮಿನಾಥನ್ ಅಧಿಕಾರ ಸ್ವೀಕಾರ

- ರಾಜಾ ಸುಬ್ರಮಣಿ ನೂತನ ಸಿಡಿಎಸ್
- ಸಾತ್ವಿಕ್-ಚಿರಾಗ್ ಮುಡಿಗೆ ಕಿರೀಟ
- ಆಶಾಕರಣ' ಯೋಜನೆ
- 100 ಎಥೆನಾಲ್ ಇಂಧನ ಕೇಂದ್ರ

## ಡೊನಾಲ್ಡ್ ಟ್ರಂಪ್ ಸರ್ಕಾರದಿಂದ ಮತ್ತೊಂದು ವಲಸೆ ವಿರೋಧಿ ನಿಯಮ

# ಅಮೆರಿಕದ ಗ್ರೀನ್ ಕಾರ್ಡ್ ಭಾರತೀಯರ ಸ್ಥಿತಿ ಅನಿಶ್ಚಿತ


ಅಮೆರಿಕದ ಡೊನಾಲ್ಡ್ ಟ್ರಂಪ್ ಅವರ ಸರ್ಕಾರವು ಗ್ರೀನ್ ಕಾರ್ಡ್‌ಗೆ ಸಂಬಂಧಿಸಿ ಮತ್ತೊಂದು ಹೊಸ ನಿಯಮ ತಂದಿದ್ದು, ಅದು ಹಲವು ರೀತಿಯ ಆತಂಕ, ಗೊಂದಲಕ್ಕೆ ಕಾರಣವಾಗಿದೆ. ತಾತ್ಕಾಲಿಕ ವೀಸಾ ಅಡಿ ಅಮೆರಿಕದಲ್ಲಿದ್ದು, ಗ್ರೀನ್ ಕಾರ್ಡ್‌ಗಾಗಿ ಅರ್ಜಿ ಸಲ್ಲಿಸುವವರು ತಮ್ಮ ಮಾತೃದೇಶದಿಂದಲೇ ಪ್ರಕ್ರಿಯೆ ಮುಂದುವರಿಸಬೇಕು ಎಂದು ಅಮೆರಿಕ ಪೌರತ್ವ ಮತ್ತು ವಲಸೆ ಸೇವೆ ವಿಭಾಗವು (ಯುಎಸ್‌ಸಿಐಎಸ್) ಘೋಷಿಸಿದೆ. ಆ ನಿಯಮವು ಅಮೆರಿಕದಲ್ಲಿರುವ ಅನೇಕ ಭಾರತೀಯರಿಗೆ ಸಹಜವಾಗಿಯೇ ಆತಂಕ ಮೂಡಿಸಿದೆ. ವಾರದ ನಂತರ ಅಮೆರಿಕ ಸ್ಪಷ್ಟನೆ ನೀಡಿದ್ದು, ಈ ಬಗ್ಗೆ ಅಷ್ಟು ಭಯಪಡಬೇಕಿಲ್ಲ ಎಂದೂ ಹೇಳಿದೆ

| | | | | |
|---|---|---|---|---|
| **44.60** ಲಕ್ಷ | **70%** | **4.06** ಲಕ್ಷ | **2.84** ಲಕ್ಷ | **7** ಲಕ್ಷ |
| ಅಮೆರಿಕದಲ್ಲಿ ನೆಲಸಿರುವ ಭಾರತೀಯರು (ಅನಿವಾಸಿ ಭಾರತೀಯರೂ ಸೇರಿ) | ಅಮೆರಿಕ ಪ್ರತಿ ವರ್ಷ ನೀಡುವ ಎಚ್1-ಬಿ ವೀಸಾದಲ್ಲಿ ಭಾರತೀಯರು ಪಡೆಯುವ ಪಾಲು | 2025ನೇ ಆರ್ಥಿಕ ವರ್ಷದಲ್ಲಿ ಅಮೆರಿಕ ನೀಡಿದ ಎಚ್-1ಬಿ ವೀಸಾಗಳು | 2025ನೇ ಆರ್ಥಿಕ ವರ್ಷದಲ್ಲಿ ಎಚ್-1ಬಿ ವೀಸಾ ಪಡೆದ ಭಾರತೀಯರು | ಗ್ರೀನ್ ಕಾರ್ಡ್‌ಗಾಗಿ ಅರ್ಜಿ ಹಾಕಿರುವ ಭಾರತೀಯರ ಸಂಖ್ಯೆ |

ಪ್ರಜಾವಾಣಿ ವಾರ್ತೆ

ಅಮೆರಿಕ ಪೌರತ್ವ ಮತ್ತ ವಲಸೆ ಸೇವೆಗಳ ವಿಭಾಗವು (ಯುಎಸ್‌ಸಿಐಎಸ್) ನೀಡಿದ ಒಂದು ಪುಟ್ಟ ಪ್ರಕಟಣೆ ಲಕ್ಷಾಂತರ ಅಮೆರಿಕ ವಾಸಿಗಳಲ್ಲಿ ತಲ್ಲಣ ಉಂಟುಮಾಡಿದೆ. ಎಚ್1 ಬಿ ವೀಸಾ ಸೇರಿದಂತೆ ತಾತ್ಕಾಲಿಕ ವೀಸಾದ ಅಡಿಯಲ್ಲಿ ಅಮೆರಿಕದಲ್ಲಿದ್ದು, ಗ್ರೀನ್ ಕಾರ್ಡ್ (ಕಾಯಂ ನಿವಾಸಿ ಪ್ರಮಾಣಪತ್ರ) ಪಡೆಯಲು ಅರ್ಜಿ ಸಲ್ಲಿಸಿವವರು ತಮ್ಮ ಮಾತೃದೇಶಗಳಿಗೆ ಹಿಂದಿರುಗಿ, ಅಲ್ಲಿನ ಕಾನ್ಸುಲೇಟ್ ಕಚೇರಿಯ ಮೂಲಕ ಪ್ರಕ್ರಿಯೆ ಮುಂದುವರಿಸಬೇಕು ಎನ್ನುವುದು ಆ ಪ್ರಕಟಣೆಯ ಸಾರ. ತಾತ್ಕಾಲಿಕ ವೀಸಾ ಆಧಾರದಲ್ಲಿ ಅಮೆರಿಕದಲ್ಲಿರುವವರು, ಅಕ್ರಮವಾಗಿ ಅಮೆರಿಕದಲ್ಲಿ ವಾಸಿಸುತ್ತಿದ್ದು, ಗಂಡ/ಹೆಂಡತಿ, ಮಕ್ಕಳ ಪ್ರಾಯೋಜಕತ್ವದ ಮೂಲಕ ಕಾನೂನುಬದ್ಧ ವಲಸಿಗ ಸ್ಥಾನ ಪಡೆಯಲು ಪ್ರಯತ್ನಿಸುತ್ತಿರುವವರು ಈ ನಿಯಮದ ಅನ್ವಯ ದೇಶ ತೊರೆಯಬೇಕಿದೆ.

ಎಚ್-1ಬಿ, ಎಲ್-1 ವೀಸಾ ಮತ್ತು ವಿದ್ಯಾರ್ಥಿ ವೀಸಾ ಅಡಿಯಲ್ಲಿ ಅಮೆರಿಕಕ್ಕೆ ಬಂದವರೂ ದೇಶದಲ್ಲಿಯೇ ಉಳಿದುಕೊಂಡು ಗ್ರೀನ್ ಕಾರ್ಡ್‌ಗೆ ಅರ್ಜಿ ಸಲ್ಲಿಸಲು ಮತ್ತು ಪಡೆಯಲು ಇದುವರೆಗೆ ಅವಕಾಶವಿತ್ತು. ಮಾಹಿತಿ ತಂತ್ರಜ್ಞಾನ ಕ್ಷೇತ್ರದ ವೃತ್ತಿಪರರು ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ವೀಸಾ ಕುರಿತ ವಿಳಂಬ, ಗೊಂದಲ ಇತ್ಯಾದಿ ಇಲ್ಲದಂತೆ ನಿರ್ವಿಘ್ನವಾಗಿ ಕೆಲಸ ಮಾಡಲು ಈ ನಿಯಮವು ಅನುಕೂಲಕರವಾಗಿತ್ತು.



ಅಮೆರಿಕಕ್ಕೆ ಎಚ್-1ಬಿ ವೀಸಾ ಅಡಿ ತೆರಳುವವರ ಪೈಕಿ ಭಾರತೀಯರೇ ಹೆಚ್ಚು (ಶೇ 70). ಹೀಗಾಗಿ ಭಾರತೀಯರಲ್ಲಿ ಇದು ಆತಂಕ ಮೂಡಿಸಿದೆ.

ತಾತ್ಕಾಲಿಕ ವೀಸಾ ಮೇಲೆ ಅಮೆರಿಕದಲ್ಲಿ ಕೆಲಸ ಮಾಡುತ್ತಿರುವವರು, ಕೆಲಸ ಅರಸುತ್ತಿರುವವರು ತಕ್ಷಣವೇ ದೇಶ ತೊರೆಯಬೇಕಾದಂಥ ಪರಿಸ್ಥಿತಿ ಉದ್ಭವಿಸಿತ್ತು. ಆದರೆ, ಮೇ 21ರಂದು ಘೋಷಿಸಿದ್ದ ಈ ನಿಯಮಕ್ಕೆ ಅಮೆರಿಕದವರಿಂದಲೇ ವಿರೋಧ ವ್ಯಕ್ತವಾಗಿದೆ. ಅಮೆರಿಕದ ಪ್ರಗತಿಗೆ ಇದು ಮಾರಕ ಎಂದು ಸಂಘಸಂಸ್ಥೆಗಳು ಟೀಕಿಸಿದವು. ಅದರ ಬೆನ್ನಲ್ಲೇ ಅಮೆರಿಕ ಸರ್ಕಾರವು ಈ ನಿಯಮವನ್ನು ಸಡಿಲಿಸಿದೆ. ಈ ಬಗ್ಗೆ ಯುಎಸ್‌ಸಿಐಎಸ್ ಸ್ಪಷ್ಟೀಕರಣ ನೀಡಿದೆ. 'ಅಮೆರಿಕದಲ್ಲಿ ವೃತ್ತಿಪರರಾಗಿದ್ದು, ಗ್ರೀನ್ ಕಾರ್ಡ್ ನಿರೀಕ್ಷೆಯಲ್ಲಿರುವವರೆಲ್ಲರೂ ದೇಶ ತೊರೆಯಬೇಕಾದ ಅಗತ್ಯವೇನಿಲ್ಲ. ತಮ್ಮ ವೃತ್ತಿಯಿಂದ ಅಮೆರಿಕದ ಆರ್ಥಿಕತೆಗೆ ಲಾಭವಾಗುತ್ತಿದೆ ಎಂದು, ತಮ್ಮ ಕೆಲಸ ರಾಷ್ಟ್ರೀಯ ಹಿತಾಸಕ್ತಿಗೆ ಪೂರಕವಾಗಿದೆ ಎಂದು ಸಾಬೀತುಪಡಿಸಿದರೆ, ಅಂಥವರಿಗೆ ಅಮೆರಿಕದಲ್ಲಿಯೇ ಉಳಿಯಲು ಅವಕಾಶ ನೀಡಲಾಗುತ್ತದೆ' ಎಂದು ಸ್ಪಷ್ಟೀಕರಣದಲ್ಲಿ ಹೇಳಲಾಗಿದೆ.

ಯುಎಸ್‌ಸಿಐಎಸ್ ಸ್ಪಷ್ಟೀಕರಣದ ನಂತರವೂ ಹೊಸ ನಿಯಮದ ವಿಚಾರದಲ್ಲಿ ಗೊಂದಲ ಇದೆ. ಟ್ರಂಪ್ ಎರಡನೇ ಬಾರಿಗೆ ಅಧ್ಯಕ್ಷರಾದ ನಂತರ ವಲಸೆ ನೀತಿಯಲ್ಲಿ ಭಾರಿ ಬದಲಾವಣೆಗಳು ಘಟಿಸುತ್ತಿವೆ. 'ಅಮೆರಿಕ ಮೊದಲು' ಎನ್ನುವ ಪ್ರತಿಪಾದನೆಯೊಂದಿಗೆ ವಲಸಿಗರನ್ನು ಶತ್ರುಗಳಂತೆ ನೋಡುವ ಪರಿಪಾಟ ಅಮೆರಿಕದಲ್ಲಿ ಹೆಚ್ಚಾಗುತ್ತಿದೆ. ಅಮೆರಿಕದಲ್ಲಿ ಹಲವು ವರ್ಷಗಳಿಂದ ನೆಲಸಿ, ಅಲ್ಲಿಯೇ ಮನೆ ನಿರ್ಮಿಸಿಕೊಂಡು, ನೆಲೆ ಕಂಡುಕೊಂಡಿರುವ ಅನೇಕ ಭಾರತೀಯ ಕುಟುಂಬಗಳಲ್ಲಿ ಇದು ಅನಿಶ್ಚಿತತೆ, ಆತಂಕ ಸೃಷ್ಟಿಸಿದೆ.

**ಆಧಾರ:** ಯುಎಸ್‌ಸಿಐಎಸ್,ಯುಎಸ್ ವೀಸಾ ಸರ್ವಿಸಸ್, ಸ್ಟೇಟ್‌ಲೈನ್.ಒಆರ್‌ಜಿ, ವಿದೇಶಾಂಗ ಸಚಿವಾಲಯದ ದತ್ತಾಂಶಗಳು, ಮಾಧ್ಯಮ ವರದಿಗಳು

## ಗ್ರೀನ್ ಕಾರ್ಡ್ ಕನಸು




ಅಮೆರಿಕಕ್ಕೆ ಹೋಗುವ ಬಹುತೇಕರಿಗೆ ಗ್ರೀನ್ ಕಾರ್ಡ್ ಪಡೆಯುವುದು ಒಂದು ಕನಸು. ಗ್ರೀನ್ ಕಾರ್ಡ್ ಎಂದರೆ, ಕಾನೂನುಬದ್ಧ ಕಾಯಂ ನಿವಾಸಿ ಪ್ರಮಾಣ ಪತ್ರ. ಇದನ್ನು ಹೊಂದಿರುವವರು ಅಮೆರಿಕದ ಪೌರತ್ವ ಪಡೆಯಲು ಅರ್ಹರಾಗಿರುತ್ತಾರೆ. ವಿವಿಧ ವೀಸಾಗಳ ಆಧಾರದಲ್ಲಿ ಅಮೆರಿಕಕ್ಕೆ ಭೇಟಿ ನೀಡುವವರು ಗ್ರೀನ್ ಕಾರ್ಡ್ ಪಡೆಯಲು ಅರ್ಜಿ ಸಲ್ಲಿಸಿ, ದಶಕಗಟ್ಟಲೇ ಕಾಯುತ್ತಾರೆ. ಯಾವ ವೀಸಾದಡಿ ಅಮೆರಿಕಕ್ಕೆ ಭೇಟಿ ನೀಡಲಾಗಿದೆ, ಅವರು ಅರ್ಜಿ ಸಲ್ಲಿಸಿ ಎಷ್ಟು ದಿನವಾಗಿದೆ (ಸೀನಿಯಾರಿಟಿ) ಎನ್ನುವುದರ ಆಧಾರದ ಮೇಲೆ ಗ್ರೀನ್ ಕಾರ್ಡ್ ನೀಡಲಾಗುತ್ತದೆ.

ಗ್ರೀನ್ ಕಾರ್ಡ್‌ಗಾಗಿ ಅರ್ಜಿ ಸಲ್ಲಿಸುವವರ ಸಂಖ್ಯೆ ಹೆಚ್ಚಾಗಿರುವುದರಿಂದ ಅಮೆರಿಕ ಈ ವಿಚಾರದಲ್ಲಿ ಕೆಲವು ನಿಯಮಗಳನ್ನು ಅನುಸರಿಸುತ್ತದೆ. ವಾರ್ಷಿಕವಾಗಿ 1.4 ಲಕ್ಷ ಉದ್ಯೋಗ ಆಧಾರಿತ ಗ್ರೀನ್ ಕಾರ್ಡ್‌ಗಳನ್ನು ಮಾತ್ರ ನೀಡಲಾಗುತ್ತಿದ್ದು, ಪ್ರತಿ ದೇಶಕ್ಕೆ ಶೇ 7ರ ಕೋಟಾ ನಿಗದಿಪಡಿಸಿದೆ. ಅಮೆರಿಕಕ್ಕೆ ವಲಸೆ ಹೋಗುವವರ ಪೈಕಿ ಭಾರತೀಯರು ಕೂಡ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಸಹಜವಾಗಿಯೇ ಗ್ರೀನ್ ಕಾರ್ಡ್‌ಗಾಗಿ ಅರ್ಜಿ ಸಲ್ಲಿಸಿದವರ ಪೈಕಿ ಕೂಡ ಭಾರತೀಯರು ಹೆಚ್ಚಾಗಿದ್ದು, ಹಿರಿತನದ ಸರದಿ ಬರಲು ಬಹಳ ವರ್ಷ ಕಾಯಬೇಕಾಗುತ್ತದೆ.

ಕ್ಯಾಟೊ ಇನ್‌ಸ್ಟಿಟ್ಯೂಟ್‌ನ 2022ರ ವರದಿಯ ಪ್ರಕಾರ, ಅಮೆರಿಕದಲ್ಲಿ ಒಟ್ಟು 7.20 ಲಕ್ಷ ಭಾರತೀಯರು ಉದ್ಯೋಗ ಆಧಾರಿತ ಗ್ರೀನ್ ಕಾರ್ಡ್‌ಗಾಗಿ ಅರ್ಜಿ ಸಲ್ಲಿಸಿ ಕಾಯುತ್ತಿದ್ದಾರೆ. ಪ್ರತಿ ದೇಶಕ್ಕೂ ನಿಗದಿತ ಪ್ರಮಾಣದಲ್ಲಿ ಮಾತ್ರ ಗ್ರೀನ್ ಕಾರ್ಡ್ ವಿತರಿಸುತ್ತಿರುವುದರಿಂದ ಅರ್ಜಿ ಸಲ್ಲಿಸಿರುವ ಲಕ್ಷಾಂತರ ಮಂದಿ ಭಾರತೀಯರು ಸುಮಾರು 90 ವರ್ಷ ಕಾಯಬೇಕು. ಅಂದರೆ, ಗ್ರೀನ್ ಕಾರ್ಡ್ ಅರ್ಜಿ ವಿಚಾರಣೆಗೆ ಬರುವ ಮುನ್ನವೇ ಅನೇಕರು ಮರಣ ಹೊಂದಿರುತ್ತಾರೆ. ಪ್ರಸ್ತುತ ಗ್ರೀನ್ ಕಾರ್ಡ್‌ಗಾಗಿ ಸಲ್ಲಿಸಲಾಗಿರುವ 18 ಲಕ್ಷ ಅರ್ಜಿಗಳು ವಿಲೇವಾರಿಗೆ ಬಾಕಿ ಇವೆ.

## ಈಗ ಏಕೆ ಹೊಸ ನಿಯಮ?

ವಿದ್ಯಾರ್ಥಿಗಳು, ಕಾಯಂ ನೌಕರಿ ಇಲ್ಲದವರು, ಪ್ರವಾಸಿ ವೀಸಾಗಳ ಅಡಿಯಲ್ಲಿ ಅಮೆರಿಕಕ್ಕೆ ಬಂದವರು ನಿರ್ದಿಷ್ಟ ಉದ್ದೇಶದಿಂದ ಅಲ್ಪಕಾಲದ ವಾಸ್ತವ್ಯಕ್ಕಾಗಿ ಬರುತ್ತಾರೆ. ಅವರು ತಮ್ಮ ಕೆಲಸ ಮುಗಿದ ನಂತರ ದೇಶವನ್ನು ತೊರೆಯಬೇಕು. ನಮ್ಮ ವ್ಯವಸ್ಥೆ ಇರುವುದೇ ಹಾಗೆ. ಆದರೆ, ಈ ಪೈಕಿ ಅನೇಕರು ಇದು ಗ್ರೀನ್ ಕಾರ್ಡ್ ಪಡೆಯಲು ಮೊದಲ ಹಂತ ಎಂದು ಭಾವಿಸಿದ್ದಾರೆ. ಇವರ ಪ್ರಕರಣಗಳನ್ನು ನಿಭಾಯಿಸುವುದೇ ವಿದೇಶಾಂಗ ಇಲಾಖೆಗೆ ದೊಡ್ಡ ಕೆಲಸವಾಗಿದೆ. ಈ ಕೆಲಸವನ್ನು ವಿದೇಶಗಳಲ್ಲಿರುವ ಅಮೆರಿಕದ ರಾಯಭಾರ ಕಚೇರಿಗಳು ನಿರ್ವಹಿಸಿದರೆ, ಯುಎಸ್‌ಸಿಐಎಸ್ ತನ್ನ ಸಿಬ್ಬಂದಿ ಮತ್ತು ಸಂಪನ್ಮೂಲವನ್ನು ಇತರೆ ಮುಖ್ಯ ಜವಾಬ್ದಾರಿಗಳನ್ನು ನಿರ್ವಹಿಸಲು ಬಳಸಬಹುದು ಎನ್ನುವುದು ಅಮೆರಿಕ ಸರ್ಕಾರದ ವಾದ.




## ಅಮೆರಿಕದಲ್ಲೇ ವಿರೋಧ

ಟ್ರಂಪ್ ಆಡಳಿತದ ಹೊಸ ನೀತಿಗೆ ಅಮೆರಿಕದಲ್ಲೇ ವಿರೋಧ ವ್ಯಕ್ತವಾಗಿದೆ.

ಹೊಸ ನಿಯಮವು ಅನಗತ್ಯ ಗೊಂದಲ ಸೃಷ್ಟಿ ಮಾಡಲಿದೆ. ತಾತ್ಕಾಲಿಕ ವೀಸಾಗಳ ಅಡಿಯಲ್ಲಿ ದೀರ್ಘ ಸಮಯದಿಂದ ಇಲ್ಲಿ ಕಾನೂನುಬದ್ಧವಾಗಿ ಕೆಲಸ ಮಾಡುತ್ತಿರುವ ವಲಸಿಗರ ಮೇಲೆ ಹೆಚ್ಚುವರಿ ವೆಚ್ಚವನ್ನು ಹೊರಿಸಲಿದೆ. ಕೌಶಲ ಉಳ್ಳ ವಿದೇಶಿ ಉದ್ಯೋಗಿಗಳನ್ನು ಅವಲಂಬಿಸಿರುವ ಉದ್ದಿಮೆಗಳು, ವಿಶೇಷವಾಗಿ ತಂತ್ರಜ್ಞಾನ ಆಧಾರಿತ ಉದ್ಯಮಗಳ ಮೇಲೆ ಇದು ತೀವ್ರ ಪ್ರಭಾವ ಬೀರಲಿದೆ ಎಂಬ ಅಭಿಪ್ರಾಯವನ್ನು ವಲಸಿಗರ ಪರವಾಗಿ ಕೆಲಸ ಮಾಡುವ ಕಂಪನಿಗಳು ಮತ್ತು ಉದ್ಯಮಗಳ ಪ್ರತಿನಿಧಿಗಳು ವ್ಯಕ್ತಪಡಿಸಿದ್ದಾರೆ.

ಇದು ಕಾನೂನುಬದ್ಧ ವಲಸೆ ವ್ಯವಸ್ಥೆಯ ಮೇಲಿನ ವಿಲಕ್ಷಣ ದಾಳಿಯಾಗಿದ್ದು, ತಾತ್ಕಾಲಿಕ ವೀಸಾದಡಿ ಇಲ್ಲಿ ಕಾರ್ಯನಿರ್ವಹಿಸುತ್ತಿರುವವರ ಕುಟುಂಬಗಳಿಗೆ ತೊಂದರೆ ಉಂಟು ಮಾಡಲಿದೆ. ಈ ಕ್ರಮದಿಂದಾಗಿ ಹೊರದೇಶಗಳಿಂದ ಬಂದು ಇಲ್ಲಿ ವೈದ್ಯರು, ಶಿಕ್ಷಕರು ಮತ್ತು ವಿಜ್ಞಾನಿಗಳಾಗಿ ಕೆಲಸ ಮಾಡುತ್ತಿರುವವರು ವಾಪಸ್ ಅವರ ದೇಶಕ್ಕೆ ಹೋಗಬೇಕಾಗಿರುವುದರಿಂದ ಅವರ ಸಂಖ್ಯೆ ಕಡಿಮೆಯಾಗಲಿದೆ. ಅಲ್ಲದೇ ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಅಮೆರಿಕದ ಸ್ಪರ್ಧಾತ್ಮಕತೆ ಕುಂಠಿತವಾಗಲಿದೆ ಎಂದು, ಜಾಗತಿಕ ಆನ್‌ಲೈನ್ ಕಲಿಕಾ ಪ್ಲಾಟ್‌ಫಾರ್ಮ್ ಕೋರ್ಸೆರಾದ ಸಂಸ್ಥಾಪಕ, ಸ್ಟಾನ್‌ಫೋರ್ಡ್ ವಿವಿಯ ಕಂಪ್ಯೂಟರ್ ಸೈನ್ಸ್ ವಿಭಾಗದ ಅರೆಕಾಲಿಕ ಪ್ರಾಧ್ಯಾಪಕ ಆ್ಯಂಡ್ರ್ಯೂ ಎನ್‌ಜಿ ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ.

'ಕೆಲವು ಲೋಪಗಳನ್ನು ಸರಿಪಡಿಸುತ್ತೇವೆ ಎಂಬ ನೆಪವನ್ನು ಮುಂದಿಟ್ಟುಕೊಂಡು ದೇಶದಲ್ಲಿ ನಡೆಯುತ್ತಿರುವ ಪ್ರಮುಖ ಕೆಲಸಗಳಿಗೆ ಅಡ್ಡಿಪಡಿಸಲು ಕಂಡುಕೊಂಡ ಅತ್ಯಂತ ಕೆಟ್ಟ ಮಾರ್ಗ ಇದು' ಎಂದು ಉದ್ಯಮಿ ನಿಕ್ ಡೇವಿಡೊವ್ ಹೇಳಿದ್ದಾರೆ.

Publication Date
01/06/2026

# ನೌಕಾಪಡೆ: ಕೃಷ್ಣ ಸ್ವಾಮಿನಾಥನ್ ಅಧಿಕಾರ ಸ್ವೀಕಾರ



ಕೃಷ್ಣ ಸ್ವಾಮಿನಾಥನ್

**ನವದೆಹಲಿ (ಪಿಟಿಐ):** 'ಕಡಲ ರಕ್ಷಣೆಗೆ ಹೆಚ್ಚಿನ ಒತ್ತು ನೀಡಿ, ಕಾರ್ಯಾಚರಣೆಯ ಸನ್ನದ್ಧತೆಗೆ ಹೆಚ್ಚಿನ ಆದ್ಯತೆ ನೀಡಲಾಗುವುದು' ಎಂದು ಭಾರತೀಯ ನೌಕಾಪಡೆಯ ನೂತನ ಮುಖ್ಯಸ್ಥ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ತಿಳಿಸಿದ್ದಾರೆ.

ನವದೆಹಲಿಯ ನೌಕಾಸೇನೆಯ ಕಚೇರಿಯಲ್ಲಿ ಅಧಿಕಾರ ಸ್ವೀಕರಿಸಿ ಪತ್ರ ಕರ್ತರ ಜೊತೆ ಮಾತನಾಡಿದ ಅವರು, 'ಪ್ರಾದೇಶಿಕ ಭದ್ರತೆಯು ಸವಾಲು, ಸಂಕೀರ್ಣ ಹಾಗೂ ಅನಿರೀಕ್ಷಿತವಾಗಿದ್ದು, ದೇಶದ ಭದ್ರತೆ ಹಾಗೂ ಆರ್ಥಿಕ ಹಿತಾಸಕ್ತಿ ದೃಷ್ಟಿಯಿಂದ ಕಾರ್ಯಾಚರಣೆಗೆ ಸನ್ನದ್ಧವಾಗಿರಲು ಹೆಚ್ಚಿನ ಆದ್ಯತೆ ನೀಡಲಾಗುವುದು' ಎಂದು ತಿಳಿಸಿದ್ದಾರೆ.

'ಭಾರತೀಯ ನೌಕಾಪಡೆಯ ಸಾಮರ್ಥ್ಯ ವೃದ್ಧಿ ಹಾಗೂ ಆಧುನೀಕರಣಕ್ಕೆ ಸದಾ ಸಜ್ಜಾಗಿದೆ' ಎಂದು ಈ ವೇಳೆ ಮಾಹಿತಿ ನೀಡಿದ್ದಾರೆ.

ಇದುವರೆಗೂ ನೌಕಾಸೇನೆಯ ಮುಖ್ಯಸ್ಥರಾಗಿದ್ದ ದಿನೇಶ್ ಕುಮಾರ್ ತ್ರಿಪಾಠಿ ನಿವೃತ್ತರಾಗಿದ್ದು, ನೌಕಾ ಪಡೆಯ ಪಶ್ಚಿಮ ಕಮಾಂಡ್‌ಅನ್ನು ಮುನ್ನಡೆಸು-ತ್ತಿದ್ದ ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರಿಗೆ ಹೊಸ ಜವಾಬ್ದಾರಿ ನೀಡಲಾಗಿದೆ.

ಕೃಷ್ಣ ಸ್ವಾಮಿನಾಥನ್ ಅವರು ಬೆಂಗಳೂರಿನ ಬಿಷಪ್ ಕಾಟನ್ ಬಾಲಕರ ಶಾಲೆಯ ಹಳೆಯ ವಿದ್ಯಾರ್ಥಿ. ವಿಜಯಪುರದ ಸೈನಿಕ ಶಾಲೆಯಲ್ಲೂ ವ್ಯಾಸಂಗ ಮಾಡಿದ್ದಾರೆ.

# ರಾಜಾ ಸುಬ್ರಮಣಿ ನೂತನ ಸಿಡಿಎಸ್

**ನವದೆಹಲಿ (ಪಿಟಿಐ):** 'ಮಹತ್ವಾಕಾಂಕ್ಷಿಯ ಸೇನೆಯ ಸಂಯೋಜಿತ ವ್ಯವಸ್ಥೆ ಸ್ಥಾಪಿಸುವುದು ಪ್ರಾಥಮಿಕ ಆದ್ಯತೆಯಾಗಿ-ರಲಿದೆ' ಎಂದು ರಕ್ಷಣಾ ಪಡೆಗಳ ನೂತನ ಮುಖ್ಯಸ್ಥ (ಸಿಡಿಎಸ್) ಲೆಫ್ಟಿನೆಂಟ್ ಜನರಲ್ (ನಿವೃತ್ತ) ಎನ್.ಎಸ್. ರಾಜಾ ಸುಬ್ರಮಣಿ ತಿಳಿಸಿದ್ದಾರೆ.

ನವದೆಹಲಿಯಲ್ಲಿ ಭಾನುವಾರ ಸಿಡಿಎಸ್ ಆಗಿ ಅಧಿಕಾರ ಸ್ವೀಕರಿಸಿ ಮಾತನಾಡಿದ ಅವರು, 'ಮೂರು ಸೇನಾ ಪಡೆಗಳನ್ನು ಮತ್ತಷ್ಟು ಬಲಪಡಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದ್ದಾರೆ.

ಹಾಲಿ ಸಿಡಿಎಸ್ ಆಗಿರುವ ಜನರಲ್ ಅನಿಲ್ ಚೌಹಾಣ್ ಅವರ ಅಧಿಕಾರಾವಧಿ ಮೇ 30ರಂದು ಕೊನೆಗೊಂಡಿತ್ತು. ಜನರಲ್ ಸುಬ್ರಮಣಿ ಅವರು ಪಾಕಿಸ್ತಾನ, ಚೀನಾದ ತಜ್ಞರೆಂದು ಹೆಸರಾಗಿದ್ದು, ರಾಷ್ಟ್ರೀಯ ಭದ್ರತಾ ಮಂಡಳಿಯಲ್ಲಿ ಸೇನಾ ಸಲಹೆಗಾರರಾಗಿಯೂ ಕೆಲಸ ಮಾಡಿದ್ದರು.

ಕಳೆದ ವರ್ಷ ಜುಲೈ 31ರಂದು ಸೇನೆಯ ಉಪಮುಖ್ಯಸ್ಥರಾಗಿ ನಿವೃತ್ತಿ ಪಡೆದಿದ್ದರು.



ರಕ್ಷಣಾ ಪಡೆಗಳ ನೂತನ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡ ಲೆಫ್ಟಿನೆಂಟ್ ಜನರಲ್ ಎನ್.ಎಸ್. ರಾಜಾ ಸುಬ್ರಮಣಿ ಅವರು ಭಾನುವಾರ ನವದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಯೋಧರಿಂದ ಗೌರವ ರಕ್ಷೆ ಸ್ವೀಕರಿಸಿದರು —ಪಿಟಿಐ ಚಿತ್ರ

# 'ಭಾರತ–ನೇಪಾಳ: ಗಡಿ ವಿವಾದ ಬಗೆಹರಿಸಿಕೊಳ್ಳಲು ಒಪ್ಪಿಗೆ'



ಬಾಲೇಂದ್ರ ಶಾ

**ಕಠ್ಮಂಡು (ಪಿಟಿಐ):** 'ಭಾರತ ಮತ್ತು ನೇಪಾಳದ ಮಧ್ಯೆ ದೀರ್ಘಕಾಲದಿಂದ ಇರುವ ಗಡಿ ವಿವಾದವನ್ನು ಬಗೆಹರಿಸಿಕೊಳ್ಳಲು ಇತಿಹಾಸಕಾರರ, ಸರ್ವೇ ನಡೆಸುವವರ ಮತ್ತು ತಜ್ಞರ ಸಹಕಾರ ತೆಗೆದುಕೊಳ್ಳಲಾಗುವುದು. ಭಾರತ ಕೂಡ ಇದಕ್ಕೆ ಒಪ್ಪಿಕೊಂಡಿದೆ' ಎಂದು ನೇಪಾಳ ಪ್ರಧಾನಿ ಬಾಲೇಂದ್ರ ಶಾ ಅವರು ಸಂಸತ್ತಿಗೆ ತಿಳಿಸಿದರು.

ಕಾಲಾಪಾನಿ, ಲಿಪುಲೇಖ್ ಮತ್ತು ಲಿಂಪಿಯಾಧುರಾ ಪ್ರದೇಶಗಳ ಕುರಿತು ಭಾರತ ಮತ್ತು ನೇಪಾಳದ ಮಧ್ಯೆ ಗಡಿ ವಿವಾದವಿದೆ. ಈ ಪ್ರದೇಶಗಳು ನೇಪಾಳ, ಭಾರತ ಮತ್ತು ಟಿಬೆಟ್ ಗಡಿಗಳಿಗೆ ಹೊಂದಿಕೊಂಡಿವೆ. ಈ ಪ್ರದೇಶಗಳು ಉತ್ತರಾಖಂಡದ ಭಾಗಗಳು ಎಂಬುದು ಭಾರತದ ನಿಲುವು.

'ನಾವು ಭಾರತಕ್ಕೆ ಅಧಿಕೃತವಾಗಿಯೇ ಈ ಬಗ್ಗೆ ಪತ್ರ ಕಳುಹಿಸಿದ್ದೆವು. ಭಾರತದ ಕೂಡ ಇದಕ್ಕೆ ಪ್ರತಿಕ್ರಿಯೆ ನೀಡಿದೆ. ಭಾರತ ಮಾತ್ರವಲ್ಲ ನಾವು ಕೂಡ ಭಾರತದ ಕೆಲವು ಪ್ರದೇಶಗಳನ್ನು ಆಕ್ರಮಿಸಿಕೊಂಡಿದ್ದೇವೆ. ಪ್ರಧಾನಿ ಆದ ಬಳಿಕವೇ ನನಗೆ ಈ ಬಗ್ಗೆ ಮಾಹಿತಿ ತಿಳಿಯಿತು. ಸ್ನೇಹಪೂರ್ವಕವಾಗಿ ವಿವಾದ ಬಗೆಹರಿಸಿಕೊಳ್ಳಲು ನಾವುಗಳು ಒಪ್ಪಿಕೊಂಡಿದ್ದೇವೆ' ಎಂದು ಭಾನುವಾರ ತಿಳಿಸಿದರು.

'ನಾವೂ ಭಾರತದ ಪ್ರದೇಶವನ್ನು ಅತಿಕ್ರಮಣ ಮಾಡಿಕೊಂಡಿದ್ದೇವೆ' ಎಂಬ ಪ್ರಧಾನಿ ಶಾ ಅವರ ಹೇಳಿಕೆಯು ವಿವಾದಕ್ಕೆ ಕಾರಣವಾಯಿತು. ಬಳಿಕ, ಸ್ಪಷ್ಟನೆ ನೀಡಿದ ನೇಪಾಳದ ವಿದೇಶಾಂಗ ಸಚಿವಾಲಯವು, 'ಪ್ರಧಾನಿ ಶಾ ಅವರು ಪ್ರಸ್ತಾಪಿಸಿರುವುದು ಯಾರಿಗೂ ಸೇರದ ಎರಡೂ ದೇಶಕ್ಕೂ ಸೇರದ ಸ್ಥಳವಾಗಿದೆ' ಎಂದಿತು.

## ಸಿಂಗಪುರ ಓಪನ್ ಡಬಲ್ಸ್ ಪ್ರಶಸ್ತಿ ಗೆದ್ದ ಭಾರತದ ಜೋಡಿ

# ಸಾತ್ವಿಕ್–ಚಿರಾಗ್ ಮುಡಿಗೆ ಕಿರೀಟ




ಸಿಂಗಪುರ ಓಪನ್ ಡಬಲ್ಸ್ ಪ್ರಶಸ್ತಿ ಗೆದ್ದ ಭಾರತದ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಚಿತ್ರ: 'ಬ್ಯಾಡ್ಮಿಂಟನ್ ಫೋಟೊ'

**ಸಿಂಗಪುರ (ಪಿಟಿಐ):** ಭಾರತದ ತಾರಾ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಭಾನುವಾರ ಸಿಂಗಪುರ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ಇದರೊಂದಿಗೆ ಎರಡು ವರ್ಷಗಳ ಪ್ರಶಸ್ತಿಯ ಬರವನ್ನು ನೀಗಿಸಿಕೊಂಡರು.

ಏಷ್ಯನ್ ಗೇಮ್ಸ್ ಮತ್ತು ಕಾಮನ್‌ವೆಲ್ತ್ ಚಾಂಪಿಯನ್ ಆಗಿರುವ ಸಾತ್ವಿಕ್–ಚಿರಾಗ್ ಅವರು ಆರಂಭಿಕ ಗೇಮ್ ಹಿನ್ನಡೆಯಿಂದ ಚೇತರಿಸಿಕೊಂಡು 18-21, 21-17, 21-16ರಿಂದ ಇಂಡೊನೇಷ್ಯಾದ ಫಜರ್ ಅಲ್ಫಿಯಾನ್ ಹಾಗೂ ಮುಹಮ್ಮದ್ ಶೊಹಿಬುಲ್ ಫಿಕ್ರಿ ಅವರನ್ನು ಮಣಿಸಿದರು. ಇಲ್ಲಿ ಮೊದಲ ಬಾರಿ ಕಿರೀಟ ಗೆಲ್ಲುತ್ತಿದ್ದಂತೆ ಅವರು ಕುಣಿದು ಕುಪ್ಪಳಿಸಿದರು.

2024ರಲ್ಲಿ ಥಾಯ್ಲೆಂಡ್ ಓಪನ್ ಬಳಿಕ ಸಾತ್ವಿಕ್–ಚಿರಾಗ್ ಗೆದ್ದ ಮೊದಲ ಪ್ರಶಸ್ತಿ ಇದಾಗಿದೆ. ಕಳೆದ ಎರಡು ವರ್ಷಗಳಲ್ಲಿ ಅವರು ನಾಲ್ಕು ಟೂರ್ನಿಗಳಲ್ಲಿ ಪ್ರಶಸ್ತಿ ಸುತ್ತು ತಲುಪಿ, ರನ್ನರ್ಸ್ ಅಪ್‌ನೊಂದಿಗೆ ಅಭಿಯಾನ ಮುಗಿಸಿದ್ದರು. ಎರಡು ವಾರಗಳ ಹಿಂದೆ ಥಾಯ್ಲೆಂಡ್ ಓಪನ್ ಫೈನಲ್‌ನಲ್ಲೂ ಎಡವಿದ್ದರು.

ವಿಶ್ವದ ನಾಲ್ಕನೇ ಕ್ರಮಾಂಕದ ಚಿರಾಗ್ ಮತ್ತು ಸಾತ್ವಿಕ್, ಸಿಂಗಪುರ ಓಪನ್ ಪ್ರಶಸ್ತಿ ಗೆದ್ದ ಭಾರತದ ಮೊದಲ ಜೋಡಿ ಎಂಬ ಹಿರಿಮೆಗೂ ಪಾತ್ರರಾದರು. ಇದು ಅವರ ಬಿಡಬ್ಲ್ಯುಎಫ್ ಸೂಪರ್ 750 ಮಟ್ಟದ ಮೂರನೇ ಹಾಗೂ ವಿಶ್ವ ಪ್ರವಾಸದಲ್ಲಿ ಒಂಬತ್ತನೇ ಪ್ರತಿಷ್ಠಿತ ಕಿರೀಟವಾಗಿದೆ.

ಇಂಡೊನೇಷ್ಯಾದ ಈ ಜೋಡಿಯ ವಿರುದ್ಧ ಭಾರತದ ಆಟಗಾರರು 1-2 ಗೆಲುವಿನ ದಾಖಲೆಯೊಂದಿಗೆ ಫೈನಲ್‌ನಲ್ಲಿ ಕಣಕ್ಕಿಳಿದಿದ್ದರು. ಜನವರಿಯಲ್ಲಿ ನಡೆದ ಮಲೇಷ್ಯಾ ಓಪನ್ ಕ್ವಾರ್ಟರ್ ಫೈನಲ್‌ನಲ್ಲಿ ಇದೇ ಆಟಗಾರರ ವಿರುದ್ಧ ಸಾತ್ವಿಕ್–ಚಿರಾಗ್ ನೇರ ಗೇಮ್‌ಗಳಿಂದ ಮುಗ್ಗರಿಸಿದ್ದರು.

## ❖ ಜುಲೈ 10ರಿಂದ ‘ವಿಜಿ ಜಿ ರಾಮ್ ಜಿ’ ಜಾರಿ: ಗ್ರಾಮೀಣ ಉದ್ಯೋಗ ಯೋಜನೆಗೆ ಹೊಸ ರೂಪ

**ಸುದ್ದಿಯಲ್ಲೇಕೆ?**

ಕೇಂದ್ರ ಸರ್ಕಾರವು **ನರೇಗಾ ಕಾಯ್ದೆಯನ್ನು ರದ್ದುಗೊಳಿಸಿ**, ಅದರ ಬದಲಿಗೆ ಹೊಸ ಗ್ರಾಮೀಣ ಉದ್ಯೋಗ ಯೋಜನೆಯಾದ **‘ವಿಜಿ ಜಿ ರಾಮ್ ಜಿ’** ಅನ್ನು **ಜುಲೈ 10ರಿಂದ ಜಾರಿಗೊಳಿಸಲು** ಸೂಚನೆ ನೀಡಿದೆ. ಕರ್ನಾಟಕ ಗ್ರಾಮೀಣಾಭಿವೃದ್ಧಿ ಇಲಾಖೆ, ಯೋಜನೆ ಜಾರಿಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯಿತಿಗಳಿಗೆ ಸಿದ್ಧತೆ ಆರಂಭಿಸಲು ನಿರ್ದೇಶನ ನೀಡಿದೆ.

**<u>ಪ್ರಮುಖ ಅಂಶಗಳು:</u>**

| ವಿಷಯ | ವಿವರ ಮತ್ತು ಆಡಳಿತಾತ್ಮಕ ಹಿನ್ನೆಲೆ |
|---|---|
| **ಹೊಸ ಯೋಜನೆಯ ಹೆಸರು** | **‘ವಿಜಿ ಜಿ ರಾಮ್ ಜಿ’** ಯೋಜನೆ |
| **ಜಾರಿಗೆ ಬರುವ ದಿನಾಂಕ** | **ಜುಲೈ 10, 2026** ರಿಂದ ಅಧಿಕೃತವಾಗಿ ಅನುಷ್ಠಾನಕ್ಕೆ ಬರಲಿದೆ. |
| **ಹಳೆಯ ವ್ಯವಸ್ಥೆ (ಆಧಾರ)** | ಕೇಂದ್ರ ಸರ್ಕಾರದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ (MGNREGA - ನರೇಗಾ) ಅಡಿಯಲ್ಲಿ ಪ್ರತಿ ಕುಟುಂಬಕ್ಕೆ ವರ್ಷಕ್ಕೆ **100 ದಿನಗಳ** ಉದ್ಯೋಗ ನೀಡುವ ನಿಯಮವಿತ್ತು. |
| **ಹೊಸ ಭರವಸೆ (ಉದ್ಯೋಗ ಹೆಚ್ಚಳ)** | ನೂತನ ಯೋಜನೆಯಡಿ ಅರ್ಹ ಗ್ರಾಮೀಣ ಕುಟುಂಬಕ್ಕೆ ವರ್ಷಕ್ಕೆ **ಕನಿಷ್ಠ 125 ದಿನಗಳ** ಉದ್ಯೋಗವನ್ನು ಖಾತರಿಪಡಿಸಲಾಗುತ್ತದೆ (ಹೆಚ್ಚುವರಿ 25 ದಿನಗಳ ಉದ್ಯೋಗದ ಸಂಪೂರ್ಣ ವೆಚ್ಚವನ್ನು ರಾಜ್ಯ ಸರ್ಕಾರವೇ ಭರಿಸುತ್ತದೆ). |
| **ಮುಖ್ಯ ಉದ್ದೇಶಗಳು** | ಕೇವಲ ಮಾನವ ದಿನಗಳ ಸೃಷ್ಟಿಯಷ್ಟೇ ಅಲ್ಲದೆ, ಗ್ರಾಮೀಣ ಉದ್ಯೋಗ ಸೃಷ್ಟಿ, ಸುಸ್ಥಿರ **ಕೃಷಿ ಆಧಾರಿತ ಆಸ್ತಿ ನಿರ್ಮಾಣ** ಮತ್ತು **ಜಲ ಸಂರಕ್ಷಣೆ** (ಹೂಳೆತ್ತುವುದು, ಅಂತರ್ಜಲ ಮರುಪೂರಣ, ಕಲ್ಯಾಣಿ ಪುನಶ್ಚೇತನ) ಕಾಮಗಾರಿಗಳಿಗೆ ಆದ್ಯತೆ ನೀಡುವುದು. |
| **ಅನುಷ್ಠಾನದ ನೋಡಲ್ ಇಲಾಖೆ** | **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (RDPR)**, ಕರ್ನಾಟಕ ಸರ್ಕಾರ. |
| **ಜಿಲ್ಲಾ ಮಟ್ಟದ ಮೇಲ್ವಿಚಾರಣೆ** | ಆಯಾ ಜಿಲ್ಲೆಯ **ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು (CEO)** ಈ ಯೋಜನೆಯ ಪ್ರಗತಿ ಮತ್ತು ಪಾರದರ್ಶಕತೆಯ ನೇರ ಉಸ್ತುವಾರಿ ವಹಿಸಲಿದ್ದಾರೆ. |

### ಯೋಜನೆಯ ಮುಖ್ಯ ವೈಶಿಷ್ಟ್ಯಗಳು

### 1. 100 ದಿನದಿಂದ 125 ದಿನಗಳ ಉದ್ಯೋಗ ಭರವಸೆ

ಹಳೆಯ ನರೇಗಾ ಯೋಜನೆಯಡಿ ಗ್ರಾಮೀಣ ಕುಟುಂಬಗಳಿಗೆ ವರ್ಷಕ್ಕೆ **100 ದಿನಗಳ ಉದ್ಯೋಗ** ನೀಡಲಾಗುತ್ತಿತ್ತು. ಹೊಸ ಯೋಜನೆಯಡಿ ಇದನ್ನು **125 ದಿನಗಳಿಗೆ ಹೆಚ್ಚಿಸಲು** ಉದ್ದೇಶಿಸಲಾಗಿದೆ.

Dr. Rajkumar IAS/KAS Academy

### 2. ಕೃಷಿ ಅವಧಿಗೆ ಪೂರಕವಾಗಿ ಉದ್ಯೋಗ

ಕೃಷಿ ಚಟುವಟಿಕೆಗಳು ಕಡಿಮೆಯಾಗುವ ಸಮಯದಲ್ಲಿ ಗ್ರಾಮೀಣ ಜನರಿಗೆ ಉದ್ಯೋಗ ಸಿಗುವಂತೆ ಯೋಜನೆ ರೂಪಿಸಲಾಗಿದೆ. ಇದರ ಮೂಲಕ ಕೃಷಿ ಅವಲಂಬಿತ ಕುಟುಂಬಗಳಿಗೆ ಹೆಚ್ಚುವರಿ ಆದಾಯ ಮೂಲ ಸಿಗಬಹುದು.

### 3. ಗುಂಡಿ ತೋಡುವ ಕೆಲಸಕ್ಕಿಂತ ಉತ್ಪಾದಕ ಆಸ್ತಿಗಳಿಗೆ ಆದ್ಯತೆ

ಹಳೆಯ ಯೋಜನೆಯಲ್ಲಿದ್ದಂತೆ ಕೇವಲ ಗುಂಡಿ ತೋಡುವಂತಹ ಕೆಲಸಗಳಿಗೆ ಸೀಮಿತವಾಗದೆ, ಹೊಸ ಯೋಜನೆ ಗ್ರಾಮೀಣ ಪ್ರದೇಶದಲ್ಲಿ ಉಪಯುಕ್ತ ಆಸ್ತಿಗಳನ್ನು ನಿರ್ಮಿಸಲು ಒತ್ತು ನೀಡುತ್ತದೆ.

ಉದಾಹರಣೆಗಳು:

- ಜಲ ಸಂರಕ್ಷಣಾ ಕಾಮಗಾರಿಗಳು
- ಗ್ರಾಮೀಣ ರಸ್ತೆಗಳು
- ಕೃಷಿ ಗೋದಾಮುಗಳು
- ಮಾರುಕಟ್ಟೆ ಸಂಪರ್ಕ ಮೂಲಸೌಕರ್ಯ
- ಕೆರೆ, ಕಾಲುವೆ, ಬಂಡೆ, ಚೆಕ್‌ಡ್ಯಾಂ ಮುಂತಾದ ಕೆಲಸಗಳು

### ‘ಕೃಷಿ ಉತ್ಕರ್ಷ’ ಅಂಶ

ವರದಿ ಪ್ರಕಾರ, ಕೃಷಿ ಅಭಿವೃದ್ಧಿಗೆ ನೆರವಾಗುವಂತೆ **60 ದಿನಗಳ ವಿಶೇಷ ಕೆಲಸ ಸೃಷ್ಟಿ**ಗೆ ಒತ್ತು ನೀಡಲಾಗಿದೆ. ಇದು ರೈತರು ಮತ್ತು ಗ್ರಾಮೀಣ ಕಾರ್ಮಿಕರಿಗೆ ನೇರವಾಗಿ ಸಹಕಾರಿಯಾಗುವ ಸಾಧ್ಯತೆ ಇದೆ.

### ಸಾಧ್ಯ ಪ್ರಯೋಜನಗಳು

- ಕೃಷಿ ಭೂಮಿಯ ಉತ್ಪಾದಕತೆ ಹೆಚ್ಚಳ
- ಮಣ್ಣಿನ ತೇವಾಂಶ ಸಂರಕ್ಷಣೆ
- ನೀರಿನ ಸಂಗ್ರಹಣೆ
- ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ
- ಕೃಷಿ ಮಾರುಕಟ್ಟೆ ಸಂಪರ್ಕ ಸುಧಾರಣೆ

ಪಾರದರ್ಶಕತೆಗಾಗಿ ಹೊಸ ಕ್ರಮಗಳು

ಹೊಸ ಯೋಜನೆಯಲ್ಲಿ ಪಾರದರ್ಶಕತೆ ಹೆಚ್ಚಿಸಲು **ಕಾರ್ಮಿಕರ ಹಾಜರಾತಿಗೆ ಬಯೋಮೆಟ್ರಿಕ್ ವ್ಯವಸ್ಥೆ** ಜಾರಿಗೊಳಿಸುವ ಪ್ರಸ್ತಾಪ ಇದೆ.

### ಇದರ ಉದ್ದೇಶ

- ನಕಲಿ ಹಾಜರಾತಿ ತಡೆ
- ನಿಜವಾದ ಕಾರ್ಮಿಕರಿಗೆ ಮಾತ್ರ ಕೂಲಿ ಪಾವತಿ
- ಕೆಲಸದ ದಿನಗಳ ನಿಖರ ದಾಖಲೆ
- ಭ್ರಷ್ಟಾಚಾರ ಮತ್ತು ಅಕ್ರಮ ಕಡಿತ
- ಜಿಯೋ-ಟ್ಯಾಗಿಂಗ್ ಮತ್ತು ಡಿಜಿಟಲ್ ಮೇಲ್ವಿಚಾರಣೆಗೆ ಸಹಕಾರ

Dr. Rajkumar IAS/KAS Academy

## ಅನುದಾನ ಬಳಕೆ ಕುರಿತು ಸೂಚನೆ

ವರದಿಯ ಪ್ರಕಾರ, ನರೇಗಾ ಅಡಿಯಲ್ಲಿ ಬಾಕಿ ಇರುವ ಸಾಮಗ್ರಿ ವೆಚ್ಚದ ಬಿಲ್‌ಗಳನ್ನು ಪಾವತಿಸಲು ಗ್ರಾಮ ಪಂಚಾಯಿತಿಗಳಿಗೆ ಹಣ ಬಿಡುಗಡೆ ಮಾಡಲಾಗಿದೆ. ಈ ಅನುದಾನವನ್ನು ವಿಳಂಬ ಮಾಡದೆ ಖರ್ಚು ಮಾಡಲು ಸೂಚಿಸಲಾಗಿದೆ.

### ಮುಖ್ಯ ಸೂಚನೆಗಳು

- ಜೂನ್ 8ರೊಳಗೆ ಉಳಿಕೆ ಅನುದಾನವನ್ನು ಬಳಸಬೇಕು.
- ಸಾಮಗ್ರಿ ವೆಚ್ಚದ ಬಾಕಿ ಪಾವತಿಗಳನ್ನು ಪೂರ್ಣಗೊಳಿಸಬೇಕು.
- ಹಣ ಬಳಕೆ ಪ್ರಮಾಣಪತ್ರವನ್ನು ಸಮಯಕ್ಕೆ ಸಲ್ಲಿಸಬೇಕು.
- ಉಳಿಕೆ ಹಣ ಬಳಕೆಯಾಗದಿದ್ದರೆ ಅದನ್ನು ಹಿಂಪಡೆಯಲಾಗಬಹುದು.

## ಏಪ್ರಿಲ್‌ನಲ್ಲಿ ಮಾನವ ದಿನಗಳ ಗುರಿ ಸಾಧನೆ ಕಡಿಮೆ

ವರದಿ ಪ್ರಕಾರ, ಏಪ್ರಿಲ್ ತಿಂಗಳಲ್ಲಿ ಗ್ರಾಮೀಣ ಉದ್ಯೋಗ ಸೃಷ್ಟಿಗೆ **1.30 ಕೋಟಿ ಮಾನವ ದಿನಗಳ ಗುರಿ** ನಿಗದಿಯಾಗಿತ್ತು. ಆದರೆ ಕೆಲವು ಜಿಲ್ಲೆಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ ಕೆಲಸ ಸೃಷ್ಟಿಯಾಗಿಲ್ಲ.

### ಇದು ಏನು ಸೂಚಿಸುತ್ತದೆ?

- ಯೋಜನೆಯ ನೆಲಮಟ್ಟದ ಜಾರಿಯಲ್ಲಿ ದುರ್ಬಲತೆ ಇದೆ.
- ಗ್ರಾಮ ಪಂಚಾಯಿತಿಗಳ ಯೋಜನಾ ಸಾಮರ್ಥ್ಯ ಸುಧಾರಿಸಬೇಕು.
- ಬೇಡಿಕೆ ಆಧಾರಿತ ಉದ್ಯೋಗ ಸೃಷ್ಟಿಗೆ ಹೆಚ್ಚಿನ ಒತ್ತು ಅಗತ್ಯ.
- ಕಾರ್ಮಿಕ ನೋಂದಣಿ, ಕಾಮಗಾರಿ ಅನುಮೋದನೆ ಮತ್ತು ಕೂಲಿ ಪಾವತಿಯಲ್ಲಿ ವೇಗ ಬೇಕು.

### ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ (MGNREGA):

| ಅಂಶ | ವಿವರ ಮತ್ತು ಸಾಂಸ್ಥಿಕ ಹಿನ್ನೆಲೆ |
|---|---|
| **ಪೂರ್ಣ ಹೆಸರು** | **ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ** (ಮೂಲ ಹೆಸರು: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ - NREGA). |
| **ಶಾಸನಾತ್ಮಕ ವರ್ಷ** | **2005** ರಲ್ಲಿ ಸಂಸತ್ತಿನಲ್ಲಿ ಕಾಯ್ದೆ ಪಾಸಾಯಿತು (ಫೆಬ್ರವರಿ 2, 2006 ರಂದು ಜಾರಿಗೆ ಬಂದು, ಅಕ್ಟೋಬರ್ 2, 2009 ರಂದು ಮರುನಾಮಕರಣ ಮಾಡಲಾಯಿತು). |
| **ಮೂಲ ಉದ್ದೇಶ** | ಗ್ರಾಮೀಣ ಭಾಗದ ಪ್ರತಿ ಕುಟುಂಬದ ಕನಿಷ್ಠ ಒಬ್ಬ ವಯಸ್ಕ ಸದಸ್ಯನಿಗೆ ಒರಟು ದೈಹಿಕ ಶ್ರಮದ (Unskilled Manual Work) ಕೆಲಸ ನೀಡಿ, ಆ ಮೂಲಕ **ಗ್ರಾಮೀಣ ಜೀವನದ ಭದ್ರತೆಯನ್ನು** ಹೆಚ್ಚಿಸುವುದು. |
| **ಉದ್ಯೋಗ ದಿನಗಳು** | ಒಂದು ಆರ್ಥಿಕ ವರ್ಷದಲ್ಲಿ ಪ್ರತಿ ಗ್ರಾಮೀಣ ಕುಟುಂಬಕ್ಕೆ ಕನಿಷ್ಠ **100 ದಿನಗಳ** ಉದ್ಯೋಗದ ಭರವಸೆ (ಬರಗಾಲ ಪೀಡಿತ ಪ್ರದೇಶಗಳಲ್ಲಿ ಇದನ್ನು 150 ದಿನಗಳಿಗೆ ವಿಸ್ತರಿಸುವ ಅವಕಾಶವಿದೆ). |

Dr. Rajkumar IAS/KAS Academy

| ಅಂಶ | ವಿವರ ಮತ್ತು ಸಾಂಸ್ಥಿಕ ಹಿನ್ನೆಲೆ |
|---|---|
| **ಯೋಜನೆಯ ಸ್ವರೂಪ** | **ಹಕ್ಕು ಆಧಾರಿತ (Rights-Based) ಯೋಜನೆ:** ಕೆಲಸ ಕೇಳುವುದು ನಾಗರಿಕರ ಕಾನೂನಾತ್ಮಕ ಹಕ್ಕಾಗಿದೆ. ಅರ್ಜಿ ಸಲ್ಲಿಸಿದ 15 ದಿನಗಳಲ್ಲಿ ಕೆಲಸ ನೀಡದಿದ್ದರೆ ನಿರುದ್ಯೋಗ ಭತ್ಯೆ (Unemployment Allowance) ಪಡೆಯುವ ಹಕ್ಕಿರುತ್ತದೆ. |
| **ಪ್ರಮುಖ ವ್ಯವಸ್ಥೆಗಳು** | **1. ಬೇಡಿಕೆ ಆಧಾರಿತ ಕೆಲಸ:** ಗ್ರಾಮ ಪಂಚಾಯಿತಿಯಲ್ಲಿ ನೋಂದಾಯಿಸಿ ಜಾಬ್ ಕಾರ್ಡ್ (Job Card) ಪಡೆದ ನಂತರ ಬೇಡಿಕೆಗೆ ತಕ್ಕಂತೆ ಉದ್ಯೋಗ ಸೃಷ್ಟಿ.<br><br>**2. ಕೂಲಿ ಪಾವತಿ:** ಬ್ಯಾಂಕ್ ಅಥವಾ ಪೋಸ್ಟ್ ಆಫೀಸ್ ಖಾತೆಗಳ ಮೂಲಕ ನೇರ ನಗದು ವರ್ಗಾವಣೆ (DBT).<br><br>**3. ಸಾಮಾಜಿಕ ಲೆಕ್ಕಪರಿಶೋಧನೆ (Social Audit):** ಗ್ರಾಮ ಸಭೆಯ ಮೂಲಕ ಕಾಮಗಾರಿಗಳ ಪಾರದರ್ಶಕತೆ ಪರಿಶೀಲನೆ. |

**ಸಕಾರಾತ್ಮಕ ಪರಿಣಾಮಗಳು**

1. **ಗ್ರಾಮೀಣ ಆದಾಯ ಭದ್ರತೆ**
   ಕೃಷಿ ಅವಧಿ ಹೊರತುಪಡಿಸಿ ಗ್ರಾಮೀಣ ಕಾರ್ಮಿಕರಿಗೆ ಆದಾಯ ಮೂಲ ಒದಗಿಸುತ್ತದೆ.
2. **ವಲಸೆ ಕಡಿತ**
   ಗ್ರಾಮದಲ್ಲೇ ಉದ್ಯೋಗ ಸಿಕ್ಕರೆ ನಗರಗಳಿಗೆ ಬಲವಂತದ ವಲಸೆ ಕಡಿಮೆಯಾಗಬಹುದು.
3. **ಕೃಷಿ ಮೂಲಸೌಕರ್ಯ ಅಭಿವೃದ್ಧಿ**
   ಜಲ ಸಂರಕ್ಷಣೆ, ರಸ್ತೆ, ಗೋದಾಮುಗಳಂತಹ ಆಸ್ತಿಗಳು ಕೃಷಿಗೆ ನೇರ ನೆರವು ನೀಡುತ್ತವೆ.
4. **ಗ್ರಾಮೀಣ ಆರ್ಥಿಕತೆಗೆ ಚೈತನ್ಯ**
   ಕೂಲಿ ಆದಾಯ ಗ್ರಾಮೀಣ ಮಾರುಕಟ್ಟೆಯಲ್ಲಿ ಖರ್ಚಾಗಿ ಸ್ಥಳೀಯ ಆರ್ಥಿಕ ಚಟುವಟಿಕೆ ಹೆಚ್ಚಿಸುತ್ತದೆ.
5. **ಪಾರದರ್ಶಕತೆ ಹೆಚ್ಚಳ**
   ಬಯೋಮೆಟ್ರಿಕ್ ಮತ್ತು ಡಿಜಿಟಲ್ ವ್ಯವಸ್ಥೆಯಿಂದ ಅಕ್ರಮ ಕಡಿಮೆಯಾಗಬಹುದು.

**ಪ್ರಮುಖ ಸವಾಲುಗಳು**

- ಸಮಯಕ್ಕೆ ಕೂಲಿ ಪಾವತಿ ಖಚಿತಪಡಿಸುವುದು
- ಬಯೋಮೆಟ್ರಿಕ್ ವ್ಯವಸ್ಥೆಯಿಂದ ಡಿಜಿಟಲ್ ಹೊರಗುಳಿಕೆ ಆಗದಂತೆ ನೋಡಿಕೊಳ್ಳುವುದು
- ಗ್ರಾಮ ಪಂಚಾಯಿತಿಗಳ ತಾಂತ್ರಿಕ ಸಾಮರ್ಥ್ಯ ಹೆಚ್ಚಿಸುವುದು
- ಬಾಕಿ ಬಿಲ್‌ಗಳು ಮತ್ತು ಅನುದಾನ ಬಳಕೆ ಸಮಸ್ಯೆ ಪರಿಹರಿಸುವುದು
- ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದು
- ಕೆಲಸದ ಗುಣಮಟ್ಟ ಮತ್ತು ಆಸ್ತಿಗಳ ದೀರ್ಘಕಾಲೀನ ಉಪಯುಕ್ತತೆ ಖಚಿತಪಡಿಸುವುದು

Dr. Rajkumar IAS/KAS Academy

## ❖ ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳ ಸಂಖ್ಯೆ 48ಕ್ಕೆ ಏರಿಕೆ

**ಸುದ್ದಿಯಲ್ಲೇಕೆ?**

ಕರ್ನಾಟಕ ಹೈಕೋರ್ಟ್‌ನ ನೂತನ ನ್ಯಾಯಮೂರ್ತಿಗಳಾಗಿ **ಮೂರು ಜಿಲ್ಲಾ ನ್ಯಾಯಾಧೀಶರು ಪದೋನ್ನತಿ ಹೊಂದಿದ್ದು**, ಅವರ ಪ್ರಮಾಣವಚನದ ನಂತರ ಹೈಕೋರ್ಟ್ ನ್ಯಾಯಮೂರ್ತಿಗಳ ಕಾರ್ಯನಿರ್ವಹಣೆಯ ಸಂಖ್ಯೆ **48ಕ್ಕೆ ಏರಿದೆ**.

**ನೂತನ ನ್ಯಾಯಮೂರ್ತಿಗಳು**

| ನ್ಯಾಯಮೂರ್ತಿಗಳ ಹೆಸರು | ಪ್ರಸ್ತುತ ಹುದ್ದೆ / ವಿವರ | ಹಿನ್ನೆಲೆ ಮತ್ತು ಸೇವಾ ವಿವರ |
|---|---|---|
| **ನ್ಯಾಯಮೂರ್ತಿ ರಾಜೇಶ್ವರಿ ನಾರಾಯಣ ಹೆಗಡೆ** | ಕರ್ನಾಟಕ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿ | ಈ ಹಿಂದೆ ದಾವಣಗೆರೆ ಮತ್ತು ಚಿಕ್ಕಮಗಳೂರಿನಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದ್ದರು. ಮಾರ್ಚ್ 17, 2028ರವರೆಗೆ ಇವರ ಅವಧಿ ಇರಲಿದೆ. |
| **ನ್ಯಾಯಮೂರ್ತಿ ಕೆಡಂಬಾಡಿ ಗಣೇಶ್ ಶಾಂತಿ** | ಕರ್ನಾಟಕ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿ | ಸೇನಾ ಹಿರಿಯ ಅಧಿಕಾರಿಯ ಪುತ್ರಿಯಾದ ಇವರು, ಈ ಹಿಂದೆ ಧಾರವಾಡ ಮತ್ತು ಬಳ್ಳಾರಿಯಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸಿದ್ದರು. |
| **ನ್ಯಾಯಮೂರ್ತಿ ಶ್ರೀ ಬ್ಯಂಗೇಶ್ ಮಹದೇವಪ್ಪ** | ಕರ್ನಾಟಕ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿ | ಈ ಹಿಂದೆ ಕೊಡಗು ಮತ್ತು ಮಂಡ್ಯ ಜಿಲ್ಲೆಯ ಪ್ರಧಾನ ಜಿಲ್ಲಾ ನ್ಯಾಯಾಧೀಶರಾಗಿ ಹಾಗೂ ಕರ್ನಾಟಕ ನ್ಯಾಯಾಂಗ ಅಕಾಡೆಮಿಯ ಹಿರಿಯ ಬೋಧಕರಾಗಿ ಸೇವೆ ಸಲ್ಲಿಸಿದ್ದರು. |

Dr. Rajkumar IAS/KAS Academy

**ಪ್ರಮುಖ ಅಂಶಗಳು**

- ಮೂವರು ಜಿಲ್ಲಾ ನ್ಯಾಯಾಧೀಶರು ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳಾಗಿ ಪದೋನ್ನತಿ ಪಡೆದಿದ್ದಾರೆ.
- ಪ್ರಮಾಣವಚನದ ನಂತರ ಹೈಕೋರ್ಟ್ ನ್ಯಾಯಮೂರ್ತಿಗಳ ಸಂಖ್ಯೆ **48ಕ್ಕೆ** ಏರಿದೆ.
- ಕರ್ನಾಟಕ ಹೈಕೋರ್ಟ್‌ನ ಮಂಜೂರಾತಿ ನ್ಯಾಯಮೂರ್ತಿಗಳ ಸಂಖ್ಯೆ **62**.
- ಬೆಂಗಳೂರು ಪ್ರಧಾನ ಪೀಠದ ಜೊತೆಗೆ **ಧಾರವಾಡ ಮತ್ತು ಕಲಬುರಗಿ ಪೀಠಗಳು** ಕರ್ನಾಟಕ ಹೈಕೋರ್ಟ್‌ನ ಭಾಗವಾಗಿವೆ.
- ನೂತನ ನ್ಯಾಯಮೂರ್ತಿಗಳು ಸಂವಿಧಾನದ ಚೌಕಟ್ಟಿನಲ್ಲಿ ಕರ್ತವ್ಯ ನಿರ್ವಹಿಸುವುದಾಗಿ ತಿಳಿಸಿದ್ದಾರೆ.

**ಏಕೆ ಮಹತ್ವದ್ದು?**

- ನ್ಯಾಯಮೂರ್ತಿಗಳ ಸಂಖ್ಯೆ ಹೆಚ್ಚಳದಿಂದ ಪ್ರಕರಣಗಳ ಬಾಕಿ ನಿವಾರಣೆಗೆ ಸಹಕಾರಿಯಾಗಬಹುದು.
- ನ್ಯಾಯಾಂಗದ ಕಾರ್ಯಕ್ಷಮತೆ ಮತ್ತು ವೇಗದ ನ್ಯಾಯ ವಿತರಣೆಗೆ ಇದು ಪೂರಕ.

- ಜಿಲ್ಲಾ ನ್ಯಾಯಾಂಗದಿಂದ ಹೈಕೋರ್ಟ್‌ಗೆ ಪದೋನ್ನತಿ ನೀಡುವುದು ನ್ಯಾಯಾಂಗ ಅನುಭವಕ್ಕೆ ಮಾನ್ಯತೆ ನೀಡುತ್ತದೆ.
- ಆದರೆ ಮಂಜೂರಾತಿ ಸಂಖ್ಯೆ 62 ಇದ್ದರೂ ಕಾರ್ಯನಿರ್ವಹಿಸುವ ನ್ಯಾಯಮೂರ್ತಿಗಳು 48 ಮಾತ್ರ ಇರುವುದರಿಂದ ಇನ್ನೂ ಖಾಲಿ ಹುದ್ದೆಗಳಿವೆ.

**ಸಂವಿಧಾನಾತ್ಮಕ ಸಂಪರ್ಕ**

| ಸಂವಿಧಾನದ ವಿಧಿ | ಅಧಿಕೃತ ವಿಷಯ ಮತ್ತು ಆಡಳಿತಾತ್ಮಕ ವಿವರ |
|---|---|
| ವಿಧಿ 214 | **ರಾಜ್ಯಗಳಿಗಾಗಿ ಹೈಕೋರ್ಟ್‌ಗಳು:** ಪ್ರತಿ ರಾಜ್ಯಕ್ಕೂ ಒಂದು ಹೈಕೋರ್ಟ್ ಇರಬೇಕು ಎಂದು ಈ ವಿಧಿ ತಿಳಿಸುತ್ತದೆ. *(ಗಮನಿಸಿ: 7ನೇ ಸಂವಿಧಾನ ತಿದ್ದುಪಡಿ 1956ರ ಪ್ರಕಾರ, ಸಂಸತ್ತು ಎರಡು ಅಥವಾ ಅದಕ್ಕಿಂತ ಹೆಚ್ಚು ರಾಜ್ಯಗಳಿಗೆ ಒಂದೇ ಜಂಟಿ ಹೈಕೋರ್ಟ್ ಅನ್ನು ಸ್ಥಾಪಿಸಬಹುದು).* |
| ವಿಧಿ 215 | **ದಾಖಲೆಗಳ ನ್ಯಾಯಾಲಯ (Court of Record):** ಹೈಕೋರ್ಟ್ ಒಂದು ದಾಖಲೆಗಳ ನ್ಯಾಯಾಲಯವಾಗಿರುತ್ತದೆ. ಇದು ತನ್ನ ನಿಂದನೆಗಾಗಿ ಶಿಕ್ಷಿಸುವ ಅಧಿಕಾರವನ್ನು ಹೊಂದಿರುತ್ತದೆ. |
| ವಿಧಿ 216 | **ಹೈಕೋರ್ಟ್‌ಗಳ ರಚನೆ:** ಪ್ರತಿ ಹೈಕೋರ್ಟ್ ಒಬ್ಬ ಮುಖ್ಯ ನ್ಯಾಯಮೂರ್ತಿ ಮತ್ತು ರಾಷ್ಟ್ರಪತಿಗಳು ಕಾಲಕಾಲಕ್ಕೆ ಅಗತ್ಯವೆಂದು ಭಾವಿಸುವ ಇತರ ನ್ಯಾಯಮೂರ್ತಿಗಳನ್ನು ಒಳಗೊಂಡಿರುತ್ತದೆ. |

## ❖ ಭಾರತ–ಅಮೆರಿಕ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಬಹುತೇಕ ಅಂತಿಮ

**ಸುದ್ದಿಯಲ್ಲೇಕೆ?**

ಭಾರತ ಮತ್ತು ಅಮೆರಿಕ ನಡುವಿನ **ಮೊದಲ ಹಂತದ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ (Bilateral Trade Agreement - BTA)** ಬಹುತೇಕ ಅಂತಿಮ ಹಂತದಲ್ಲಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ **ಪಿಯೂಷ್ ಗೋಯಲ್** ತಿಳಿಸಿದ್ದಾರೆ.

**ಪ್ರಮುಖ ಅಂಶಗಳು**

| ವಿಷಯ | ವಿವರ |
|---|---|
| ಸಂಬಂಧಿತ ದೇಶಗಳು | ಭಾರತ ಮತ್ತು ಅಮೆರಿಕ |
| ಒಪ್ಪಂದ | ದ್ವಿಪಕ್ಷೀಯ ವ್ಯಾಪಾರ ಒಪ್ಪಂದ — BTA |
| ಪ್ರಸ್ತುತ ಸ್ಥಿತಿ | ಬಹುತೇಕ ಅಂತಿಮ ಹಂತ |
| ಅಮೆರಿಕದ ತಂಡ | ಮಾತುಕತೆಗಾಗಿ ಭಾರತಕ್ಕೆ ಆಗಮಿಸಿದೆ |
| ಮಾತುಕತೆ ಅವಧಿ | ಗುರುವಾರದವರೆಗೆ ಮುಂದುವರಿಯುವ ಸಾಧ್ಯತೆ |
| ಪ್ರಮುಖ ಬಾಕಿ ವಿಷಯಗಳು | ಕೃಷಿ, ಡೈರಿ, ಸುಂಕ ಮತ್ತು ಮಾರುಕಟ್ಟೆ ಪ್ರವೇಶ |

**ಏಕೆ ಮಹತ್ವದ್ದು?**

- ಭಾರತ–ಅಮೆರಿಕ ವ್ಯಾಪಾರ ಸಂಬಂಧಗಳು ಮತ್ತಷ್ಟು ಬಲಗೊಳ್ಳಬಹುದು.
- ಭಾರತೀಯ ಉತ್ಪನ್ನಗಳಿಗೆ ಅಮೆರಿಕ ಮಾರುಕಟ್ಟೆಯಲ್ಲಿ ಉತ್ತಮ ಪ್ರವೇಶ ಸಿಗಬಹುದು.
- ಸುಂಕ ಕಡಿತದಿಂದ ರಫ್ತು ವೃದ್ಧಿಯಾಗುವ ಸಾಧ್ಯತೆ ಇದೆ.

Dr. Rajkumar IAS/KAS Academy

- ಕೃಷಿ, ಡೈರಿ, ಔಷಧಿ, ತಂತ್ರಜ್ಞಾನ ಮತ್ತು ಸೇವಾ ವಲಯಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ.
- ಚೀನಾ ಅವಲಂಬನೆ ಕಡಿಮೆ ಮಾಡುವ ಜಾಗತಿಕ ಪೂರೈಕೆ ಸರಪಳಿ ಪುನರ್‌ರಚನೆಯಲ್ಲಿ ಭಾರತಕ್ಕೆ ಅವಕಾಶ ಸಿಗಬಹುದು.

**ಪ್ರಮುಖ ಸವಾಲುಗಳು**

- ಅಮೆರಿಕದ ಕೃಷಿ ಮತ್ತು ಡೈರಿ ಉತ್ಪನ್ನಗಳಿಗೆ ಭಾರತ ಮಾರುಕಟ್ಟೆ ತೆರೆಯುವ ಒತ್ತಡ.
- ಭಾರತೀಯ ರೈತರು ಮತ್ತು ಸಣ್ಣ ಉತ್ಪಾದಕರ ಹಿತಾಸಕ್ತಿ ರಕ್ಷಣೆ.
- ಸುಂಕ ಕಡಿತದಿಂದ ಸ್ಥಳೀಯ ಕೈಗಾರಿಕೆಗಳಿಗೆ ಸ್ಪರ್ಧಾತ್ಮಕ ಒತ್ತಡ.
- ಡೇಟಾ, ಡಿಜಿಟಲ್ ವ್ಯಾಪಾರ, ಬೌದ್ಧಿಕ ಆಸ್ತಿ ಹಕ್ಕುಗಳು ಮತ್ತು ಸೇವಾ ವಲಯದ ನಿಯಮಗಳು.

## ❖ ಒಮಾನ್ ಜೊತೆಗೆ ಮುಕ್ತ ವ್ಯಾಪಾರ ಒಪ್ಪಂದ ಜಾರಿ

**ಸುದ್ದಿಯಲ್ಲೇಕೆ?**

ಭಾರತ ಮತ್ತು ಒಮಾನ್ ನಡುವಿನ **ಮುಕ್ತ ವ್ಯಾಪಾರ ಒಪ್ಪಂದ** ಸೋಮವಾರದಿಂದ ಜಾರಿಗೆ ಬಂದಿದೆ.

**ಪ್ರಮುಖ ಅಂಶಗಳು**

- ಭಾರತದಿಂದ ಒಮಾನ್‌ಗೆ ರಫ್ತಾಗುವ ಸುಮಾರು **99%ಕ್ಕಿಂತ ಹೆಚ್ಚು ಉತ್ಪನ್ನಗಳಿಗೆ** ಸುಂಕ ರಹಿತ ಅಥವಾ ಕಡಿಮೆ ಸುಂಕದ ಮಾರುಕಟ್ಟೆ ಪ್ರವೇಶ ಸಿಗಲಿದೆ.
- ಒಮಾನ್ ಉತ್ಪನ್ನಗಳಿಗೂ ಭಾರತದ ಮಾರುಕಟ್ಟೆಯಲ್ಲಿ ಕೆಲವು ಸಡಿಲಿಕೆಗಳು ದೊರೆಯಲಿವೆ.
- ಖರ್ಜೂರದಂತಹ ಕೆಲವು ಉತ್ಪನ್ನಗಳಿಗೆ **ಕೋಟಾ ಆಧಾರಿತ ಸುಂಕ ವಿನಾಯಿತಿ** ಇರಬಹುದು.
- ಇದು ಪಶ್ಚಿಮ ಏಷ್ಯಾದಲ್ಲಿ ಭಾರತದ ವ್ಯಾಪಾರ ತಂತ್ರಕ್ಕೆ ಮಹತ್ವದ್ದು.

**ಭಾರತಕ್ಕೆ ಲಾಭ**

- ರಫ್ತು ವೃದ್ಧಿ
- ಪಶ್ಚಿಮ ಏಷ್ಯಾ ಮಾರುಕಟ್ಟೆಯಲ್ಲಿ ಭಾರತಕ್ಕೆ ಹೆಚ್ಚಿನ ಅವಕಾಶ
- ಇಂಧನ, ಆಹಾರ ಭದ್ರತೆ ಮತ್ತು ವಾಣಿಜ್ಯ ಸಂಬಂಧಗಳ ಬಲವರ್ಧನೆ
- ಭಾರತೀಯ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಹೊಸ ಮಾರುಕಟ್ಟೆ ಪ್ರವೇಶ

**ಪರೀಕ್ಷಾ ದೃಷ್ಟಿಯಿಂದ ಮುಖ್ಯ ಅಂಶಗಳು**

| ಪದ | ಅರ್ಥ |
|---|---|
| BTA | ಎರಡು ದೇಶಗಳ ನಡುವಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ |
| FTA | ಸುಂಕ ಕಡಿತ ಅಥವಾ ರದ್ದು ಮಾಡುವ ಮುಕ್ತ ವ್ಯಾಪಾರ ಒಪ್ಪಂದ |
| Tariff | ಆಮದು/ರಫ್ತು ಮೇಲಿನ ಸುಂಕ |
| Market Access | ಒಂದು ದೇಶದ ಉತ್ಪನ್ನಗಳಿಗೆ ಮತ್ತೊಂದು ದೇಶದ ಮಾರುಕಟ್ಟೆಯಲ್ಲಿ ಪ್ರವೇಶ |
| Rules of Origin | ಉತ್ಪನ್ನದ ಮೂಲ ದೇಶವನ್ನು ನಿರ್ಧರಿಸುವ ನಿಯಮಗಳು |

Dr. Rajkumar IAS/KAS Academy

## ❖ ಹ್ಲೈಂಗ್–ಮೋದಿ ಮಾತುಕತೆ: ಭಾರತ–ಮ್ಯಾನ್ಮಾರ್ ಸಂಬಂಧ

**ಸುದ್ದಿಯಲ್ಲೇಕೆ?**

ಮ್ಯಾನ್ಮಾರ್ ಅಧ್ಯಕ್ಷ **ಯು ಮಿನ್ ಆಂಗ್ ಹ್ಲೈಂಗ್** ಅವರು ಭಾರತಕ್ಕೆ ಭೇಟಿ ನೀಡಿದ್ದು, ಪ್ರಧಾನಿ ನರೇಂದ್ರ ಮೋದಿ ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೋಭಾಲ್ ಅವರೊಂದಿಗೆ **ವ್ಯಾಪಾರ, ಸಂಪರ್ಕ, ಗಡಿ ಭದ್ರತೆ ಮತ್ತು ರಕ್ಷಣಾ ಸಹಕಾರ** ಕುರಿತು ಮಾತುಕತೆ ನಡೆಸಿದ್ದಾರೆ.

## ಪ್ರಮುಖ ಅಂಶಗಳು

| ವಿಷಯ | ವಿವರ |
|---|---|
| ಸಂಬಂಧಿತ ದೇಶಗಳು | ಭಾರತ ಮತ್ತು ಮ್ಯಾನ್ಮಾರ್ |
| ಮ್ಯಾನ್ಮಾರ್ ನಾಯಕ | ಯು ಮಿನ್ ಆಂಗ್ ಹ್ಲೈಂಗ್ |
| ಭಾರತದ ಪರವಾಗಿ ಮಾತುಕತೆ | ಪ್ರಧಾನಿ ನರೇಂದ್ರ ಮೋದಿ, NSA ಅಜಿತ್ ಡೋಭಾಲ್ |
| ಮುಖ್ಯ ವಿಷಯಗಳು | ವ್ಯಾಪಾರ, ಸಂಪರ್ಕ, ಗಡಿ ಭದ್ರತೆ, ರಕ್ಷಣಾ ಸಹಕಾರ |
| ಮ್ಯಾನ್ಮಾರ್‌ನ ಮಹತ್ವ | ಭಾರತದ ಈಶಾನ್ಯ ರಾಜ್ಯಗಳಿಗೆ ಹೊಂದಿಕೊಂಡಿರುವ ತಂತ್ರಯುಕ್ತ ನೆರೆ ದೇಶ |
| ಭಾರತ–ಮ್ಯಾನ್ಮಾರ್ ಗಡಿ | ಸುಮಾರು 1,640 ಕಿ.ಮೀ. |

## ಹಿನ್ನೆಲೆ

- ಮ್ಯಾನ್ಮಾರ್ ಭಾರತಕ್ಕೆ **ತಂತ್ರಯುಕ್ತವಾಗಿ ಮಹತ್ವದ ನೆರೆ ದೇಶ**.
- ಭಾರತವು ಮ್ಯಾನ್ಮಾರ್ ಮೂಲಕ ದಕ್ಷಿಣ–ಪೂರ್ವ ಏಷ್ಯಾ ರಾಷ್ಟ್ರಗಳೊಂದಿಗೆ ಭೂ ಸಂಪರ್ಕ ಸಾಧಿಸಬಹುದು.
- ಮ್ಯಾನ್ಮಾರ್‌ನಲ್ಲಿ 2021ರಲ್ಲಿ ಸೇನಾ ಆಡಳಿತ ಅಧಿಕಾರಕ್ಕೆ ಬಂದ ನಂತರ ರಾಜಕೀಯ ಅಸ್ಥಿರತೆ ಮುಂದುವರಿದಿದೆ.
- ಮ್ಯಾನ್ಮಾರ್‌ನ ಅಸ್ಥಿರತೆ ಭಾರತದ **ಮಣಿಪುರ, ನಾಗಾಲ್ಯಾಂಡ್, ಮಿಜೋರಾಂ ಮತ್ತು ಅರುಣಾಚಲ ಪ್ರದೇಶ**ಗಳ ಭದ್ರತೆಗೆ ನೇರ ಪರಿಣಾಮ ಬೀರುತ್ತದೆ.

## ಭಾರತಕ್ಕೆ ಮ್ಯಾನ್ಮಾರ್ ಏಕೆ ಮಹತ್ವದ್ದು?

1. ಆಕ್ಟ್ ಈಸ್ಟ್ ನೀತಿ
ಮ್ಯಾನ್ಮಾರ್ ಭಾರತಕ್ಕೆ ದಕ್ಷಿಣ–ಪೂರ್ವ ಏಷ್ಯಾಕ್ಕೆ ಸಂಪರ್ಕ ಕಲ್ಪಿಸುವ **ಭೂ ಸೇತುವೆ**ಯಾಗಿದೆ.

2. ಗಡಿ ಭದ್ರತೆ
ಈಶಾನ್ಯ ರಾಜ್ಯಗಳಲ್ಲಿ ಬಂಡುಕೋರ ಚಟುವಟಿಕೆ, ಅಕ್ರಮ ವಲಸೆ, ಮಾದಕ ವಸ್ತು ಕಳ್ಳಸಾಗಣೆ ಮುಂತಾದವುಗಳನ್ನು ನಿಯಂತ್ರಿಸಲು ಮ್ಯಾನ್ಮಾರ್ ಸಹಕಾರ ಅಗತ್ಯ.

3. ಸಂಪರ್ಕ ಯೋಜನೆಗಳು

- **ಕಲಾದಾನ್ ಬಹುಮಾದರಿ ಸಾರಿಗೆ ಯೋಜನೆ**
- **ಭಾರತ–ಮ್ಯಾನ್ಮಾರ್–ಥೈಲ್ಯಾಂಡ್ ತ್ರಿಪಕ್ಷೀಯ ಹೆದ್ದಾರಿ**

ಇವು ಭಾರತದ ಈಶಾನ್ಯವನ್ನು ದಕ್ಷಿಣ–ಪೂರ್ವ ಏಷ್ಯಾದೊಂದಿಗೆ ಸಂಪರ್ಕಿಸುತ್ತವೆ.

4. ಚೀನಾ ಪ್ರಭಾವಕ್ಕೆ ಸಮತೋಲನ
ಮ್ಯಾನ್ಮಾರ್‌ನಲ್ಲಿ ಚೀನಾದ ಪ್ರಭಾವ ಹೆಚ್ಚುತ್ತಿರುವುದರಿಂದ, ಭಾರತದ ತಂತ್ರಯುಕ್ತ ಹಿತಾಸಕ್ತಿಗೆ ಮ್ಯಾನ್ಮಾರ್ ಜೊತೆಗಿನ ಸಂಬಂಧ ಮುಖ್ಯ.

Dr. Rajkumar IAS/KAS Academy

## ❖ ಜಲಸಂಪನ್ಮೂಲ ನಿರ್ವಹಣೆಗೆ ಜಲಶಕ್ತಿ ಸಚಿವಾಲಯ–ಇಸ್ರೋ ಒಪ್ಪಂದ

**ಸುದ್ದಿಯಲ್ಲೇಕೆ?**

ದೇಶದಲ್ಲಿ **ಜಲಸಂಪನ್ಮೂಲ ನಿರ್ವಹಣೆಯನ್ನು ಸುಧಾರಿಸಲು** ಜಲಶಕ್ತಿ ಸಚಿವಾಲಯ ಮತ್ತು **ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ — ಇಸ್ರೋ** ನಡುವೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.

ಈ ಒಪ್ಪಂದದ ಉದ್ದೇಶ **ಬಾಹ್ಯಾಕಾಶ ಆಧಾರಿತ ತಂತ್ರಜ್ಞಾನ, ಉಪಗ್ರಹ ದತ್ತಾಂಶ ಮತ್ತು ವೈಜ್ಞಾನಿಕ ಸಂಶೋಧನೆಗಳನ್ನು ಬಳಸಿ ನೀರಿನ ನಿರ್ವಹಣೆಯನ್ನು ಹೆಚ್ಚು ಪರಿಣಾಮಕಾರಿಯಾಗಿಸುವುದು**.

**ಪ್ರಮುಖ ಅಂಶಗಳು**

| ವಿಷಯ | ವಿವರ |
|---|---|
| ಒಪ್ಪಂದದ ಸಂಸ್ಥೆಗಳು | ಜಲಶಕ್ತಿ ಸಚಿವಾಲಯ ಮತ್ತು ಇಸ್ರೋ |
| ಉದ್ದೇಶ | ಜಲಸಂಪನ್ಮೂಲ ನಿರ್ವಹಣೆಯಲ್ಲಿ ಬಾಹ್ಯಾಕಾಶ ತಂತ್ರಜ್ಞಾನ ಬಳಕೆ |
| ಕಾರ್ಯಕ್ರಮ ನಡೆದ ಸ್ಥಳ | ಡಾ. ಬಿ.ಆರ್. ಅಂಬೇಡ್ಕರ್ ಅಂತರರಾಷ್ಟ್ರೀಯ ಕೇಂದ್ರ, ನವದೆಹಲಿ |
| ಪ್ರಮುಖ ಕ್ಷೇತ್ರಗಳು | ಜಲ ಸಂರಕ್ಷಣೆ, ನೀರಿನ ಲಭ್ಯತೆ, ಭೂಗರ್ಭಜಲ, ನೀರಿನ ಯೋಜನೆಗಳು |
| ಸಂಶೋಧನಾ ಸಹಕಾರ | 24 ಪ್ರಮುಖ ಸಂಶೋಧನಾ ಕ್ಷೇತ್ರಗಳಲ್ಲಿ ಜಂಟಿ ಕಾರ್ಯ |
| ಸಂಬಂಧಿತ ಗುರಿ | ವಿಕಸಿತ ಭಾರತ 2047 ಮತ್ತು ನೀರಿನ ಸುರಕ್ಷತೆ |

**ಒಪ್ಪಂದದ ಮಹತ್ವ**

**1. ಉಪಗ್ರಹ ದತ್ತಾಂಶದ ಬಳಕೆ**

ಇಸ್ರೋ ಉಪಗ್ರಹಗಳ ಮೂಲಕ ದೊರೆಯುವ ಚಿತ್ರಗಳು ಮತ್ತು ದತ್ತಾಂಶದಿಂದ ನದಿಗಳು, ಕೆರೆಗಳು, ಜಲಾಶಯಗಳು, ಭೂಗರ್ಭಜಲ ಮತ್ತು ಬರಪೀಡಿತ ಪ್ರದೇಶಗಳ ಕುರಿತು ನಿಖರ ಮಾಹಿತಿ ಪಡೆಯಬಹುದು.

**2. ನೀರಿನ ಸುರಕ್ಷತೆಗೆ ತಂತ್ರಜ್ಞಾನ**

ಭಾರತದಲ್ಲಿ ನೀರಿನ ಬೇಡಿಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ತಂತ್ರಜ್ಞಾನ ಆಧಾರಿತ ನೀರಿನ ನಿರ್ವಹಣೆ ಅತ್ಯಗತ್ಯವಾಗಿದೆ.

**3. ಜಲ ಸಂರಕ್ಷಣೆಗೆ ವೈಜ್ಞಾನಿಕ ವಿಧಾನ**

ಜಲ ಸಂರಕ್ಷಣೆ, ಮಳೆನೀರು ಸಂಗ್ರಹಣೆ, ಭೂಗರ್ಭಜಲ ಪುನರ್ಭರ್ತಿ ಮತ್ತು ಜಲಾಶಯ ನಿರ್ವಹಣೆಯಲ್ಲಿ ವೈಜ್ಞಾನಿಕ ಯೋಜನೆ ರೂಪಿಸಲು ಸಹಕಾರಿ.

**4. ಬರ ಮತ್ತು ಪ್ರವಾಹ ನಿರ್ವಹಣೆ**

ಉಪಗ್ರಹ ದತ್ತಾಂಶದ ಮೂಲಕ ಬರ, ಪ್ರವಾಹ, ನದಿ ಹರಿವು ಮತ್ತು ಜಲಾಶಯ ಮಟ್ಟಗಳನ್ನು ಉತ್ತಮವಾಗಿ ಮೇಲ್ವಿಚಾರಣೆ ಮಾಡಬಹುದು.

Dr. Rajkumar IAS/KAS Academy

ಜಲಶಕ್ತಿ ಸಚಿವರ ಪ್ರಮುಖ ಅಭಿಪ್ರಾಯ

ಜಲಶಕ್ತಿ ಸಚಿವ **ಸಿ.ಆರ್. ಪಾಟೀಲ** ಅವರು, **2047ರ ವಿಕಸಿತ ಭಾರತ ಗುರಿ ಸಾಧಿಸಲು ನೀರಿನ ಸುರಕ್ಷತೆ ನಿರ್ಣಾಯಕ** ಎಂದು ಹೇಳಿದ್ದಾರೆ. ತಂತ್ರಜ್ಞಾನ, ನಾವೀನ್ಯತೆ, ಸಮುದಾಯ ಜ್ಞಾನ ಮತ್ತು ಸಾರ್ವಜನಿಕ ಭಾಗವಹಿಸುವಿಕೆಯ ಮೂಲಕ ನೀರಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು ಎಂದು ಅವರು ತಿಳಿಸಿದ್ದಾರೆ.

**ಪ್ರಮುಖ ಪರಿಕಲ್ಪನೆಗಳು**

| ಪರಿಕಲ್ಪನೆ | ಅರ್ಥ |
|---|---|
| Remote Sensing | ದೂರದಿಂದ ಉಪಗ್ರಹಗಳ ಮೂಲಕ ಭೂಮಿಯ ಮೇಲ್ಮೈ ಮಾಹಿತಿ ಸಂಗ್ರಹಿಸುವ ತಂತ್ರಜ್ಞಾನ |
| GIS | ಭೌಗೋಳಿಕ ಮಾಹಿತಿಯನ್ನು ನಕ್ಷೆ ರೂಪದಲ್ಲಿ ವಿಶ್ಲೇಷಿಸುವ ವ್ಯವಸ್ಥೆ |
| Water Security | ಜನರಿಗೆ ಸಾಕಷ್ಟು, ಸುರಕ್ಷಿತ ಮತ್ತು ಸ್ಥಿರ ನೀರಿನ ಲಭ್ಯತೆ |
| Groundwater Recharge | ಭೂಗರ್ಭಜಲ ಮಟ್ಟವನ್ನು ಹೆಚ್ಚಿಸುವ ಪ್ರಕ್ರಿಯೆ |
| Satellite Data | ಉಪಗ್ರಹಗಳಿಂದ ಸಂಗ್ರಹಿಸಲಾದ ಭೂಮಿಯ ಮಾಹಿತಿ |

**ಏಕೆ ಇದು ಪ್ರಸ್ತುತ ಮಹತ್ವದ್ದು?**

- ಭಾರತದಲ್ಲಿ ನೀರಿನ ಬೇಡಿಕೆ ವೇಗವಾಗಿ ಹೆಚ್ಚುತ್ತಿದೆ.
- ಅನೇಕ ಪ್ರದೇಶಗಳಲ್ಲಿ ಭೂಗರ್ಭಜಲ ಮಟ್ಟ ಕುಸಿಯುತ್ತಿದೆ.
- ಹವಾಮಾನ ಬದಲಾವಣೆಯಿಂದ ಬರ ಮತ್ತು ಪ್ರವಾಹಗಳ ತೀವ್ರತೆ ಹೆಚ್ಚುತ್ತಿದೆ.
- ಕೃಷಿ, ಕುಡಿಯುವ ನೀರು, ಕೈಗಾರಿಕೆ ಮತ್ತು ನಗರೀಕರಣಕ್ಕೆ ನೀರಿನ ಸಮರ್ಪಕ ನಿರ್ವಹಣೆ ಅವಶ್ಯಕ.
- ಬಾಹ್ಯಾಕಾಶ ತಂತ್ರಜ್ಞಾನವು ಜಲ ನಿರ್ವಹಣೆಯನ್ನು ದತ್ತಾಂಶ ಆಧಾರಿತ ಮತ್ತು ನಿಖರಗೊಳಿಸುತ್ತದೆ.

## ❖ ಸುಪ್ರೀಂ ಕೋರ್ಟ್‌ಗೆ 'ಬಾರ್'ನಿಂದ ನೇರ ನೇಮಕ: ವಿ. ಮೋಹನಾ 2ನೇ ಮಹಿಳಾ ವಕೀಲೆ

**ಸುದ್ದಿಯಲ್ಲೇಕೆ?**

ಹಿರಿಯ ವಕೀಲೆ **ವಿ. ಮೋಹನಾ** ಅವರು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದಾರೆ. ಇದರೊಂದಿಗೆ ಅವರು **'ಬಾರ್'ನಿಂದ ನೇರವಾಗಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾದ ಭಾರತದ 2ನೇ ಮಹಿಳಾ ವಕೀಲೆ** ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

**ಪ್ರಮುಖ ಅಂಶಗಳು**

| ವಿಷಯ | ವಿವರ |
|---|---|
| ನೂತನ ನ್ಯಾಯಮೂರ್ತಿ | ವಿ. ಮೋಹನಾ |
| ವಿಶೇಷತೆ | ಬಾರ್‌ನಿಂದ ನೇರವಾಗಿ ಸುಪ್ರೀಂ ಕೋರ್ಟ್‌ಗೆ ನೇಮಕವಾದ 2ನೇ ಮಹಿಳಾ ವಕೀಲೆ |

Dr. Rajkumar IAS/KAS Academy

| ವಿಷಯ | ವಿವರ |
|---|---|
| ಮೊದಲ ಮಹಿಳೆ | ನ್ಯಾಯಮೂರ್ತಿ ಇಂದೂ ಮಲ್ಹೋತ್ರಾ |
| ನೇಮಕಾತಿ ವ್ಯವಸ್ಥೆ | ಸುಪ್ರೀಂ ಕೋರ್ಟ್ ಕೊಲಿಜಿಯಂ ಶಿಫಾರಸು |
| ಪ್ರಸ್ತುತ ಪರಿಣಾಮ | ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಸಂಖ್ಯೆ 37ಕ್ಕೆ ಏರಿಕೆ |
| ಮಹಿಳಾ ಪ್ರತಿನಿಧಿತ್ವ | ಸುಪ್ರೀಂ ಕೋರ್ಟ್‌ನಲ್ಲಿ ಮಹಿಳಾ ನ್ಯಾಯಮೂರ್ತಿಗಳ ಸಂಖ್ಯೆ ಹೆಚ್ಚಳ |

**'ಬಾರ್‌ನಿಂದ ನೇರ ನೇಮಕ' ಎಂದರೇನು?**

ಸಾಮಾನ್ಯವಾಗಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳನ್ನು ಹೈಕೋರ್ಟ್ ನ್ಯಾಯಮೂರ್ತಿಗಳಿಂದ ನೇಮಕ ಮಾಡಲಾಗುತ್ತದೆ. ಆದರೆ, ಒಬ್ಬ ಹಿರಿಯ ವಕೀಲರನ್ನು ನೇರವಾಗಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕ ಮಾಡಿದರೆ ಅದನ್ನು **Bar to Bench appointment** ಎಂದು ಕರೆಯಲಾಗುತ್ತದೆ.

**ಏಕೆ ಮಹತ್ವದ್ದು?**

**1. ಮಹಿಳಾ ಪ್ರತಿನಿಧಿತ್ವಕ್ಕೆ ಉತ್ತೇಜನ**

ಉನ್ನತ ನ್ಯಾಯಾಂಗದಲ್ಲಿ ಮಹಿಳೆಯರ ಸಂಖ್ಯೆ ಕಡಿಮೆ ಇರುವ ಸಂದರ್ಭದಲ್ಲಿ, ವಿ. ಮೋಹನಾ ಅವರ ನೇಮಕಾತಿ ಮಹತ್ವದ ಹೆಜ್ಜೆಯಾಗಿದೆ.

**2. ನ್ಯಾಯಾಂಗ ವೈವಿಧ್ಯತೆ**

ವಿಭಿನ್ನ ವೃತ್ತಿಪರ ಅನುಭವ ಹೊಂದಿರುವ ವಕೀಲರನ್ನು ನ್ಯಾಯಮೂರ್ತಿಗಳಾಗಿ ನೇಮಕ ಮಾಡುವುದರಿಂದ ನ್ಯಾಯಾಂಗದ ದೃಷ್ಟಿಕೋನ ವಿಸ್ತಾರವಾಗುತ್ತದೆ.

**3. ಬಾರ್‌ನ ಅನುಭವಕ್ಕೆ ಮಾನ್ಯತೆ**

ಹಿರಿಯ ವಕೀಲರ ನ್ಯಾಯಾಲಯ ಅನುಭವ, ವಾದಪ್ರತಿವಾದ ಸಾಮರ್ಥ್ಯ ಮತ್ತು ಕಾನೂನು ಪರಿಣತಿಗೆ ಮಾನ್ಯತೆ ಸಿಗುತ್ತದೆ.

**4. ಲಿಂಗ ಸಮಾನತೆ**

ಉನ್ನತ ನ್ಯಾಯಾಂಗದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚುವುದು ಸಂವಿಧಾನಾತ್ಮಕ ಸಮಾನತೆಯ ದೃಷ್ಟಿಯಿಂದ ಮುಖ್ಯ.

ಇತರೆ ನೇಮಕಾತಿಗಳು

ಸುಪ್ರೀಂ ಕೋರ್ಟ್‌ಗೆ ನೇಮಕವಾದ ಇತರೆ ನ್ಯಾಯಮೂರ್ತಿಗಳಲ್ಲಿ ವಿವಿಧ ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳೂ ಸೇರಿದ್ದಾರೆ. ಈ ನೇಮಕಾತಿಗಳಿಂದ ಸುಪ್ರೀಂ ಕೋರ್ಟ್‌ನ ಒಟ್ಟು ನ್ಯಾಯಮೂರ್ತಿಗಳ ಸಂಖ್ಯೆ ಹೆಚ್ಚಾಗಿದೆ.

Dr. Rajkumar IAS/KAS Academy

**ಸಂವಿಧಾನಾತ್ಮಕ ಸಂಪರ್ಕ**

| ವಿಧಿ / ವ್ಯವಸ್ಥೆ | ವಿಷಯ |
|---|---|
| ವಿಧಿ 124 | ಸುಪ್ರೀಂ ಕೋರ್ಟ್ ರಚನೆ ಮತ್ತು ನ್ಯಾಯಮೂರ್ತಿಗಳ ನೇಮಕ |
| ರಾಷ್ಟ್ರಪತಿ | ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳನ್ನು ನೇಮಕ ಮಾಡುವ ಪ್ರಾಧಿಕಾರ |
| ಕೊಲಿಜಿಯಂ ವ್ಯವಸ್ಥೆ | ನ್ಯಾಯಮೂರ್ತಿಗಳ ನೇಮಕಾತಿಗೆ ಶಿಫಾರಸು ಮಾಡುವ ವ್ಯವಸ್ಥೆ |
| ಬಾರ್ ಟು ಬೆಂಚ್ | ವಕೀಲರಿಂದ ನೇರವಾಗಿ ನ್ಯಾಯಮೂರ್ತಿಯಾಗಿ ನೇಮಕ |

**ಪರೀಕ್ಷಾ ದೃಷ್ಟಿಯಿಂದ ಮಹತ್ವ**

- ನ್ಯಾಯಾಂಗ ನೇಮಕಾತಿ ವ್ಯವಸ್ಥೆ
- ಕೊಲಿಜಿಯಂ ವ್ಯವಸ್ಥೆ
- ಮಹಿಳಾ ಪ್ರತಿನಿಧಿತ್ವ
- ನ್ಯಾಯಾಂಗ ಸುಧಾರಣೆ
- ಲಿಂಗ ನ್ಯಾಯ ಮತ್ತು ಸಂವಿಧಾನಾತ್ಮಕ ಸಮಾನತೆ

## ❖ ಫುಟ್ಬಾಲ್ ವಿಶ್ವಕಪ್ ಪ್ರಸಾರ ಹಕ್ಕು 'ಜೀ' ಸಂಸ್ಥೆಗೆ

**ಸುದ್ದಿಯಲ್ಲೇಕೆ?**

**Zee Entertainment Enterprises Limited (ZEEL)** ಸಂಸ್ಥೆಯು **FIFA** ಜೊತೆ ಐದು ವರ್ಷಗಳ ಅವಧಿಗೆ ಪ್ರಸಾರ ಹಕ್ಕು ಒಪ್ಪಂದ ಮಾಡಿಕೊಂಡಿದೆ. ಇದರ ಮೂಲಕ ಭಾರತದಲ್ಲಿ ಪ್ರಮುಖ FIFA ಫುಟ್ಬಾಲ್ ಟೂರ್ನಿಗಳನ್ನು ಜೀ ಪ್ರಸಾರ ಮಾಡಲಿದೆ.

**ಪ್ರಮುಖ ಅಂಶಗಳು**

| ವಿಷಯ | ವಿವರ |
|---|---|
| ಸಂಸ್ಥೆ | Zee Entertainment Enterprises Limited |
| ಜಾಗತಿಕ ಸಂಸ್ಥೆ | FIFA |
| ಒಪ್ಪಂದ | ಪ್ರಸಾರ / ಮಾಧ್ಯಮ ಹಕ್ಕು |
| ಅವಧಿ | 5 ವರ್ಷ |
| ಭಾರತದಲ್ಲಿ ಪ್ರಸಾರ | Zee Sports Network ಮತ್ತು ZEE5 |
| ಭಾಷೆಗಳು | ಹಿಂದಿ, ಇಂಗ್ಲಿಷ್ ಸೇರಿದಂತೆ ಬಹುಭಾಷೆಗಳು |

**ಯಾವ ಟೂರ್ನಿಗಳ ಹಕ್ಕು?**

- **2026 ಪುರುಷರ FIFA World Cup**
- **2030 ಪುರುಷರ FIFA World Cup**
- **2027 ಮಹಿಳಾ FIFA World Cup**
- 2034ರವರೆಗಿನ ಇತರೆ ಪ್ರಮುಖ FIFA ಫುಟ್ಬಾಲ್ ಟೂರ್ನಿಗಳು

Dr. Rajkumar IAS/KAS Academy

**FIFA ಎಂದರೇನು?**
**FIFA — Fédération Internationale de Football Association**

ಇದು ವಿಶ್ವ ಫುಟ್ಬಾಲ್ ಆಡಳಿತ ಸಂಸ್ಥೆಯಾಗಿದ್ದು, FIFA World Cup ಸೇರಿದಂತೆ ಪ್ರಮುಖ ಅಂತರರಾಷ್ಟ್ರೀಯ ಫುಟ್ಬಾಲ್ ಟೂರ್ನಿಗಳನ್ನು ಆಯೋಜಿಸುತ್ತದೆ.

**ಏಕೆ ಮಹತ್ವದ್ದು?**

- ಭಾರತದಲ್ಲಿ ಫುಟ್ಬಾಲ್ ವೀಕ್ಷಕರ ಸಂಖ್ಯೆ ಹೆಚ್ಚುತ್ತಿರುವುದನ್ನು ಇದು ಸೂಚಿಸುತ್ತದೆ.
- ಕ್ರೀಡಾ ಪ್ರಸಾರ ಮಾರುಕಟ್ಟೆಯಲ್ಲಿ ಜೀ ಸಂಸ್ಥೆಯ ಪಾತ್ರ ವಿಸ್ತರಿಸುತ್ತದೆ.
- ZEE5 ಮೂಲಕ ಡಿಜಿಟಲ್ ವೀಕ್ಷಕರಿಗೂ ಸುಲಭ ಪ್ರವೇಶ ಸಿಗಲಿದೆ.
- ಬಹುಭಾಷಾ ಪ್ರಸಾರದಿಂದ ಭಾರತದಲ್ಲಿ ಫುಟ್ಬಾಲ್ ಜನಪ್ರಿಯತೆ ಹೆಚ್ಚಲು ಸಹಕಾರಿ.
- ಕ್ರೀಡಾ ಆರ್ಥಿಕತೆ, ಡಿಜಿಟಲ್ ಮಾಧ್ಯಮ ಮತ್ತು ಪ್ರಸಾರ ಹಕ್ಕುಗಳ ಮಾರುಕಟ್ಟೆಗೆ ಇದು ಮಹತ್ವದ ಬೆಳವಣಿಗೆ.

Dr. Rajkumar IAS/KAS Academy

## ❖ ಅನುಕಂಪದ ನೌಕರಿ: ವಿವಾಹಿತ ಪುತ್ರಿಯರೂ ಅರ್ಹರು ಸುಪ್ರೀಂ

- ಅನುಕಂಪದ ಆಧಾರದಲ್ಲಿ ಸರ್ಕಾರಿ ನೌಕರಿಗೆ ನೇಮಕಾತಿ ಮಾಡುವ ಹಕ್ಕಿನಿಂದ ವಿವಾಹಿತ ಹೆಣ್ಣುಮಕ್ಕಳನ್ನು ಹೊರಗಿಡು ವುದು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.
- 'ಕುಟುಂಬ'ದ ವ್ಯಾಖ್ಯಾನದಿಂದ ವಿವಾಹಿತ ಪುತ್ರಿಯರನ್ನು ಹೊರಗಿಡು ವುದು ನ್ಯಾಯಸಮ್ಮತವಲ್ಲ ಮತ್ತು ಸಾಂವಿಧಾನಿಕವಾಗಿ ಅದು ಸಿಂಧು ವಲ್ಲ ಎಂದು ಅಭಿಪ್ರಾಯಪಟ್ಟಿದೆ.
- ಅನುಕಂಪದ ಆಧಾರ ದಲ್ಲಿ ನೇಮಕಾತಿ ವಿಚಾರವಾಗಿ ವಿವಾಹಿತ ಪುತ್ರಿಯನ್ನು ಕುಟುಂಬದ ವ್ಯಾಖ್ಯಾನದಿಂದ ಹೊರಗಿಟ್ಟ ಅಲಹಾಬಾದ್ ಹೈಕೋರ್ಟ್ ನೀಡಿದ್ದ ಆದೇಶವನ್ನು ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಅಲೋಕ್ ಅರಾಧೆ ಅವರಿದ್ದ ಪೀಠವು ವಜಾ ಮಾಡಿತು.
- ನ್ಯಾಯಬೆಲೆ ಅಂಗಡಿಯೊಂದರ ವಿತರಕ (ಡೀಲರ್) ಮೃತರಾದ ಬಳಿಕ ಅವರ ಪುತ್ರಿಯು ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿದ್ದ ಅರ್ಜಿಯನ್ನು ಪೀಠವು ವಿಚಾರಣೆ ನಡೆಸಿತು.
- 'ಅವಲಂಬನೆ, ಹಣಕಾಸಿನ ಅಗತ್ಯ, ವಸತಿ ಹಾಗೂ ಡೀಲರ್‌ಶಿಪ್ ಗೆ ಸಂಬಂಧಿಸಿದ ಹೊಣೆಗಾರಿಕೆಯನ್ನು ನಿರ್ವಹಿಸುವ ಅರ್ಜಿದಾರರ ಸಾಮರ್ಥ್ಯವನ್ನು ಪರಿಗಣಿಸಬೇಕಾಗುತ್ತದೆ. ಅವಲಂಬನೆಯು ವಾಸ್ತವದ ಪ್ರಶ್ನೆ ಯಾಗಿದ್ದು, ಮದುವೆಯಾದ ಮಾತ್ರಕ್ಕೆ ಮಗಳು ಆಕೆಯ ತವರಿನೊಂದಿಗಿನ ಬಾಂಧವ್ಯವನ್ನು ಕಡಿದುಕೊಳ್ಳುತ್ತಾಳೆ ಅಥವಾ ತವರು ಕುಟುಂಬದ ಮೇಲೆ ಆಕೆ ಅವಲಂಬನೆ ಹೊಂದಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಅದೇ ರೀತಿ ಹೆಚ್ಚಿನ ಸಂದರ್ಭ ಗಳಲ್ಲಿ ಪುತ್ರರು ಕುಟುಂಬದ ವ್ಯಾಖ್ಯಾನಕ್ಕೆ ಒಳಪಟ್ಟಿದ್ದರೂ ಕುಟುಂಬದ ಮೇಲೆ ಅವಲಂಬಿತರಾಗಿರುವುದಿಲ್ಲ' ಎಂದು ಪೀಠವು ಹೇಳಿದೆ.
- 'ಮದುವೆಯಾದ ಹೊರತಾಗಿಯೂ ಪುತ್ರರನ್ನು ಕುಟುಂಬದ ವ್ಯಾಖ್ಯಾನದಿಂದ ಕಾಯ್ದೆಯು ಹೊರಗಿಡುವುದಿಲ್ಲ. ಆದರೆ ಅದೇ ಕಾರಣಕ್ಕೆ ಹೆಣ್ಣುಮಕ್ಕಳನ್ನು ಹೊರಗಿಡಲಾಗುತ್ತದೆ. ಮದುವೆಯಾದ ಹೆಣ್ಣುಮಕ್ಕಳು ಬೇರೆ ಕುಟುಂಬದ ಭಾಗವಾಗುತ್ತಾರೆ ಹಾಗೂ ತವರು ಕುಟುಂಬದೊಂದಿಗಿನ ಎಲ್ಲ ಬಾಂಧವ್ಯ ಗಳನ್ನು ಕಳೆದುಕೊಳ್ಳುತ್ತಾರೆ ಎಂಬ ಹಳೆಯಕಾಲದ ಲಿಂಗ ತಾರತಮ್ಯ ಧೋರಣೆ ಇಲ್ಲಿದೆ. ಇದು ಸಂವಿಧಾನದಲ್ಲಿನ ಸಮಾನತೆಯ ಆಶಯಕ್ಕೆ ವಿರುದ್ಧವಾದದ್ದು' ಎಂದೂ ಅಭಿಪ್ರಾಯಪಟ್ಟಿದೆ.
- 'ವಿವಾಹಿತ ಪುತ್ರಿ ತವರು ಮನೆಯ ಅಗತ್ಯಗಳನ್ನು ಪೂರೈಸದೇ ಇರಬಹುದು' ಎಂಬ ರಾಜ್ಯದ ವಾದವನ್ನು 'ಅಸಮರ್ಥನೀಯ' ಎಂದು ಹೇಳಿದ ಪೀಠವು, 'ಅರ್ಜಿದಾರರು ಮದುವೆಯಾದ ಬಳಿಕವೂ ಅದೇ ಊರಿನಲ್ಲಿ ಇದ್ದುಕೊಂಡು ನ್ಯಾಯಬೆಲೆ ಅಂಗಡಿಯ ಕಾರ್ಯಾಚರಣೆಯಲ್ಲಿ ತಾಯಿಗೆ ಸಕ್ರಿಯವಾಗಿ ಸಹಕಾರ ನೀಡಿದ್ದಾರೆ. ತಾಯಿಯ ಸಾವಿನ ಬಳಿಕ ಅಂಧರೊಬ್ಬರೂ ಸೇರಿದಂತೆ ಸಹೋದರಿಯರ ಪೋಷಣೆಯ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರು ಎಂಬುದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ' ಎಂದು ಹೇಳಿದೆ.
- 'ಅನುಕಂಪದ ಆಧಾರದ ನೇಮಕಾತಿ ಕೋಟಾವು ಉತ್ತರಾಧಿಕಾರದ ಹಕ್ಕನ್ನು ಅಥವಾ ಡೀಲರ್‌ಶಿಪ್ ನಲ್ಲಿ ಅನುವಂಶೀಯ ಹಕ್ಕು ಸ್ಥಾಪಿಸುವ ಉದ್ದೇಶವನ್ನು ಹೊಂದಿಲ್ಲ. ಬದಲಾಗಿ, ಮೃತ ಡೀಲರ್ ಅವರ ಅವಲಂಬಿತ ಕುಟುಂಬಕ್ಕೆ ತಕ್ಷಣದ ಹಣಕಾಸು ಪರಿಹಾರ ಒದಗಿಸುವುದು ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ನಿರಂತರತೆ ಖಚಿತಪಡಿಸಿಕೊಳ್ಳುವುದೇ ಆಗಿದೆ' ಎಂದು ಸ್ಪಷ್ಟಪಡಿಸಿದೆ.



### ದೊಡ್ಡ ಹುದ್ದೆಗೇರಿದ ದೊಡ್ಡ ಆಲಹಳ್ಳಿಯ 'ಬಂಡೆ' ಡಿ.ಕೆ. ಶಿವಕುಮಾರ್

# ರಾಜ್ಯಕ್ಕೆ ಐವರು ಮುಖ್ಯಮಂತ್ರಿ ಕೊಟ್ಟ ಜಿಲ್ಲೆ

• ಓದೇಶ ಸಕಲೇಶಪುರ

ರಾಮನಗರ: ರಾಜ್ಯದ 25ನೇ ಮುಖ್ಯಮಂತ್ರಿಯಾಗಿ ಕನಕಪುರದ ಡಿ.ಕೆ.ಶಿವಕುಮಾರ್ ಬುಧವಾರ ಪ್ರಮಾಣ ವಚನ ಸ್ವೀಕರಿಸಲು ಸಜ್ಜಾಗಿದ್ದು, ಕರ್ನಾಟಕಕ್ಕೆ ಅತಿ ಹೆಚ್ಚು ಮುಖ್ಯ-ಮಂತ್ರಿಗಳನ್ನು ಕೊಟ್ಟ ಹೆಗ್ಗಳಿಕೆಗೆ ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆ ಪಾತ್ರವಾಗಲಿದೆ.

ಶಿವಕುಮಾರ್ ಸೇರಿದಂತೆ ಈವರೆಗೆ ಜಿಲ್ಲೆಯ ಐವರು ಮುಖ್ಯಮಂತ್ರಿ ಕುರ್ಚಿಯನ್ನು ಅಲಂಕರಿಸಿದಂತಾಗಿದೆ. ರಾಜಧಾನಿಯ ಮಗ್ಗುಲಲ್ಲಿರುವ ಜಿಲ್ಲೆಯು ವಿಸ್ತಾರದಲ್ಲಿ ಚಿಕ್ಕದಾದರೂ ರಾಜಕಾರಣದಲ್ಲಿ ತನ್ನದೇ ಆದ ಛಾಪು ಮೂಡಿಸಿದ್ದಾರೆ. ಶಕ್ತಿ ಕೇಂದ್ರವಾದ ವಿಧಾನಸೌಧದ ನಿರ್ಮಾತೃ ಕೆಂಗಲ್ ಹನುಮಂತಯ್ಯ, ರಾಮಕೃಷ್ಣ ಹೆಗಡೆ, ಎಚ್.ಡಿ. ದೇವೇಗೌಡ ಹಾಗೂ ಎಚ್.ಡಿ. ಕುಮಾರಸ್ವಾಮಿ ಈವರೆಗೆ ರಾಜ್ಯದ ಚುಕ್ಕಾಣಿ ಹಿಡಿದು ಅಧಿಕಾರ ನಡೆಸಿದ್ದಾರೆ. ಈ ಸಾಲಿಗೆ ಇದೀಗ ಶಿವಕುಮಾರ್ ಸೇರಲಿದ್ದಾರೆ.

ಜಿಲ್ಲೆಯಿಂದ ದೊಡ್ಡ ಹುದ್ದೆಗೇರಿದವರ ಪೈಕಿ ಕೆಂಗಲ್ ಹನುಮಂತಯ್ಯ, ಶಿವಕುಮಾರ್ ಕಾಂಗ್ರೆಸಿಗರು. ಹೆಗಡೆ ಜನತಾ ಪಕ್ಷದವರಾಗಿದ್ದು, ದೇವೇಗೌಡ, ಕುಮಾರಸ್ವಾಮಿ ಜೆಡಿಎಸ್‌ನಿಂದ ಈ ಹುದ್ದೆ ಅಲಂಕರಿಸಿದರು.

ಹೆಚ್ಚು ಮುಖ್ಯಮಂತ್ರಿಗಳನ್ನು ನೀಡಿದ ಎರಡನೇ ಸ್ಥಾನದಲ್ಲಿ ಶಿವಮೊಗ್ಗ ಜಿಲ್ಲೆ ಇದೆ. ಜಿಲ್ಲೆಯವರಾದ ಕಡಿದಾಳ್ ಮಂಜಪ್ಪ, ಎಸ್. ಬಂಗಾರಪ್ಪ, ಬಿ.ಎಸ್. ಯುಡಿಯೂರಪ್ಪ ಅಧಿಕಾರ ನಡೆಸಿದ್ದಾರೆ.

**ಪೂರ್ಣಾವಧಿ ಅದೃಷ್ಟವಿಲ್ಲ:** ಜಿಲ್ಲೆಯಿಂದ ಐವರು ಮುಖ್ಯಮಂತ್ರಿ ಹುದ್ದೆಗೇರಿದರೂ, ಯಾರಿಗೂ 5 ವರ್ಷಗಳ ಪೂರ್ಣಾವಧಿ ಅಧಿಕಾರ ಅನುಭವಿಸಲು ಸಾಧ್ಯವಾಗಿಲ್ಲ. ಕೆಂಗಲ್ ಅವರಿಗೆ 4 ವರ್ಷ 5 ತಿಂಗಳು ಅವಕಾಶ ಸಿಕ್ಕರೆ, ಹೆಗಡೆ ಕೇವಲ 1 ವರ್ಷವಷ್ಟೇ ಮುಖ್ಯಮಂತ್ರಿಯಾಗಿದ್ದರು. ದೇವೇಗೌಡ 17 ತಿಂಗಳು ಆಡಳಿತ ನಡೆಸಿದ್ದರು.

ಕುಮಾರಸ್ವಾಮಿ ಮೊದಲ ಅವಧಿಯಲ್ಲಿ 20 ತಿಂಗಳು ಮತ್ತು ಎರಡನೇ ಬಾರಿಗೆ 14 ತಿಂಗಳಷ್ಟೇ ಅಧಿಕಾರ ಅನುಭವಿಸಿದರು. ಇದೀಗ ಡಿ.ಕೆ. ಶಿವಕುಮಾರ್ ಅವರಿಗೆ 24 ತಿಂಗಳಷ್ಟೇ ಅಧಿಕಾರ ಸಿಗಲಿದೆ.

ಬೆಂಗಳೂರು ನಗರದಿಂದ 1986ರಲ್ಲಿ ಬೇರ್ಪಟ್ಟು ಬೆಂಗಳೂರು ಗ್ರಾಮಾಂತರ ಜಿಲ್ಲೆಯಾಯಿತು. 2007ರಲ್ಲಿ ಗ್ರಾಮಾಂತರದಿಂದ ಪ್ರತ್ಯೇಕವಾಗಿ ರಾಮನಗರ ಜಿಲ್ಲೆಯಾಯಿತು. 2025ರಲ್ಲಿ ಬೆಂಗಳೂರು ದಕ್ಷಿಣ ಎಂದು ಮರು ನಾಮಕರಣಗೊಂಡಿತು.

ಕೆಂಗಲ್ ಹನುಮಂತಯ್ಯ | ರಾಮಕೃಷ್ಣ ಹೆಗಡೆ | ದೇವೇಗೌಡ | ಕುಮಾರಸ್ವಾಮಿ | ಶಿವಕುಮಾರ್

**ಇಬ್ಬರು ಸ್ಥಳೀಯರು; ಮೂವರು ಹೊರಗಿನವರು**

ಜಿಲ್ಲೆಯಿಂದ ಮುಖ್ಯಮಂತ್ರಿ ಸ್ಥಾನಕ್ಕೇರಿದವರಲ್ಲಿ ಇಬ್ಬರು ಸ್ಥಳೀಯರು ಹಾಗೂ ಮೂವರು ಹೊರಗಿನವರು. ಮೈಸೂರು ಸಂಸ್ಥಾನದ ಮೊದಲ ಚುನಾಯಿತ ಮುಖ್ಯಮಂತ್ರಿಯಾಗಿದ್ದ (1952-1956) ಕೆಂಗಲ್ ಹನುಮಂತಯ್ಯ ರಾಮನಗರ ತಾಲ್ಲೂಕಿನ ಲಕ್ಕಪ್ಪನಹಳ್ಳಿ ಗ್ರಾಮದವರು. ಡಿ.ಕೆ. ಶಿವಕುಮಾರ್ ಕನಕಪುರ ತಾಲ್ಲೂಕಿನ ದೊಡ್ಡ ಆಲಹಳ್ಳಿಯವರು.

ರಾಜ್ಯದ ಮೊದಲ ಕಾಂಗ್ರೆಸ್ಸೇತರ ಸರ್ಕಾರದ ಮುಖ್ಯಮಂತ್ರಿಯಾಗಿದ್ದ (1985-1988) ರಾಮಕೃಷ್ಣ ಹೆಗಡೆ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದವರು. ಎಚ್.ಡಿ. ದೇವೇಗೌಡ (1994-1996) ಮತ್ತು ಕುಮಾರಸ್ವಾಮಿ (2006-07 ಮತ್ತು 2018-19) ಹಾಸನ ಜಿಲ್ಲೆಯ ಹೊಳೆನರಸಿಪುರ ತಾಲ್ಲೂಕಿನ ಹರದನಹಳ್ಳಿಯವರು. ಬದಲಾದ ಕಾಲಘಟ್ಟ ಮತ್ತು ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಜಿಲ್ಲೆಗೆ ಬಂದು ರಾಜಕೀಯ ಅಸ್ತಿತ್ವ ಕಂಡುಕೊಂಡರು. ದೇವೇಗೌಡರು ಇಲ್ಲಿಂದಲೇ ಪ್ರಧಾನಿ ಹುದ್ದೆಗೇರಿದ್ದು ವಿಶೇಷ.

## ❖ 'ವ್ಯಕ್ತಿ ಸ್ವಾತಂತ್ರ್ಯಕ್ಕಿಂತ ದೇಶದ ಸಾರ್ವಭೌಮತೆಯೇ ಮಿಗಿಲು'

- ಎಲ್ಲ ಪ್ರಕರಣಗಳಲ್ಲಿ ಅದರಲ್ಲೂ ವಿಶೇಷವಾಗಿ ಮಾದಕವಸ್ತುಗಳನ್ನು ಒಳಗೊಂಡ ಪ್ರಕರಣಗಳಲ್ಲಿ ವೈಯಕ್ತಿಕ ಸ್ವಾತಂತ್ರ್ಯಕ್ಕಿಂತ ದೇಶದ ಸಾರ್ವಭೌಮತೆಯೇ ಮುಖ್ಯವಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.
- 'ಡ್ರಗ್ಸ್ ಸಾಗಣೆ ಅಥವಾ ಬೇರೆ ರೀತಿಯಲ್ಲಿ ದೇಶದ ವಿರುದ್ಧ ಯುದ್ಧ ಸಾರಿದಾಗ ಅದು ರಾಷ್ಟ್ರದ ಆರ್ಥಿಕತೆ ಮತ್ತು ಜನರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಇಂತಹ ಸಂದರ್ಭದಲ್ಲಿ ವ್ಯಕ್ತಿಯ ಸ್ವಾತಂತ್ರ್ಯ ಮತ್ತು ದೇಶದ ಸಾರ್ವಭೌಮತೆಯಲ್ಲಿ ಯಾವುದೇ ಮುಖ್ಯ ಎಂಬ ಸಂಘರ್ಷದ ಅಗತ್ಯ ಇದೆಯೇ? ಒಂದು ವೇಳೆ, ಅಂತಹ ಸಂಘರ್ಷ ಕಂಡುಬಂದಲ್ಲಿ, ನಿಸ್ಸಂದೇಹವಾಗಿ ರಾಷ್ಟ್ರದ ಸಾರ್ವಭೌಮತೆಯೇ ಆಗ ಮುಖ್ಯವಾಗುತ್ತದೆ' ಎಂದು ಸುಪ್ರೀಂ ಕೋರ್ಟ್ ಹೇಳಿದೆ.
- ಸೆರೆವಾಸದಲ್ಲಿದ್ದರೂ ಮೊಬೈಲ್ ಫೋನ್‌ಗಳನ್ನು ಬಳಸಿಕೊಂಡು ಡ್ರಗ್ಸ್ ಕಳ್ಳಸಾಗಣೆ ಜಾಲ ನಡೆಸುತ್ತಿದ್ದ ಆರೋಪ ಹೊತ್ತ ವ್ಯಕ್ತಿಗೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ನೀಡಿದ್ದ ಜಾಮೀನನ್ನು ರದ್ದುಗೊಳಿಸಿ ಆದೇಶಿಸಿದ ವೇಳೆ ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ.
- ನ್ಯಾಯಮೂರ್ತಿಗಳಾದ ಸಂಜಯ್ ಕರೋಲ್ ಹಾಗೂ ಎನ್.ಕೋಟೀಶ್ವರ್ ಸಿಂಗ್ ಅವರು ಇದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.
- 'ವ್ಯಕ್ತಿಯು ಒಂದು ವರ್ಷ ಏಳು ತಿಂಗಳಿಂದ ಸೆರೆವಾಸ ಅನುಭವಿಸುತ್ತಿದ್ದು, ಈಗ ಎದುರಿಸುತ್ತಿರುವ ಆರೋಪಗಳು ಸಾಬೀತಾದಲ್ಲಿ ಆತನಿಗೆ ಗರಿಷ್ಠ 20 ವರ್ಷ ಜೈಲು ಶಿಕ್ಷೆ ವಿಧಿಸಬಹುದಾಗಿದೆ. ಆತನ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಧಕ್ಕೆಯಾಗಿದೆ ಎಂದು ಪರಿಗಣಿಸಿ ಸಂವಿಧಾನದ 21ನೇ ವಿಧಿ ಅನ್ವಯ ಆತನಿಗೆ ಜಾಮೀನು ನೀಡಬೇಕು ಎಂದು ಹೇಳಲು ಸಾಧ್ಯ ಇಲ್ಲ' ಎಂದು ಪೀಠ ಹೇಳಿದೆ.
- 'ಅನೇಕ ಪ್ರಕರಣಗಳಲ್ಲಿ ದೀರ್ಘಕಾಲದ ಸೆರೆವಾಸ ಅನುಭವಿಸಿದ ಕಾರಣಕ್ಕೆ ಆರೋಪಿಗಳಿಗೆ ಜಾಮೀನು ನೀಡಿದ ಉದಾಹರಣೆಗಳಿವೆ. ಆದರೆ, ಎಲ್ಲ ಪ್ರಕರಣಗಳಲ್ಲಿಯೂ ಸಂವಿಧಾನದ 21ನೇ ವಿಧಿ ಅನ್ವಯಿಸಿ. ಜಾಮೀನು ನೀಡಲು ಸಾಧ್ಯ ಇಲ್ಲ' ಎಂದು ಪೀಠ ಸ್ಪಷ್ಟಪಡಿಸಿದೆ.

# ಕ್ಯಾನ್ಸರ್‌ಕೋಶಗಳ ಪತ್ತೆಗೆ ಎಐ ಅಸ್ತ್ರ

ದಿನವಿಡೀ ನೂರಾರು ಬಯಾಪ್ಸಿ ವರದಿಗಳನ್ನು ಪರಿಶೀಲಿಸುವ ರೋಗಶಾಸ್ತ್ರಜ್ಞರಿಗೆ ಈ ನೂತನ ತಂತ್ರಜ್ಞಾನ ದೊಡ್ಡ ವರವಾಗಲಿದೆ.



• ಸುಧೀರ ಎಚ್.ಎಸ್.

ಕ್ಯಾನ್ಸರ್‌ನಂತಹ ಗಂಭೀರ ಕಾಯಿಲೆಗಳನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚುವುದು ಮತ್ತು ಅದಕ್ಕೆ ಸೂಕ್ತ ಚಿಕಿತ್ಸೆ ನೀಡುವುದು ವೈದ್ಯಕೀಯ ಲೋಕದ ದೊಡ್ಡ ಸವಾಲುಗಳಲ್ಲಿ ಒಂದು.

ಸಾಮಾನ್ಯವಾಗಿ ಕ್ಯಾನ್ಸರ್‌ಕೋಶಗಳನ್ನು ಪತ್ತೆಹಚ್ಚಲು ರೋಗಿಯ ದೇಹದ ಅಂಗಾಂಶಗಳ ಬಯಾಪ್ಸಿಯನ್ನು ಸೂಕ್ಷ್ಮ ದರ್ಶಕದ ಅಡಿಯಲ್ಲಿ ಪರೀಕ್ಷಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ವೈದ್ಯರು ನೂರಾರು ಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಬೇಕಿರುವುದರಿಂದ ತೀವ್ರ ದಣಿವು ಮತ್ತು ಮಾನಸಿಕ ಒತ್ತಡಕ್ಕೆ ಒಳಗಾಗುವುದು ಸಹಜ. ಇಂತಹ ಸಂದರ್ಭಗಳಲ್ಲಿ ಸಣ್ಣ ತಪ್ಪುಗಳಾಗುವ ಸಾಧ್ಯತೆಯೂ ಇರುತ್ತದೆ. ಆದರೆ ಈಗ ಭಾರತ ಮತ್ತು ಬ್ರಿಟನ್ ದೇಶಗಳ ವಿಜ್ಞಾನಿಗಳ ಜಂಟಿ ತಂಡವೊಂದು ವೈದ್ಯರಿಗೆ ನೆರವಾಗಬಲ್ಲ ಅತ್ಯಾಧುನಿಕ ಕೃತಕ ಬುದ್ಧಿಮತ್ತೆ (ಎ.ಐ.) ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದ್ದಾರೆ.

'ಹಿಸ್ಟೋ-ಯೂನೆಟ್' (HISTO-UNet) ಹೆಸರಿನ ಈ ಹೊಸ ಕಂಪ್ಯೂಟರ್ ಪ್ರೋಗ್ರಾಂ, ಕ್ಯಾನ್ಸರ್ ಗಡ್ಡೆಗಳು ಮತ್ತು ಗ್ರಂಥಿಗಳ ನಿಖರವಾದ ಆಕಾರವನ್ನು ಗುರುತಿಸುವುದಲ್ಲದೆ, ತನಗೆ ಗೊಂದಲವಿರುವ ಜಾಗಗಳನ್ನು ಸ್ವತಃ ಎದ್ದು ಕಾಣುವಂತೆ ಗುರುತು ಮಾಡಿ ವೈದ್ಯರನ್ನು ಎಚ್ಚರಿಸುತ್ತದೆ.

ಕರ್ನಾಟಕದಾದ್ಯಂತ ಪ್ರಮುಖ ಕ್ಯಾನ್ಸರ್ ಆಸ್ಪತ್ರೆಗಳಲ್ಲಿ ದಿನನಿತ್ಯ ಸಾವಿರಾರು ರೋಗಿಗಳು ತಪಾಸಣೆಗೆ ಬರುತ್ತಾರೆ. ಅಲ್ಲಿನ ಪ್ರಯೋಗಾಲಯಗಳಲ್ಲಿ ದಣಿವರಿಯದೆ ಕೆಲಸ ಮಾಡುವ ರೋಗಶಾಸ್ತ್ರಜ್ಞರಿಗೆ (ಪೆಥಾಲಜಿಸ್ಟ್) ಈ ತಂತ್ರಜ್ಞಾನವು ಒಂದು 'ಸ್ಮಾರ್ಟ್ ಸಹಾಯಕ'ನಂತೆ ಕೆಲಸ ಮಾಡಬಲ್ಲದು. ಈ ಸಂಶೋಧನಾ ತಂಡದಲ್ಲಿ ಭಾರತದ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಗಳಾದ ಭೋಪಾಲ್‌ನ ಐಐಎಸ್‌ಇಆರ್ (IISER), ಏಮ್ಸ್ (AIIMS), ಮೌಲಾನಾ ಆಜಾದ್ ವೈದ್ಯಕೀಯ ಕಾಲೇಜು ಹಾಗೂ ಬ್ರಿಟನ್‌ನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ವಿಜ್ಞಾನಿಗಳು ಭಾಗವಹಿಸಿದ್ದಾರೆ.

ಹಾಗಾದರೆ ಈ ಹಿಸ್ಟೋ-ಯೂನೆಟ್ ಹಿಂದಿನ ತಂತ್ರಜ್ಞಾನ ಹೇಗೆ ಕೆಲಸ ಮಾಡುತ್ತದೆ? ವಿಜ್ಞಾನಿಗಳು ಇದನ್ನು ಮಾನವನ ಮಿದುಳು ಕಲಿಯುವ ಮಾದರಿಯನ್ನು ಆಧರಿಸಿದ ನರಮಂಡಲ ತರಹದ ಜಾಲ (ನ್ಯೂರಲ್ ನೆಟ್‌ವರ್ಕ್) ಬಳಸಿ ರೂಪಿಸಿದ್ದಾರೆ. ಈ ಹಿಂದಿನ  ತಂತ್ರಜ್ಞಾನಗಳು ಕೇವಲ ಚಿತ್ರಗಳನ್ನು ನೋಡಿ ಒಂದು ಅಂದಾಜಿನ ಮೇಲೆ ಕ್ಯಾನ್ಸರ್ ಕೋಶಗಳ ರೂಪುರೇಷೆಯನ್ನು ಗುರುತಿಸುತ್ತಿದ್ದವು. ಇದರಿಂದಾಗಿ ಅಂಗಾಂಶಗಳ ನೈಜ ಜೈವಿಕ ಆಕಾರಗಳು ಕಂಪ್ಯೂಟರ್ ಪರದೆಯ ಮೇಲೆ ಕತ್ತರಿಸಿದಂತೆ ಅಥವಾ ಕೆಲವೊಮ್ಮೆ ತಪ್ಪಾಗಿ ಕಾಣಿಸುತ್ತಿದ್ದವು. ಆದರೆ ನಮ್ಮ ವಿಜ್ಞಾನಿಗಳು ಈ ಹೊಸ ಮಾದರಿಗೆ ಕೆಲವು ಕಟ್ಟುನಿಟ್ಟಾದ ಗಣಿತದ ನಿಯಮಗಳನ್ನು ಅಳವಡಿಸಿದ್ದಾರೆ. ಈ ನಿಯಮಗಳು ಕಂಪ್ಯೂಟರ್ ಕಡ್ಡಾಯವಾಗಿ ಅಂಗಾಂಶದ ಮೂಲ ರಚನೆ ಮತ್ತು ಅದರ ಕೇಂದ್ರಭಾಗವನ್ನು ನಿಖರವಾಗಿ ಗುರುತಿಸುವಂತೆ ಮಾಡುತ್ತವೆ. ಪರಿಣಾಮವಾಗಿ ಕ್ಯಾನ್ಸರ್ ಕೋಶಗಳ ರೂಪುರೇಷೆಯು  ಸ್ಪಷ್ಟವಾಗಿ ಮತ್ತು ನೈಜ ಆಕಾರದಲ್ಲಿ ಮೂಡಿಬರುತ್ತದೆ.

ಈ ತಂತ್ರಜ್ಞಾನದ ಅತ್ಯಂತ  ವೈಶಿಷ್ಟ್ಯವೆಂದರೆ ಅದು ತನಗೆ ತಾನೇ ತಪ್ಪುಗಳನ್ನು ಹುಡುಕಿಕೊಳ್ಳುವುದು ಮತ್ತು ಗೊಂದಲಗಳಿದ್ದರೆ ಮುಕ್ತವಾಗಿ ಒಪ್ಪಿಕೊಳ್ಳುವುದು.

ವೈದ್ಯಕೀಯ ಕ್ಷೇತ್ರದಲ್ಲಿ ಶೇ 100ರಷ್ಟು ನಿಖರತೆ ಅತ್ಯಗತ್ಯ.ಹಿಂದಿನ ಕಂಪ್ಯೂಟರ್ ಮಾದರಿಗಳು ತಮಗೆ ಗೊಂದಲವಿದ್ದರೂ ಏನೋ ಒಂದು ಅಂದಾಜು ಉತ್ತರವನ್ನು ನೀಡಿ ಸುಮ್ಮನಾಗುತ್ತಿದ್ದವು. ಇದು ರೋಗಿಗಳ ಆರೋಗ್ಯಕ್ಕೆ ಅಪಾಯಕಾರಿಯಾಗಬಲ್ಲದು. ಇದನ್ನು ಮನಗಂಡ ಸಂಶೋಧಕರು 'ಡ್ಯುಯಲ್ ಅನ್‌ಸರ್ಟೇನ್ಟಿ ಕ್ವಾಂಟಿಫಿಕೇಶನ್', ಎಂದರೆ ದ್ವಿಗುಣ ಅನಿಶ್ಚಿತತೆಯ ಅಳತೆ ಎಂಬ ಪ್ರಕ್ರಿಯೆಯನ್ನು ಇದರಲ್ಲಿ ಅಳವಡಿಸಿದ್ದಾರೆ. ಈ ವ್ಯವಸ್ಥೆಯು ಕೇವಲ ಒಂದು ಬಾರಿ ಚಿತ್ರವನ್ನು ನೋಡಿ ತೀರ್ಮಾನಕ್ಕೆ ಬರುವುದಿಲ್ಲ; ಬದಲಿಗೆ ಒಂದೇ ಚಿತ್ರವನ್ನು ವಿಭಿನ್ನ ಕೋನಗಳಲ್ಲಿ ಬರೋಬ್ಬರಿ ಇಪ್ಪತ್ತೈದು ಬಾರಿ ಸೂಕ್ಷ್ಮವಾಗಿ ಪರಿಶೀಲಿಸುತ್ತದೆ.

ಹೀಗೆ ಹಲವು ಬಾರಿ ಪರಿಶೀಲಿಸುವಾಗ ಕಂಪ್ಯೂಟರ್ ನೀಡುವ ಉತ್ತರಗಳಲ್ಲಿ ಏನಾದರೂ ವ್ಯತ್ಯಾಸಗಳಿದ್ದರೆ, ತಂತ್ರಜ್ಞಾನವು ಎರಡು ರೀತಿಯ ಗೊಂದಲಗಳನ್ನು ಗುರುತಿಸುತ್ತದೆ. ಮೊದಲನೆಯದಾಗಿ, ಪ್ರಯೋಗಾಲಯದಲ್ಲಿ ರಾಸಾಯನಿಕ ಬಣ್ಣಗಳನ್ನು ಬಳಸುವಾಗ ಚಿತ್ರದಲ್ಲಿ ಉಂಟಾಗುವ ಮಸುಕುತನ. ಎರಡನೆಯದಾಗಿ, ಸ್ವತಃ ಕಂಪ್ಯೂಟರ್‌ಗೆ ಆ ಚಿತ್ರವನ್ನು ಅರ್ಥಮಾಡಿಕೊಳ್ಳಲು ಇರುವ ತರಬೇತಿಯ ಕೊರತೆ.

ಈ ಎರಡೂ ಗೊಂದಲದ ಜಾಗಗಳನ್ನು ತಂತ್ರಜ್ಞಾನವು ಪ್ರತ್ಯೇಕವಾಗಿ ಗುರುತಿಸಿ, 'ಇಲ್ಲಿ ನನಗೆ ಪೂರ್ಣ ನಂಬಿಕೆಯಿಲ್ಲ, ಒಮ್ಮೆ ನೀವೇ ದೃಢಪಡಿಸಿ' ಎಂದು ವೈದ್ಯರಿಗೆ ಎಚ್ಚರಿಕೆಯ ಸಂದೇಶ ನೀಡುತ್ತದೆ. ಪ್ರಸ್ತುತ ಲಭ್ಯವಿರುವ ಯಾವುದೇ ತಂತ್ರಜ್ಞಾನದಲ್ಲೂ ಇವೆರಡೂ ವೈಶಿಷ್ಟ್ಯಗಳು ಒಟ್ಟಿಗೆ ಇರಲಿಲ್ಲ. ಮೂರು ಪ್ರಮುಖ ವೈದ್ಯಕೀಯ ದತ್ತಾಂಶಗಳ ಮೇಲೆ ನಡೆಸಿದ ಕಠಿಣ ಪರೀಕ್ಷೆಗಳಲ್ಲಿ  ಹಿಸ್ಟೋ-ಯೂನೆಟ್ ಹಳೆಯ ಎಲ್ಲಾ ಮಾದರಿಗಳಿಗಿಂತ ಹೆಚ್ಚು ನಿಖರ ಮತ್ತು ನಂಬಿಕಸ್ಥ ಫಲಿತಾಂಶವನ್ನು ನೀಡಿದೆ. ಆದರೆ ಚಿತ್ರವನ್ನು ಹಲವು ಬಾರಿ ಪ್ರಕ್ರಿಯೆಗೊಳಿಸಬೇಕಿರುವುದರಿಂದ ಇದು ಸಾಮಾನ್ಯ ಕಂಪ್ಯೂಟರ್‌ಗಳಿಗಿಂತ ಸ್ವಲ್ಪ ಹೆಚ್ಚಿನ ಸಮಯ ತೆಗೆದುಕೊಳ್ಳುತ್ತದೆ ಅಷ್ಟೇ.

ನಮ್ಮ ನಗರಗಳ ದೊಡ್ಡ ಆಸ್ಪತ್ರೆಗಳಲ್ಲಿ ದಿನವಿಡೀ ನೂರಾರು ಬಯಾಪ್ಸಿ ವರದಿಗಳನ್ನು ಪರಿಶೀಲಿಸುವ ರೋಗಶಾಸ್ತ್ರಜ್ಞರಿಗೆ ಈ ತಂತ್ರಜ್ಞಾನ ದೊಡ್ಡ ವರವಾಗಲಿದೆ.

ಇಡೀ ಅಂಗಾಂಶದ ಚಿತ್ರವನ್ನು ಜಾಲಾಡುವ ಬದಲು, ಹಿಸ್ಟೋ-ಯೂನೆಟ್ ಗುರುತಿಸಿಕೊಡುವ ಅತ್ಯಂತ ಕ್ಲಿಷ್ಟಕರವಾದ ಮತ್ತು ಗೊಂದಲದ ಜಾಗಗಳನ್ನು ಮಾತ್ರ ವೈದ್ಯರು ತಪಾಸಣೆ ಮಾಡಿದರೆ ಸಾಕಾಗುತ್ತದೆ. ಇದರಿಂದ ವೈದ್ಯರ ಅಮೂಲ್ಯ ಸಮಯ ಉಳಿತಾಯವಾಗುವುದಲ್ಲದೆ, ರೋಗಿಗಳಿಗೆ ಅತ್ಯಂತ ವೇಗವಾಗಿ ಮತ್ತು ಸುರಕ್ಷಿತವಾಗಿ ನಿಖರವಾದ ವರದಿಗಳು ಸಿಗಲಿವೆ.

ಮುಂಬರುವ ದಿನಗಳಲ್ಲಿ ತನ್ಮೂಲಕ ಕ್ಯಾನ್ಸರ್‌ಗೆ ತಡವಿಲ್ಲದೆ ಸೂಕ್ತ ಸಮಯದಲ್ಲಿ ಚಿಕಿತ್ಸೆ ಆರಂಭಿಸಿ, ಲಕ್ಷಾಂತರ ಜನರ ಪ್ರಾಣ ಉಳಿಸಲು ಭಾರತೀಯ ಮೂಲದ ಈ ನೂತನ ತಂತ್ರಜ್ಞಾನ ನಾಂದಿ ಹಾಡಲಿದೆ. ❖

Publication Date
03/06/2026

Presented by ಪ್ರಜಾವಾಣಿ

## ❖ ಹಣದುಬ್ಬರದ ವಾಸ್ತವಿಕ ವಿವರ ನೀಡಲು ಕ್ರಮ: ಡಬ್ಲ್ಯುಪಿಐ ಬದಲು ಪಿಪಿಐ

- ಹಣದುಬ್ಬರದ ಮೌಲ್ಯಮಾಪನವನ್ನು ಹೆಚ್ಚು ವಾಸ್ತವಿಕವಾಗಿಸಲು, ಸಗಟು ಬೆಲೆ ಸೂಚ್ಯಂಕವನ್ನು (ಡಬ್ಲ್ಯುಪಿಐ) ಕ್ರಮೇಣವಾಗಿ ರದ್ದುಗೊಳಿಸಿ, ಉತ್ಪಾದನೆ, ತಯಾರಿಕಾ ಮತ್ತು ಸೇವೆಗಳ ಬೆಲೆಗಳನ್ನು ವಿವರವಾಗಿ ಒಳಗೊಂಡಿರುವ ಉತ್ಪಾದಕ ಬೆಲೆ ಸೂಚ್ಯಂಕವನ್ನು (ಪಿಪಿಐ) ಪರಿಚಯಿಸಲು ಕೇಂದ್ರ ಸರ್ಕಾರ ಮುಂದಾಗಿದೆ.
- "ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯು (ಡಿಪಿಐಐಟಿ) 2022-23ರ ಮೂಲ ವರ್ಷವನ್ನು ಆಧಾರವಾಗಿಸಿಕೊಂಡು ಜೂನ್ 15ರಂದು ಪರಿಷ್ಕೃತ ಡಬ್ಲ್ಯುಪಿಐ ಸರಣಿ ಬಿಡುಗಡೆ ಮಾಡಲಿದೆ. ಇದು ಪ್ರಸ್ತುತ ಇರುವ 2011-12ರ ಮೂಲ ವರ್ಷದ ಬದಲಾಗಿರಲಿದೆ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಪ್ರಧಾನ ಆರ್ಥಿಕ ಸಲಹೆಗಾರ ಪ್ರವೀಣ್ ಮತ್ತೋ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದ್ದಾರೆ.
- ಪರಿಷ್ಕೃತ ಸರಣಿ ಬಿಡುಗಡೆಗೊಂಡ ದಿನಾಂಕದಿಂದ ಐದು ವರ್ಷದ ಬಳಿಕ ಪಿಪಿಐ ಜಾರಿಗೆ ಬರಲಿದ್ದು, ಡಬ್ಲ್ಯುಪಿಐ ಸ್ಥಗಿತಗೊಳ್ಳಲಿದೆ ಎಂದು ಹೇಳಿದ್ದಾರೆ.
- ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಶಿಫಾರಸು ಮೇರೆಗೆ ಡಬ್ಲ್ಯುಪಿಐನಿಂದ ಪಿಪಿಐಗೆ ಬದಲಾವಣೆ ಮಾಡಲು ಮುಂದಾಗಿದೆ.
- ಉತ್ಪಾದನೆ ಮತ್ತು ತಯಾರಿಕಾ ಪಿಪಿಐನಿಂದ ಸ್ಪಷ್ಟವಾಗಿ ವಸ್ತುಗಳ ಬೆಲೆಯನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳಿದ್ದಾರೆ.
- 1942ರಲ್ಲಿ ಮೊದಲ ಬಾರಿಗೆ ಡಬ್ಬುಪಿಐ ಅನ್ನು ಪರಿಚಯಿಸಲಾಗಿತ್ತು.ಇದಕ್ಕೆ 1939 ಮೂಲ ವರ್ಷ ವಾಗಿತ್ತು. ಇಲ್ಲಿಯವರೆಗೆ ಏಳು ಬಾರಿ ಪರಿಷ್ಕರಣೆ ನಡೆದಿದ್ದು, ಕೊನೆಯದಾಗಿ 2017ರಲ್ಲಿ ಪರಿಷ್ಕರಣೆ ಆಗಿತ್ತು. ಇದಕ್ಕೆ 2011-12 ಮೂಲವರ್ಷವಾಗಿದೆ.
- ಹೊಸ ಸರಣಿಯಲ್ಲಿ ಉತ್ಪನ್ನಗಳ ಸಂಖ್ಯೆಯು 697ರಿಂದ 957ಕ್ಕೆ ಹೆಚ್ಚಳ ವಾಗಿದೆ. ವಿದ್ಯುತ್ ಗುಂಪಿನಲ್ಲಿ ಸೌರ ಮತ್ತು ಪವನದಂತಹ ಶಕ್ತಿಯ ಮೂಲಗಳನ್ನು ಸೇರಿಸಲಾಗಿದೆ. ಕಚ್ಚಾ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲವನ್ನು ಪ್ರಾಥಮಿಕ ವಸ್ತುಗಳಿಂದ ಇಂಧನ ಮತ್ತು ವಿದ್ಯುತ್‌ಗೆ ವರ್ಗಾಯಿಸಲಾಗಿದೆ ಎಂದು ಆರ್ಥಿಕ ಸಲಹೆಗಾರ ಕಚೇರಿಯ ಉಪ ಮಹಾನಿರ್ದೇಶಕ ದಿಲೀಪ್ ಕುಮಾರ್ ಸಿನ್ಹಾ ತಿಳಿಸಿದ್ದಾರೆ.

## ❖ 'ಬ್ರಿಕ್ಸ್ ಸಭೆಯಲ್ಲಿ 11 ದೇಶಗಳ ಪ್ರತಿನಿಧಿಗಳು'

- ಒಡಿಶಾದ ಪುರಿಯಲ್ಲಿ ಜೂನ್ 3ರಿಂದ 5ರವರೆಗೆ ನಡೆಯಲಿರುವ ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ವಿಪತ್ತು ಅಪಾಯ ತಗ್ಗಿಸುವ ಕುರಿತ ಎರಡನೇ ತಾಂತ್ರಿಕ ಸಭೆಯಲ್ಲಿ 11 ರಾಷ್ಟ್ರ ಗಳ ಪ್ರತಿನಿಧಿಗಳು ಭಾಗಿಯಾಗಲಿದ್ದಾರೆ.
- 'ವಿಪತ್ತು ಸಂದರ್ಭಗಳನ್ನು ಎದುರಿಸಲು ಕೈಗೊಂಡಿರುವ ಸಿದ್ಧತೆ, ಪರಿಣಾಮಕಾರಿ ಚಂಡಮಾರುತ ನಿರ್ವಹಣೆ, ಮುನ್ಸೂಚನಾ ವ್ಯವಸ್ಥೆಯಲ್ಲಿ ಒಡಿಶಾ ಜಾಗತಿಕವಾಗಿ ಜನಪ್ರಿಯತೆ ಪಡೆದಿರುವುದರಿಂದ ರಾಜ್ಯವು ಸಮಾವೇಶದ ಆತಿಥ್ಯವನ್ನು ವಹಿಸಿದೆ' ಎಂದು ಕಂದಾಯ ಮತ್ತು ವಿಪತ್ತು ನಿರ್ವಹಣಾ ಸಚಿವ ಸುರೇಶ್ ಪೂಜಾರಿ ತಿಳಿಸಿದ್ದಾರೆ.
- ಭಾರತ, ಬ್ರೆಜಿಲ್, ರಷ್ಯಾ, ಚೀನಾ, ದಕ್ಷಿಣ ಆಫ್ರಿಕಾ, ಸೌದಿ ಅರೇಬಿಯಾ, ಈಜಿಪ್ಟ್, ಅರಬ್ ಸಂಯುಕ್ತ ಸಂಸ್ಥಾನ (ಯುಎಇ), ಇಥಿಯೋಪಿಯಾ, ಇರಾನ್, ಇಂಡೋನೇಷ್ಯಾ ದೇಶದ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ ಎಂದು ಅವರು ತಿಳಿಸಿದ್ದಾರೆ.
- ವಿಪತ್ತು ಅಪಾಯ ತಗ್ಗಿಸುವ ಕುರಿತ ಮೊದಲ ತಾಂತ್ರಿಕ ಸಭೆಯು ಏಪ್ರಿಲ್ 29 ಮತ್ತು 30ರಂದು ವರ್ಚುವಲ್ ಆಗಿ ನಡೆದಿತ್ತು.

## ❖ ವಲಸೆ, ವಿದೇಶಿಗರ ನಿಯಮಗಳ ಬದಲಾವಣೆ

- ಭಾರತಕ್ಕೆ 180 ದಿನಗಳ ಅಥವಾ ಅದಕ್ಕಿಂತ ಕಡಿಮೆ ಅವಧಿಗೆ ವೀಸಾ ಪಡೆಯುವ ವಿದೇಶಿಗರು ಅವಧಿ ವಿಸ್ತರಿಸಿಕೊಳ್ಳಬೇಕು ಎಂಬುದಾದರೆ, 180 ದಿನಗಳು ಪೂರ್ಣಗೊಳ್ಳುವ ಮೊದಲೇ ನೋಂದಣಿ ಕಚೇರಿಯಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕು ಎಂದು ಕೇಂದ್ರ ಸರ್ಕಾರವು ಹೊಸ ನಿಯಮ ರೂಪಿಸಿದೆ.
- ವಲಸೆ ಮತ್ತು ವಿದೇಶಿಗರ ನಿಯಮಗಳು-2025ಕ್ಕೆ ತಿದ್ದುಪಡಿ ತಂದು, ಕೇಂದ್ರ ಗೃಹ ಸಚಿವಾಲಯವು ಸೋಮವಾರ ಗೆಜೆಟ್ ಅಧಿಸೂಚನೆ ಹೊರಡಿಸಿದೆ. 180 ದಿನಗಳ ಅವಧಿ ಪೂರ್ಣಗೊಂಡ 14 ದಿನಗಳ ಒಳಗಾಗಿ ನೋಂದಣಿ ಅಧಿಕಾರಿಗೆ ಮಾಹಿತಿ ನೀಡಬೇಕು ಎಂಬುದು ಹಳೇ ನಿಯಮವಾಗಿತ್ತು. ತೀರಾ ಅಗತ್ಯ ಸಂದ ರ್ಭಗಳಲ್ಲಿ ಮಾತ್ರವೇ ವಿದೇಶಿಗರ ವೀಸಾ ಅವಧಿಯನ್ನು ವಿಸ್ತರಿಸಬಹುದು ಎಂದು ಹೊಸ ನಿಯಮಗಳಲ್ಲಿದೆ.
- ಪೋಷಕರಲ್ಲಿ ಒಬ್ಬರು ಭಾರತೀಯರಾಗಿದ್ದು,ತಮಗೆ ಹುಟ್ಟುವ ಮಕ್ಕಳಿಗೆ ಭಾರತದ ಪೌರತ್ವ ಪಡೆದುಕೊಳ್ಳಬೇಕಿದ್ದರೆ ಅಥವಾ ಪೌರತ್ವ ವಾಪಸು ಮಾಡಬೇಕಿದ್ದರೆ ಅಂಥವರು ಮಗುವಿನ ಜನನದ 30 ದಿನಗಳ ಒಳಗಾಗಿ ನೋಂದಣಿ ಅಧಿಕಾರಿಗೆ ಮಾಹಿತಿ ನೀಡಬೇಕಿತ್ತು.
- ಈಗ ಈ ನಿಯಮವನ್ನು ಸರಳಗೊಳಿಸಲಾಗಿದೆ. ಈಗ ಪೌರತ್ವ ವಾಪಸು ಪಡೆದುಕೊಳ್ಳುವಾಗ ಮಾತ್ರವೇ ಮಾಹಿತಿ ನೀಡಿದರೆ ಸಾಕು. ಮಗು ಭಾರತದಲ್ಲಿ ಇರುವಾಗಲೇ ಬೇರೆ ದೇಶದ ಪೌರತ್ವ ಪಡೆದುಕೊಂಡರೆ, 30 ದಿನಗಳ ಒಳಗೆ ನೋಂದಣಿ ಅಧಿಕಾರಿಗಳಿಗೆ ಪೋಷಕರು ಮಾಹಿತಿ ನೀಡಬೇಕು ಎಂಬ ಅಂಶ ಹೊಸ ನಿಯಮಗಳಲ್ಲಿದೆ.

Dr. Rajkumar IAS/KAS Academy

## ❖ ಹೈಕೋರ್ಟ್‌ಗೆ ಆರು ನ್ಯಾಯಮೂರ್ತಿಗಳ ನೇಮಕ: ಕೊಲಿಜಿಯಂ

- ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳಾಗಿ ಆರು ವಕೀಲರನ್ನು ನೇಮಕ ಮಾಡಲು ಸುಪ್ರೀಂ ಕೋರ್ಟ್ ಕೊಲಿಜಿಯಂ ಶಿಫಾರಸು ಮಾಡಿದೆ.
- ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದಲ್ಲಿ ಮಂಗಳವಾರ ನಡೆದ ಕೊಲಿಜಿಯಂ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳ ಲಾಗಿದೆ. ಸುಪ್ರೀಂ ಕೋರ್ಟ್ ವಕೀಲ ರಾಘವೇಂದ್ರ ಸೀತಾರಾಮ್ ಶ್ರೀವತ್ಸ, ಹೈಕೋರ್ಟ್ ವಕೀಲರಾದ ಹೇಮಾ ಕುಲಕರ್ಣಿ, ಸುಬ್ರಹ್ಮಣ್ಯ ರಂಗರಾವ್, ತಡಗವಾಡಿ ಪ್ರಕಾಶ್ ವಿವೇಕಾನಂದ, ಬಕ್ಕೇಶ್ವರ ಪ್ರಮೋದ್ ಮತ್ತು ಹೊಂಬೇಗೌಡ ಶಾಂತಿ ಭೂಷಣ ಅವರ ಹೆಸರನ್ನು ಶಿಫಾರಸು ಮಾಡಲಾಗಿದೆ.
- ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಗಳಾಗಿ ಮೂವರು ನ್ಯಾಯಾಂಗ ಅಧಿಕಾರಿಗಳನ್ನು ನೇಮಿಸಲು ಕೇಂದ್ರ ಸರ್ಕಾರ ಇತ್ತೀಚೆಗೆ ಅನುಮೋದನೆ ನೀಡಿತ್ತು. ಇದರಿಂದಾಗಿ ಹೈಕೋರ್ಟ್ ನ್ಯಾಯಮೂರ್ತಿಗಳ ಸಂಖ್ಯೆ 48ಕ್ಕೆ ಏರಿತ್ತು.

## ❖ ಶಾಂಘೈ ಸಹಕಾರ ಸಂಸ್ಥೆ ಶೃಂಗದಲ್ಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ: ಭಾರತ-ಕಿರ್ಗಿಸ್ತಾನ್ ಪಾಲುದಾರಿಕೆ ವೃದ್ಧಿಗೆ ಸಂಕಲ್ಪ

- ಕೈಗಾರಿಕಾ ವಲಯದಲ್ಲಿ ಪರಸ್ಪರ ಸಹಕಾರ ಹೊಂದುವ ನಿಟ್ಟಿನಲ್ಲಿ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಕಿರ್ಗಿಸ್ತಾನ್ ಗಣರಾಜ್ಯದ ಆರ್ಥಿಕ ಮತ್ತು ವಾಣಿಜ್ಯ ಸಚಿವ ಬಕಿತ್ ಸಿಡಿಕೋವ್ ಅವರೊಂದಿಗೆ ಬಿಷೇಕ್‌ನಲ್ಲಿ ದ್ವಿಪಕ್ಷೀಯ ಮಾತುಕತೆ ನಡೆಸಿದರು.
- ಆರ್ಥಿಕವಾಗಿ ತೊಡಗಿಸಿಕೊಳ್ಳುವಿಕೆ, ಕೈಗಾರಿಕಾ ಸಹಕಾರ ಮತ್ತು ವ್ಯಾಪಾರ ಪಾಲುದಾರಿಕೆಯನ್ನು ಗಟ್ಟಿಗೊಳಿಸುವ ಮಾರ್ಗಗಳ ಬಗ್ಗೆ ಉಭಯ ದೇಶಗಳ ನಾಯಕರು ಚರ್ಚಿಸಿದರು. ಸಚಿವ ಕುಮಾರಸ್ವಾಮಿ ಅವರೊಂದಿಗೆ ಕಿರ್ಗಿಸ್ತಾನ್ ಗಣರಾಜ್ಯದಲ್ಲಿನ ಭಾರತದ ರಾಯಭಾರಿ ಬೀರೇಂದರ್ ಸಿಂಗ್ ಯಾದವ್ ಕೂಡ ಭಾಗಿಯಾಗಿದ್ದರು.
- ಯುರೇಷಿಯಾ (ಏಷ್ಯಾ-ಯುರೋಪ್) ಭಾಗದಲ್ಲಿ ಪ್ರಾದೇಶಿಕ ಸಹಕಾರ, ಆರ್ಥಿಕ ಒಗ್ಗೂಡುವಿಕೆ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ನಿರಂತರವಾಗಿ ಪ್ರತಿಪಾದಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತವು ಶಾಂಘೈ ಸಹಕಾರ ಸಂಸ್ಥೆ (ಎಸ್‌ಸಿಒ) ಸದಸ್ಯ ರಾಷ್ಟ್ರಗಳೊಂದಿಗೆ ತನ್ನ ಸಂಬಂಧವನ್ನು ಇನ್ನಷ್ಟು ಗಟ್ಟಿಗೊಳಿಸುತ್ತಿರುವುದರಿಂದ ಈ ಸಭೆ ಮಹತ್ವದ್ದಾಗಿದೆ ಎಂದು ಕುಮಾರಸ್ವಾಮಿ ತಿಳಿಸಿದರು.
- ಭದ್ರತೆ, ಆರ್ಥಿಕ ಅಭಿವೃದ್ಧಿ, ಸಂಪರ್ಕ, ಏಕತೆ, ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಗೆ ಗೌರವ ಮತ್ತು ಪರಿಸರ ಸಂರಕ್ಷಣೆಯನ್ನು ಒಳಗೊಂಡ 'ಸುರಕ್ಷಿತ ಶಾಂಘೈ ಸಹಕಾರ ಸಂಸ್ಥೆಯ ಅಗತ್ಯತೆ ಪ್ರಧಾನಿ ನರೇಂದ್ರ ಮೋದಿ ಅವರ ದೃಷ್ಟಿಕೋನವಾಗಿದೆ ಎಂದು ಹೇಳಿದರು.
- ಮೇಕ್ ಇನ್ ಇಂಡಿಯಾ, ಸ್ಟಾರ್ಟ್-ಅಪ್ ಇಂಡಿಯಾ, ಪಿಎಂ ಗತಿಶಕ್ತಿ ಮತ್ತು ಉತ್ಪಾದನೆ ಸಂಬಂಧಿತ ಪ್ರೋತ್ಸಾಹಕ (ಪಿಎಲ್‌ಐ) ಯೋಜನೆಗಳಂತಹ ಪ್ರಮುಖ ಉಪಕ್ರಮಗಳ ಬಗ್ಗೆ ಶಾಂಘೈ ಸಹಕಾರ ಸಂಸ್ಥೆ ವೇದಿಕೆಗಳಲ್ಲಿ ಎಚ್.ಡಿ. ಕುಮಾರಸ್ವಾಮಿ ಅವರು ಪ್ರಸ್ತಾಪಿಸಿದರು.

## ❖ ನಿಲುವುಗಲ್ಲು ಶಾಸನ ಪತ್ತೆ

- ಇಲ್ಲಿನ ಹೋಬಳಿ ವ್ಯಾಪ್ತಿಯಲ್ಲಿ ಮೂರು ದಿನಗಳಿಂದ 'ಭಾರತಶ್ರೀ' ಯೋಜನೆಯಡಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯಿಂದ (ಎಎಸ್‌ಐ) ಶಾಸನಗಳ ಡಿಜಿಟಲೀಕರಣ ಪ್ರಗತಿಯಲ್ಲಿದೆ. ಇದೇ ವೇಳೆ ಬುಧವಾರ ನಿಟ್ಟೂರು ಗ್ರಾಮದಲ್ಲಿ ವಿಜಯನಗರ ಕಾಲದ ನಿಲುವುಗಲ್ಲು ಶಾಸನ ಪತ್ತೆಯಾಗಿದೆ.
- 'ನಿಟ್ಟೂರು ಗ್ರಾಮದ ಆಂಜನೇಯ ದೇವಸ್ಥಾನದ ಮುಂದೆ ಇರುವ ನಿಲುವುಗಲ್ಲು ಶಾಸನದ ಅರ್ಧ ಭಾಗ ಭೂಮಿಯಲ್ಲಿ ಹೂತು ಹೋಗಿದ್ದು ಉಳಿದರ್ಧ ಕಂಡುಬರುತ್ತಿದೆ. ನಿಟ್ಟೂರು ಮತ್ತು ಉಡಗೋಳ ಗ್ರಾಮಗಳಲ್ಲಿನ ಅಶೋಕನ ಕಾಲದ ಶಿಲಾಶಾಸನ, ತೆಕ್ಕಲಕೋಟೆಯ ಬಸವೇಶ್ವರ ದೇವಸ್ಥಾನದ ಮುಂದಿನ ಬಿಜ್ಜಳನ ಕಾಲದ ಶಾಸನ ಹಾಗೂ ಗೌಡ್ರ ಮೂಲೆಯಲ್ಲಿರುವ ಕೆರೆ ದಾನ ಶಾಸನಗಳ ಪಡಿಯಚ್ಚು

ತೆಗೆದುಕೊಳ್ಳಲಾಗಿದೆ' ಎಂದು ಎಎಸ್‌ಐ ಸಹಾಯಕ ಅಧೀಕ್ಷಕ, ಶಾಸನತಜ್ಞ ಅನಿಲ್ ಕುಮಾರ್ ಆರ್. ವಿ. ತಿಳಿಸಿದರು.

- 'ಲಭ್ಯವಾದ ಶಾಸನದಲ್ಲಿ 17 ಸಾಲುಗಳಿವೆ. ಇದರ ಕಾಲಮಾನ ಶಾಲಿವಾಹನಶಕ ವರ್ಷ 1465 ಶುಭಕೃತ ಸಂವತ್ಸರ ಭಾದ್ರಪದ ಶುದ್ಧ ಗುರುವಾರ ಎಂದು ನಮೂದಾಗಿದೆ. ಇದು ವಿಜಯನಗರದ ಸದಾಶಿವರಾಯನ ಆಳ್ವಿಕೆಯ ಅವಧಿಯದ್ದು ಎಂದು ತೋರುತ್ತದೆ.ಶ್ರೀವಿಟ್ಟ ಅಡೆಯ ದೇವರ ಅಮೃತ ಪಡಿಗೆ ದಾನ ನೀಡಿದ ಅಂಶ ಒಳಗೊಂಡಿದೆ' ಎಂದರು.
- ಮೈಸೂರು ಶಾಸನ ನಿರ್ದೇಶಕರ ಕಚೇರಿಯ ಸಿಬ್ಬಂದಿ ನಾಗೇಂದ್ರ, ನಿಶಾಂತ್ ಕುಮಾರ್ ಗೌರವ್, ಇತಿಹಾಸ ಸಂಶೋಧನಾರ್ಥಿಗಳಾದ ಮನೋಹರ ಸಿ.ಎಂ, ಎಂ ಹೊನ್ನೂರ, ನಿಟ್ಟೂರು ಮಂಜುನಾಥ ಭಾಗವಹಿಸಿದ್ದರು.

## ❖ ವಿಪತ್ತು ನಿರ್ವಹಣೆ: ಬ್ರಿಕ್ಸ್ ಗುಂಪಿನ ಸಭೆ ಆರಂಭ

- ಬ್ರಿಕ್ಸ್ ವಿಪತ್ತು ಅಪಾಯ ತಗ್ಗಿಸುವ ಕುರಿತ ಕಾರ್ಯಕಾರಿ ಗುಂಪಿನ ಎರಡನೇ ತಾಂತ್ರಿಕ ಸಭೆ ಪುರಿಯಲ್ಲಿ ಆರಂಭವಾಯಿತು.
- 'ಬ್ರಿಕ್ಸ್' ಗುಂಪಿನ 11 ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳು ಪಾಲ್ಗೊಂಡಿರುವ ಈ ಸಭೆಯು ಜೂನ್ 5ರವರೆಗೆ ನಡೆಯಲಿದೆ. ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಅವರು ಗುರುವಾರ ನಡೆಯುವ ಗೋಷ್ಠಿಯಲ್ಲಿ ಪಾಲ್ಗೊಳ್ಳಲಿದ್ದಾರೆ.
- 'ಭಾರತವು ಬ್ರಿಕ್ಸ್‌ನ ಅಧ್ಯಕ್ಷ ಸ್ಥಾನ ವಹಿಸಿದ ಬಳಿಕ ಭೌತಿಕವಾಗಿ ನಡೆಯುತ್ತಿರುವ ಮೊದಲ ತಾಂತ್ರಿಕ ಸಭೆ ಇದಾಗಿದೆ. ಏಪ್ರಿಲ್ 29 ಹಾಗೂ 30ರಂದು ಈ ಸಭೆಯು ವರ್ಚುವಲ್ ಆಗಿ ನಡೆದಿತ್ತು' ಎಂದು ಒಡಿಶಾದ ಕಂದಾಯ ಮತ್ತು ವಿಪತ್ತು ನಿರ್ವಹಣಾ ಸಚಿವ ಸುರೇಶ್ ಪೂಜಾರಿ ಹೇಳಿದರು.
- 'ಒಡಿಶಾದಲ್ಲಿ ಇದೇ ಮೊದಲ ಬಾರಿಗೆ ಈ ಸಭೆಯು ನಡೆಯುತ್ತಿದ್ದು, ಬ್ರಿಕ್ಸ್ ರಾಷ್ಟ್ರಗಳ ನೀತಿ ನಿರೂಪಕರು ಹಾಗೂ ವಿಪತ್ತು ನಿರ್ವಹಣಾ ತಜ್ಞರು ಈ ಸಭೆಯಲ್ಲಿ ಪಾಲ್ಗೊಳ್ಳುವರು' ಎಂದೂ ತಿಳಿಸಿದ್ದಾರೆ.

## ❖ ಕಣ್ಣಿನ ಪೊರೆಯ ಉಚಿತ ಶಸ್ತ್ರಚಿಕಿತ್ಸೆ ಮೂಲಕ ಹಲವರಿಗೆ ನೆರವು: ಐದು ಲಕ್ಷ ಮಂದಿಗೆ 'ಆಶಾಕಿರಣ'

- ಖಾಸಗಿ ವ್ಯವಸ್ಥೆಯಡಿ ಸಾವಿರಾರು ರೂಪಾಯಿ ವೆಚ್ಚದ ಕ್ಯಾಟರಾಕ್ಸ್ (ಕಣ್ಣಿನ ಪೊರೆ) ಶಸ್ತ್ರಚಿಕಿತ್ಸೆಯನ್ನು 'ಆಶಾಕರಣ' ಯೋಜನೆಯಡಿ ಉಚಿತವಾಗಿ ನಡೆಸಲಾಗುತ್ತಿದ್ದು, ದೃಷ್ಟಿ ಸಮಸ್ಯೆ ಎದುರಿಸುತ್ತಿದ್ದವರಲ್ಲಿ 5 ಲಕ್ಷಕ್ಕೂ ಅಧಿಕ ಮಂದಿಗೆ ಈ ಶಸ್ತ್ರಚಿಕಿತ್ಸೆ ಬೆಳಕಾಗಿದೆ.
- ಮಧುಮೇಹಿಗಳು ಹಾಗೂ 40 ವರ್ಷ ಮೇಲ್ಪಟ್ಟವರಲ್ಲಿ ಹೆಚ್ಚಾಗಿ ಕಣ್ಣಿನ ಪೊರೆ ಕಾಣಿಸಿಕೊಳ್ಳುತ್ತಿದೆ. ಪ್ರಾರಂಭಿಕ ಹಂತದಲ್ಲಿಯೇ ಸಮಸ್ಯೆ ಯನ್ನು ಪತ್ತೆ ಮಾಡದಿದ್ದಲ್ಲಿ, ದೃಷ್ಟಿ ಮಸುಕಾಗಲಿದೆ. ಕಣ್ಣಿನ ಪೊರೆ ಸಮಸ್ಯೆಗೆ ಶಸ್ತ್ರಚಿಕಿತ್ಸೆಯೊಂದೆ ಪರಿಹಾರವಾಗಿದೆ. ಖಾಸಗಿ ವ್ಯವಸ್ಥೆಯಡಿ ಈ ಶಸ್ತ್ರಚಿಕಿತ್ಸೆ ದುಬಾರಿಯಾಗಿದ್ದು, ಕಷ್ಟೊಂದಕ್ಕೆ ಕೃತಕ ಮಸೂರ ಅಳವಡಿಸಲು * 1.5 ಲಕ್ಷದವರೆಗೂ ಪಡೆಯಲಾಗುತ್ತಿದೆ. ಇದರಿಂದಾಗಿ ಹಲವರು ದೃಷ್ಟಿ ದೋಷದ ನಡುವೆಯೇ ಜೀವನ ಸಾಗಿಸುತ್ತಿದ್ದಾರೆ. ಅಂತಹವರ ಕಣ್ಣಿನ ಆರೋಗ್ಯ ಬಲವರ್ಧನೆಯ ಉದ್ದೇಶದಿಂದ ಆರೋಗ್ಯ ಇಲಾಖೆ ಆಶಾಕಿರಣ ಯೋಜನೆ ರೂಪಿಸಿದೆ. ಮೂರು ವರ್ಷಗಳಲ್ಲಿ 4.45 ಲಕ್ಷ ಫಲಾನುಭವಿಗಳಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. 71 ಸಾವಿರ ಮಂದಿ ಸರ್ಕಾರಿ ವ್ಯವಸ್ಥೆಯಡಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ.
- ಡಿಜಿಟಲ್ ಸಾಧನಗಳ ಅತಿಯಾದ ಬಳಕೆ, ವಾಯು ಮಾಲಿನ್ಯ ಸೇರಿ ವಿವಿಧ ಕಾರಣಗಳಿಂದ ಚಿಕ್ಕ ವಯಸ್ಸಿನಲ್ಲಿಯೇ ದೃಷ್ಟಿ ದೋಷ ಸಮಸ್ಯೆಗೆ ಒಳಪಡುವವರ ಸಂಖ್ಯೆ ರಾಜ್ಯದಲ್ಲಿ ಹೆಚ್ಚಳವಾಗುತ್ತಿದೆ. ಮಕ್ಕಳು ಹಾಗೂ ವಯಸ್ಕರಲ್ಲಿಯೂ ಕಣ್ಣಿನ ಪೊರೆ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ. ಚಿಕಿತ್ಸೆ ವಿಳಂಬವಾದಲ್ಲಿ ಸಮಸ್ಯೆ ಗಂಭೀರ ಸ್ವರೂಪ ಪಡೆದು, ದೃಷ್ಟಿ ನಷ್ಟವಾಗುವ ಸಾಧ್ಯತೆಯಿರುತ್ತದೆ. ಆದ್ದರಿಂದ ಆರಂಭಿಕ ಹಂತದಲ್ಲಿಯೇ ನೇತ್ರ ಸಮಸ್ಯೆ ಪತ್ತೆ ಮಾಡಿ, ಚಿಕಿತ್ಸೆ ಒದಗಿಸುವ ಉದ್ದೇಶದಿಂದ ರಾಷ್ಟ್ರೀಯ ಅಂಧತ್ವ ಮತ್ತು ದೃಷ್ಟಿಮಾಂದ್ಯತೆ ನಿಯಂತ್ರಣ ಕಾರ್ಯಕ್ರಮದಡಿ 2022ರಲ್ಲಿ ಈ ಯೋಜನೆ ಪ್ರಾರಂಭಿಸಲಾಗಿದೆ.

- **ಕಣ್ಣಿನ ತಪಾಸಣೆ:** ಯೋಜನೆಯಡಿ ಮೊದಲೆರಡು ಹಂತದಲ್ಲಿ ಆಯ್ದ ಜಿಲ್ಲೆಗಳಲ್ಲಿ ಆಶಾ ಕಾರ್ಯಕರ್ತೆಯರು ಮನೆ ಮನೆಗೆ ಭೇಟಿ ನೀಡಿ, ನೇತ್ರ ತಪಾಸಣೆ ನಡೆಸಿ ಸಮಸ್ಯೆ ಪತ್ತೆ ಮಾಡಿದ್ದರು. 2025ರ ಜುಲೈನಲ್ಲಿ ಈ ಯೋಜನೆಯನ್ನು ಮರುವಿನ್ಯಾಸ ಮಾಡಿ, ಜಿಲ್ಲಾ ಆಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ 393 'ಆಶಾಕಿರಣ ದೃಷ್ಟಿ ಕೇಂದ್ರ'ಗಳನ್ನು ಸ್ಥಾಪಿಸಿ, ಅಲ್ಲಿ ತಪಾಸಣೆ ನಡೆಸಲಾಗುತ್ತಿದೆ.
- 'ಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಶಸ್ತ್ರಚಿಕಿತ್ಸೆಯನ್ನೂ ನಡೆಸಲಾಗುತ್ತಿದೆ. ಕಣ್ಣಿನ ಪೊರೆ ಸಮಸ್ಯೆ ದೃಢಪಟ್ಟಲ್ಲಿ ಉನ್ನತ ಆರೋಗ್ಯ ಕೇಂದ್ರಗಳಿಗೆ ಶಿಫಾರಸು ಮಾಡಲಾಗುತ್ತಿದ್ದು, ಅಲ್ಲಿ ಹೆಚ್ಚಿನ ತಪಾಸಣೆಗೆ ಒಳಪಡಿಸಲಾಗುತ್ತಿದೆ. ಆಸ್ಪತ್ರೆಗಳಲ್ಲಿ ಶಾಶ್ವತ ದೃಷ್ಟಿ ಕೇಂದ್ರಗಳನ್ನು ಸ್ಥಾಪಿಸಿರುವುದರಿಂದ, ಸಾರ್ವಜನಿಕರು ಹತ್ತಿರದ ಕೇಂದ್ರಗಳಿಗೆ ತೆರಳಿ ತಪಾಸಣೆ ಮಾಡಿಸಿಕೊಳ್ಳಲು ಸಾಧ್ಯವಾಗುತ್ತಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

**ಆಶಾಕಿರಣ ದೃಷ್ಟಿ ಕೇಂದ್ರ: 2.72 ಕೋಟಿ ಮಂದಿಗೆ ತಪಾಸಣೆ**

- ರಾಜ್ಯದಲ್ಲಿ 2022ರಲ್ಲಿ ಆರಂಭವಾದ ಆಶಾಕಿರಣ ಕಾರ್ಯಕ್ರಮವನ್ನು ಎರಡು ಹಂತಗಳಲ್ಲಿ, 8 ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗಿತ್ತು. ಮೊದಲಿಗೆ ಮನೆ ಮನೆ ಪ್ರಚಾರ ನಡೆಸಿ, ಕಣ್ಣಿನ ತಪಾಸಣೆ ಮಾಡುವ ಜತೆಗೆ ಅಗತ್ಯ ಇರುವವರಿಗೆ ಉಚಿತ ಕನ್ನಡಕ ವಿತರಣೆ, ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗೆ ಕ್ರಮವಹಿಸಲಾಗಿತ್ತು. ಮೊದಲೆರಡು ಹಂತಗಳಲ್ಲಿ 1.40 ಕೋಟಿ ಜನರು ಪ್ರಾಥಮಿಕ ನೇತ್ರ ತಪಾಸಣೆಗೆ ಒಳಗಾಗಿದ್ದರು. ಅವರಲ್ಲಿ 24.50 ಲಕ್ಷ ಜನರಲ್ಲಿ ಕಣ್ಣಿನ ತೊಂದರೆ ಇರುವುದು ಪತ್ತೆಯಾಗಿತ್ತು. ಈಗ್ಯ ಆಶಾಕಿರಣ ದೃಷ್ಟಿ ಕೇಂದ್ರಗಳಲ್ಲಿ ತಪಾಸಣೆ ಮಾಡಲಾಗುತ್ತಿದ್ದು, ಯೋಜನೆ ಪ್ರಾರಂಭವಾದಾಗಿನಿಂದ ಈವರೆಗೆ 2.75 ಕೋಟಿ ಮಂದಿಗೆ ತಪಾಸಣೆ ನಡೆಸಲಾಗಿದೆ.

**3.03 ಲಕ್ಷ ಜನರಿಗೆ ಕನ್ನಡಕ**

- ದೃಷ್ಟಿ ಸಮಸ್ಯೆ ಎದುರಿಸುತ್ತಿರುವವರಿಗೆ ಈ ಯೋಜನೆಯಡಿ ಉಚಿತವಾಗಿ ಕನ್ನಡಕಗಳನ್ನೂ ವಿತರಿಸಲಾಗುತ್ತಿದೆ. ತಪಾಸಣೆಗೆ ಒಳಪಟ್ಟವರಲ್ಲಿ 3.03 ಲಕ್ಷ ಜನರಿಗೆ ಕನ್ನಡಕ ನೀಡಲಾಗಿದೆ. ಆಶಾಕಿರಣ ದೃಷ್ಟಿ ಕೇಂದ್ರಗಳಲ್ಲಿ ನೇತ್ರಾಧಿಕಾರಿಗಳು ಪರಿಶೀಲಿಸಿ, ಕನ್ನಡಕ ಒದಗಿಸುತ್ತಿದ್ದಾರೆ. ಮಕ್ಕಳಲ್ಲಿನ ದೃಷ್ಟಿ ಸಮಸ್ಯೆಗೆ ಸಂಬಂಧಿಸಿದಂತೆ ಇಲಾಖೆಯ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿ (ಆರ್‌ಬಿಎಸ್‌ಕೆ) ತಪಾಸಣೆ ನಡೆಸ ಲಾಗುತ್ತಿದೆ. ಸಮಸ್ಯೆ ಪತ್ತೆಯಾದ ಮಕ್ಕಳಿಗೆ ಹೆಚ್ಚಿನ ನೇತ್ರ ತಪಾಸಣೆ ನಡೆಸಿ, ಕನ್ನಡಕಗಳನ್ನೂ ವಿತರಿಸಲಾಗುತ್ತಿದೆ.

**❖ ರಾಜ್ಯದಲ್ಲಿ 6,158 ಭೂಮಿತಾಯಿ ರಕ್ಷಣೆ ಕಣ್ಗಾವಲು ಸಮಿತಿಗಳು ಕ್ರಿಯಾಶೀಲ: ಮಣ್ಣಿನ ಫಲವತ್ತತೆ ರಕ್ಷಣೆಗೆ ಆಂದೋಲನ**

- ದೇಶದ ಕೃಷಿಭೂಮಿ ಫಲವತ್ತತೆ ಕಾಯ್ದುಕೊಳ್ಳಲು ಮತ್ತು ರಸಗೊಬ್ಬರ ಅವಲಂಬನೆ ಕಡಿಮೆ ಮಾಡಲು ಕೇಂದ್ರ ಸರ್ಕಾರ 'ಧರತಿ ಮಾತಾ ಬಜಾವೊ' ಆಂದೋಲನ ಆರಂಭಿಸಿದೆ. ರಾಜ್ಯದ ರೈತರು ಸ್ಪಂದಿಸಿದ್ದು, 6,158 ಸಮಿತಿಗಳು ಈ ಕೆಲಸ ಮಾಡುತ್ತಿವೆ.
- ಇದರ ಪರಿಣಾಮಕಾರಿ ಅನುಷ್ಠಾನಕ್ಕೆ ಕೃಷಿ ಇಲಾಖೆ 'ಭೂಮಿತಾಯಿ ರಕ್ಷಣೆ ಕಣ್ಗಾವಲು ಸಮತಿ' ರಚಿಸಿದೆ. ರಾಜ್ಯದಲ್ಲಿ ಗ್ರಾಮ ಮಟ್ಟದಲ್ಲಿ 5,891 ಸಮಿತಿಗಳು 236 ತಾಲ್ಲೂಕು ಮತ್ತು 31 ಜಿಲ್ಲಾ ಮಟ್ಟದಲ್ಲಿ ಏಪ್ರಿಲ್‌ನಿಂದ ಕ್ರಿಯಾಶೀಲವಾಗಿವೆ.

Dr. Rajkumar IAS/KAS Academy

- ನಗರ, ಪಟ್ಟಣ ಮತ್ತು ಗ್ರಾಮದಲ್ಲೂ ಸಮಿತಿಗಳು ಮಣ್ಣಿನ ಆರೋಗ್ಯ ಕಾಪಾಡಲು ಮುಂದಾಗಿವೆ. ಬೆಳಗಾವಿ ಜಿಲ್ಲೆಯು ರಾಜ್ಯದಲ್ಲಿ ಮೊದಲ ಸ್ಥಾನದಲ್ಲಿದೆ. 502 ಗ್ರಾಮ ಪಂಚಾಯಿತಿಗಳ ಪೈಕಿ ಮೇ 31ರವರೆಗೆ 396 ಪಂಚಾಯಿತಿಗಳಲ್ಲಿ ಆಂದೋಲನ ಪೂರ್ಣವಾಗಿದೆ. ಎರಡನೇ ಸ್ಥಾನದಲ್ಲಿ ಚಿತ್ರದುರ್ಗ ಜಿಲ್ಲೆಯಿದ್ದು, 189ರ ಪೈಕಿ 109ರಲ್ಲಿ ಚಟುವಟಿಕೆಗಳು ನಡೆದಿವೆ.
- **ಏನಿದರ ಕೆಲಸ:** ವಿಪರೀತ ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳ ಬಳಕೆಯಿಂದ ಮಣ್ಣು ಅನಾರೋಗ್ಯಕ್ಕೆ ಒಳಗಾಗಿದೆ. ಮಾನವ ಹಾಗೂ ಪ್ರಾಣಿ-ಪಕ್ಷಿಗಳ ಆರೋಗ್ಯದ ಮೇಲೆ ದುಷ್ಪರಿಣಾಮಗಳು ಹೆಚ್ಚಾಗಿವೆ. ರಸಗೊಬ್ಬರದ ವೈಜ್ಞಾನಿಕ ಬಳಕೆ, ಸಾವಯವ ಗೊಬ್ಬರಕ್ಕೆ ಉತ್ತೇಜನ, ಪರ್ಯಾಯ ಗೊಬ್ಬರ ಆಯ್ಕೆ ಮುಂತಾದ ವಿಷಯಗಳ ಬಗ್ಗೆ ರೈತರಿಗೆ ಅರಿವು ಮೂಡಿಸುವುದು, ದುಷ್ಪರಿಣಾಮಗಳ ಎಚ್ಚರಿಕೆ ನೀಡುವುದು ಈ ಆಂದೋಲನದ ಉದ್ದೇಶ.
- ಗ್ರಾಮ ಪಂಚಾಯಿತಿ ಅಧ್ಯಕ್ಷರೇ ಗ್ರಾಮ ಮಟ್ಟದ ಸಮಿತಿಯ ಅಧ್ಯಕ್ಷ. ಪಂಚಾಯಿತಿ ಕಾರ್ಯದರ್ಶಿ, ಕೃಷಿ ಸಖಿ ತಂಡ, ಡ್ರೋನ್ ಬಳಕೆ ತಂಡ, ಪ್ರಗತಿಪರ ರೈತರು, ಕೃಷಿ ಉತ್ಪಾದಕರ ಸಹಕಾರ ಸಂಘದ ಪ್ರತಿನಿಧಿಗಳೂ ಇದರ ಸದಸ್ಯರಾಗಿರುತ್ತಾರೆ. ಜಿಲ್ಲಾ ಮಟ್ಟದಲ್ಲಿ ಜಂಟಿ ಕೃಷಿ ನಿರ್ದೇಶಕ, ತಾಲ್ಲೂಕು ಮಟ್ಟದಲ್ಲಿ ಸಹಾಯಕ ಕೃಷಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಮಿತಿಗಳಿವೆ.

**ಯೂರಿಯಾ ಆ್ಯಪ್: ಕಾಳಸಂತೆಗೆ ಮೂಗುದಾರ**

- 'ರಾಜ್ಯದಲ್ಲಿ ಈ ಮುಂಗಾರಿಗೆ 30.05 ಲಕ್ಷ ಟನ್ ರಸಗೊಬ್ಬರ ಬೇಡಿಕೆ ಇದೆ. ಈವರೆಗೆ 11.41 ಲಕ್ಷ ಟನ್ ಮಾತ್ರ ಸಂಗ್ರಹವಾಗಿದೆ. 18.64 ಲಕ್ಷ ಟನ್ ಕೊರತೆ ಕಾಡುತ್ತಿದೆ. ಇಷ್ಟರಲ್ಲೇ ಮುಂಗಾರು ಬೇಡಿಕೆ ಸರಿದೂಗಿಸಲು ಕೃಷಿ ಹಾಗೂ ರಸಗೊಬ್ಬರ ಅಧಿಕಾರಿಗಳಿಗೆ 'ಟಾಸ್ಕ್' ಕೊಡಲಾಗಿದೆ. ಹೀಗಾಗಿ, 'ಭೂಮಿತಾಯಿ ರಕ್ಷಣೆ ಕಣ್ಗಾವಲು ಸಮಿತಿ ಆಂದೋಲನ ಮಾದರಿಯಲ್ಲಿ ಕೆಲಸ ಮಾಡುತ್ತಿದೆ' ಎಂದು ರಸಗೊಬ್ಬರ ಸರಬರಾಜು ಅಧಿಕಾರಿಗಳು ತಿಳಿಸಿದ್ದಾರೆ.
- 'ಕಾಳಸಂತೆ ಹಾವಳಿ ತಡೆಯಲು ಸರ್ಕಾರ 'ಯೂರಿಯಾ' ಆ್ಯಪ್ ಸಿದ್ಧಗೊಳಿಸಿದೆ. ಫ್ರುಟ್ಸ್‌ನಲ್ಲಿ (FRUITS) ದಾಖಲಿಸಿದ ಪ್ರತಿ ಮಾಹಿತಿಯೂ ಈ ಆ್ಯಪ್‌ನಲ್ಲಿ ಸಿಗಲಿದೆ. ರೈತರ ಆಧಾರ್ ಸಂಖ್ಯೆ ಹಾಕಿದರೆ ಸಾಕು; ಅವರ ಹೊಲ, ಬೆಳೆ, ಮಣ್ಣಿನ ಗುಣ ಹಾಗೂ ಎಷ್ಟು ಗೊಬ್ಬರ ಅಗತ್ಯ ಎಂಬುದರ ಮಾಹಿತಿ ಸಿಗಲಿದೆ. ಅದನ್ನು ಆಧರಿಸಿ ರಸಗೊಬ್ಬರ ವಿತರಿಸಲಾಗುತ್ತಿದೆ' ಎಂದರು.

## ❖ ಡಿಕೆಶಿ ದೇಶದಲ್ಲೇ ಸಿರಿವಂತ ಮುಖ್ಯಮಂತ್ರಿ

- ದೇಶದ ಶ್ರೀಮಂತ ಶಾಸಕರ ಪಟ್ಟಿಯಲ್ಲಿ ಎರಡನೇ ಸಾಲಿನಲ್ಲಿದ್ದ ಡಿ.ಕೆ. ಶಿವಕುಮಾರ್, ಈಗ ದೇಶದ ಅತ್ಯಂತ ಶ್ರೀಮಂತ ಮುಖ್ಯಮಂತ್ರಿ ಎನಿಸಿದ್ದಾರೆ.
- 2023ರ ವಿಧಾನಸಭಾ ಚುನಾವಣೆಯ ವೇಳೆಗೆ ₹1,413 ಕೋಟಿ ಮೌಲ್ಯದಷ್ಟು ಆಸ್ತಿಯನ್ನು ಶಿವಕುಮಾರ್ ಘೋಷಿಸಿಕೊಂಡಿದ್ದರು. ಇದು ದೇಶದ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳ ಪೈಕಿ ಅತಿ ಹೆಚ್ಚು ಆಸ್ತಿ.
- ಆಂಧ್ರ ಪ್ರದೇಶ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವರು ಈವರೆಗೆ ದೇಶದ ಅತ್ಯಂತ ಶ್ರೀಮಂತ ಮುಖ್ಯಮಂತ್ರಿ (₹931 ಕೋಟಿ ಒಟ್ಟು ಆಸ್ತಿ) ಎನಿಸಿದ್ದರು. ತಮಿಳುನಾಡಿನ ಮುಖ್ಯಮಂತ್ರಿ ಜೋಸೆಫ್ ವಿಜಯ್ ಎರಡನೇ ಅತ್ಯಂತ ಶ್ರೀಮಂತ ಮುಖ್ಯಮಂತ್ರಿ (₹648 ಕೋಟಿ ಒಟ್ಟು ಆಸ್ತಿ) ಸ್ಥಾನದಲ್ಲಿದ್ದರು. ಈಗ ಚಂದ್ರಬಾಬು ನಾಯ್ಡು ಅವರನ್ನು ಎರಡನೇ ಮತ್ತು ವಿಜಯ್ ಅವರನ್ನು ಮೂರನೇ ಸ್ಥಾನಕ್ಕೆ ಸರಿಸಿ, ಮೊದಲ ಸ್ಥಾನಕ್ಕೆ ಶಿವಕುಮಾರ್ ಬಂದಿದ್ದಾರೆ.
- ಅಸ್ಸಾಂ ಮುಖ್ಯಮಂತ್ರಿ ಪೆಮಾ ಖಂಡು ₹332 ಕೋಟಿಯಷ್ಟು ಆಸ್ತಿ ಘೋಷಿಸಿಕೊಂಡಿದ್ದು, ಶ್ರೀಮಂತ ಮುಖ್ಯಮಂತ್ರಿಗಳ ಸಾಲಿನಲ್ಲಿ ನಾಲ್ಕನೇ ಸ್ಥಾನದಲ್ಲಿದ್ದಾರೆ. ದೇಶದ ಮೊದಲ ಮೂವರು ಶ್ರೀಮಂತ ಮುಖ್ಯಮಂತ್ರಿಗಳು ದಕ್ಷಿಣ ಭಾರತದವರೇ ಆಗಿದ್ದಾರೆ.

Dr. Rajkumar IAS/KAS Academy

- 2024ರಲ್ಲಿ ಮಹಾರಾಷ್ಟ್ರ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿಯಿಂದ ಆಯ್ಕೆಯಾದ ಶಾಸಕ ಪರಾಗ್ ಶಾ ತಮ್ಮಲ್ಲಿ ₹3,383 ಕೋಟಿ ಆಸ್ತಿ ಎಂದು ಘೋಷಿಸಿಕೊಂಡಿದ್ದು, ಈಗ ದೇಶದ ಅತ್ಯಂತ ಶ್ರೀಮಂತ ಶಾಸಕ ಎನಿಸಿದ್ದಾರೆ. ಪರಾಗ್ ಶಾ ಆಯ್ಕೆಗೂ ಮುನ್ನ ಶಿವಕುಮಾರ್ ಅವರು ಆ ಸ್ಥಾನದಲ್ಲಿದ್ದರು.

## ❖ ಒಟ್ಟು 54 ದೇಶಗಳನ್ನು ಗುರಿಯಾಗಿಸಿಶೇ 12.5ರಷ್ಟು ಸುಂಕ ಸಾಧ್ಯತೆ: ಭಾರತದ ಮೇಲೆ ಹೊಸ ತೆರಿಗೆ ಪ್ರಸ್ತಾವ

- ಬಲವಂತದಿಂದ ಕಾರ್ಮಿಕರನ್ನು ದುಡಿಸಿಕೊಳ್ಳುವ ಕಡೆಗಳಿಂದ ಸರಕುಗಳನ್ನು ಅಮದು ಮಾಡಿಕೊಳ್ಳುವುದಕ್ಕೆ ನಿಷೇಧ ಹೇರಲು ವಿಫಲವಾಗಿರುವ ಆರೋಪದ ಅಡಿಯಲ್ಲಿ ಭಾರತದ ಸರಕುಗಳ ಮೇಲೆ ಶೇ 12.5ರಷ್ಟು ಸುಂಕ ವಿಧಿಸಲು ಅಮೆರಿಕ ಪ್ರಸ್ತಾವ ಸಿದ್ಧಪಡಿಸಿದೆ.
- ಭಾರತ ಅಲ್ಲದೆ ಇತರ 53 ದೇಶಗಳ ಮೇಲೆಯೂ ಇದೇ ಬಗೆಯಲ್ಲಿ ಸುಂಕ ವಿಧಿಸುವ ಪ್ರಸ್ತಾವ ಅಮೆರಿಕದ ಮುಂದಿದೆ. ಭಾರತ ಮತ್ತು ಅಮೆರಿಕದ ಪ್ರತಿನಿಧಿಗಳ ನಡುವೆ ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದ ಮಾತುಕತೆ ನಡೆಯುತ್ತಿರುವ ಹೊತ್ತಿನಲ್ಲಿ ಈ ಬೆಳವಣಿಗೆ ನಡೆದಿದೆ.
- ಹೊಸ ಸುಂಕದ ಬಗ್ಗೆ ಪ್ರತಿಕ್ರಿಯೆ ನೀಡಿರುವ ಕೇಂದ್ರ ವಾಣಿಜ್ಯ ಸಚಿವಾಲಯವು, ಇದರ ವಿಚಾರವಾಗಿ ಅಮೆರಿಕದ ಜೊತೆ ಮಾತುಕತೆ ನಡೆಸಲಾಗುತ್ತಿದೆ ಎಂದು ಹೇಳಿದೆ.
- ಬಲವಂತದಿಂದ ಕಾರ್ಮಿಕರನ್ನು ದುಡಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಒಟ್ಟು 60 ದೇಶಗಳ ವಿರುದ್ಧ ಅಮೆರಿಕದಲ್ಲಿ ಮಾರ್ಚ್‌ನಲ್ಲಿ ತನಿಖೆ ಆರಂಭವಾಗಿತ್ತು. ಈಗ ಅಮೆರಿಕದ ವ್ಯಾಪಾರ ಪ್ರತಿನಿಧಿ (ಯುಎಸ್ ಆರ್) ಸಂಸ್ಥೆ, 1974ರ ವ್ಯಾಪಾರ ಕಾಯ್ದೆಯ ಅಡಿ ಈ ಹೆಚ್ಚುವರಿ ಸುಂಕ ವಿಧಿಸುವ ಪ್ರಸ್ತಾವ ಸಿದ್ಧಪಡಿಸಿದೆ.
- ಇದು ಈಗ ಪ್ರಸ್ತಾವ ಮಾತ್ರ. ಇದು ಅಂತಿಮಗೊಂಡಿಲ್ಲ ಎಂದು ಯುಎಸ್‌ಟಿಆರ್ ಹೇಳಿದೆ. ಸಂಬಂಧಪಟ್ಟ ದೇಶಗಳು ಇದರ ಕುರಿತಾದ ವಿಚಾರಣೆಯ ವೇಳೆ ಹಾಜರಾಗುವುದಾಗಿ ಮನವಿ ಮೂಲಕ ತಿಳಿಸಲು ಜೂನ್ 22 ರವರೆಗೆ ಅವಕಾಶ ಇದೆ ಎಂದು ತಿಳಿಸಿದೆ.
- ಕೆಲವು ಸರಕುಗಳನ್ನು ಹೊರತುಪಡಿಸಿ ಇತರ ಎಲ್ಲ ಸರಕುಗಳ ಮೇಲೆ ಈ ಸುಂಕ ವಿಧಿಸುವ ಪ್ರಸ್ತಾವ ಇದೆ. ಭಾರತ, ಅರ್ಜೆಂಟೀನಾ, ಆಸ್ಟ್ರೇಲಿಯಾ, ಬಾಂಗ್ಲಾದೇಶ, ಬ್ರೆಜಿಲ್, ಕಾಂಬೋಡಿಯಾ, ಚೀನಾ, ಇಸ್ರೇಲ್, ಜಪಾನ್, ನಾರ್ವೆ, ಒಮಾನ್, ರಷ್ಯಾ, ಸೌದಿ ಅರೇಬಿಯಾ, ಬ್ರಿಟನ್, ಯುಎಇ ಸೇರಿದಂತೆ ಒಟ್ಟು 54 ದೇಶಗಳ ಮೇಲೆ ಈ ತೆರಿಗೆ ವಿಧಿಸಲು ಪ್ರಸ್ತಾವದಲ್ಲಿ ಹೇಳಲಾಗಿದೆ.
- 'ನಮ್ಮ ಬಹುಮುಖ್ಯ ವ್ಯಾಪಾರ ಪಾಲುದಾರರು ಬಲವಂತದಿಂದ ಕಾರ್ಮಿಕರನ್ನು ದುಡಿಸಿಕೊಳ್ಳುವ ಕಡೆಗಳಿಂದ ಸರ ಆಮದು ಮಾಡಿಕೊಳ್ಳುವುದರ ಬಗ್ಗೆ ಗಮನಹರಿಸಲು ವಿಫಲರಾಗಿರುವುದುಒಪ್ಪುವಂಥದ್ದಲ್ಲ. ಹೀಗೆ ಮಾಡುವುದರಿಂದಾಗಿ ಅಸಮಾನನೆಲೆಯಲ್ಲಿ ಸ್ಪರ್ಧಿಸುವ ಅನಿವಾರ್ಯವು ಅಮೆರಿಕದ ಕಾರ್ಮಿಕರಿಗೆ ಎದುರಾಗುತ್ತದೆ' ಎಂದು ಯುಎಸ್‌ಟಿಆರ್ ರಾಯಭಾರಿ ಜೆಮಿಸನ್ ಗ್ರೀರ್ ಹೇಳಿದ್ದಾರೆ.
- ಹೊಸ ತೆರಿಗೆ ಪ್ರಸ್ತಾವದ ಕುರಿತು ಅಂತಿಮ ನಿರ್ಣಯವು ಜುಲೈ 24ಕ್ಕೆ ಮೊದಲು ಹೊರಬೀಳುವ ನಿರೀಕ್ಷೆ ಇದೆ. ಭಾರತವು ತನ್ನ ಮೇಲಿನ ಆರೋಪವನ್ನು ನಿರಾಕರಿಸಿದೆ.

## ❖ ಚಿನ್ನ ಮಾರಾಟ ಮಾಡಿಲ್ಲ: ಆರ್‌ಬಿಐ

- ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮಗಳಿಂದ ವಿದೇಶಿ ಕರೆನ್ಸಿ ಮೀಸಲನ್ನು ಕಾಪಾಡಿಕೊಳ್ಳಲು ಆರ್‌ಬಿಐ ತನ್ನ ಸಂಗ್ರಹದಲ್ಲಿನ ಭೌತಿಕ ಚಿನ್ನವನ್ನು ಮಾರಾಟ ಮಾಡಿರಬಹುದು ಎಂಬುದಾಗಿ ಹೇಳುವ ವರದಿಗಳು ಆಧಾರವಿಲ್ಲದವು ಎಂದು ಆರ್‌ಬಿಐ ಸ್ಪಷ್ಟನೆ ನೀಡಿದೆ.
- ತನ್ನ ಸಂಗ್ರಹದಲ್ಲಿ ಇರುವ ಭೌತಿಕ ಚಿನ್ನದ ಪ್ರಮಾಣ ಬದಲಾಗಿಲ್ಲ, 880.52 ಟನ್ ಚಿನ್ನ ಈಗಲೂ ಇದೆ ಎಂದು ಆರ್‌ಬಿಐ ತಿಳಿಸಿದೆ.
- ಇಂತಹ ವಿಚಾರಗಳಲ್ಲಿ ಸಾರ್ವಜನಿಕರು ತಾನು ಕಾಲಕಾಲಕ್ಕೆ ಪ್ರಕಟಿಸುವ ಅಧಿಕೃತ ಮಾಹಿತಿಯನ್ನು ಮಾತ್ರ ಪರಿಗಣಿಸಬೇಕು ಎಂದು ಅದು ಹೇಳಿದೆ.

Dr. Rajkumar IAS/KAS Academy

- ಭಾರತದ ವಿದೇಶಿ ವಿನಿಮಯ ಮೀಸಲಿನಲ್ಲಿ ಚಿನ್ನದ ಪಾಲು 2025ರ ಸೆಪ್ಟೆಂಬರ್‌ನಲ್ಲಿ ಶೇ 13.92ರಷ್ಟು ಇತ್ತು. ಇದು 2026ರ ಮಾರ್ಚ್ 31ರ ಹೊತ್ತಿಗೆ ಶೇ 16.70ಕ್ಕೆ ಹೆಚ್ಚಳ ಕಂಡಿದೆ. ಅಲ್ಲದೆ ಮೇ 22ರ ಸುಮಾರಿಗೆ ಶೇ 16.85ಕ್ಕೆ ಜಾಸ್ತಿ ಆಗಿದೆ ಎಂದು ಆರ್‌ಬಿಐ ತಿಳಿಸಿದೆ.
- ಈ ವರ್ಷದ ಮಾರ್ಚ್ 31ಕ್ಕೆ ರಿಸರ್ವ್ ಬ್ಯಾಂಕ್ ಬಳಿ ಇದ್ದ ಒಟ್ಟು ಚಿನ್ನದ ಪ್ರಮಾಣ 880.52 ಟನ್ ಆಗಿತ್ತು. ಹಿಂದಿನ ವರ್ಷದ ಇದೇ ಹೊತ್ತಿನಲ್ಲಿ ಇದ್ದ ಚಿನ್ನ 879.58 ಟನ್ ಆಗಿತ್ತು.

### ❖ ಎಟಿಎಫ್ ಸ್ಥಿರೀಕರಣ ನಿಧಿಗೆ ಒಪ್ಪಿಗೆ

- ಪಶ್ಚಿಮ ಏಷ್ಯಾದ ಸಂಘರ್ಷದಿಂದ ಹೆಚ್ಚುತ್ತಿರುವ ಇಂಧನ ದರ ಏರಿಕೆಯಿಂದ ದೇಶದ ವಿಮಾನಯಾನ ಕಂಪನಿಗಳಿಗೆ ರಕ್ಷಣೆ ನೀಡಲು ₹10 ಸಾವಿರ ಕೋಟಿ ಮೊತ್ತದ ವಿಮಾನ ಇಂಧನ (ಎಟಿಎಫ್) ಸ್ಥಿರೀಕರಣ ನಿಧಿ ಸ್ಥಾಪಿಸಲು ಕೇಂದ್ರ ಸಚಿವ ಸಂಪುಟವು ಬುಧವಾರ ಒಪ್ಪಿಗೆ ನೀಡಿದೆ.
- ವಿಮಾನದ ಟಿಕೆಟ್ ದರದಲ್ಲಿನ ಏರಿಳಿತವನ್ನು ಕಡಿಮೆ ಮಾಡುವ ಉದ್ದೇಶವನ್ನು ಈ ನಿಧಿಯು ಹೊಂದಿದೆ.
- ಈ ಯೋಜನೆಯ ಅಡಿ ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನ ಮಾರುಕಟ್ಟೆ ಕಂಪನಿಗಳಿಗೆ ಬಡ್ಡಿ ರಹಿತ ಸಾಲ ದೊರೆಯಲಿದೆ. ಇದರಿಂದ ದೇಶ ಮತ್ತು ಅಂತರ ರಾಷ್ಟ್ರೀಯ ಮಾರ್ಗದಲ್ಲಿ ಸಂಚರಿಸುವ ದೇಶದ ವಿಮಾನ ಗಳಿಗೆ ಸ್ಥಿರವಾದ ದರದಲ್ಲಿ ವಿಮಾನ ಇಂಧನವನ್ನು ಪೂರೈಸಲು ಅವುಗಳಿಗೆ ಸಾಧ್ಯವಾಗಿಸು ತ್ತದೆ ಎಂದು ಸರ್ಕಾರ ತಿಳಿಸಿದೆ.
- 'ಈ ನಿಧಿಯು ಎಟಿಎಫ್ ದರ ಸ್ಥಿರವಾಗಿಸಲು ಮತ್ತು ವಿಮಾನಗಳ ಕಾರ್ಯಾಚರಣೆಯಲ್ಲಿನ ಅಡಚಣೆಗಳನ್ನು ತಡೆಯಲು ನೆರವಾಗಲಿದೆ' ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.
- ಪಶ್ಚಿಮ ಏಷ್ಯಾದ ಬಿಕ್ಕಟ್ಟು ಮುಗಿದ ನಂತರ, ವಿಮಾನಯಾನ ಸಂಸ್ಥೆಗಳು ಮೊತ್ತವನ್ನು ಮರುಪಾವತಿ ಮಾಡಬೇಕಾಗುತ್ತದೆ. ಹೆಚ್ಚುತ್ತಿರುವ ಇಂಧನ ಬೆಲೆಯಿಂದ ವಿಮಾನ ಟಿಕೆಟ್ ದರದ ಏರಿಕೆಯ ಬಿಸಿ ಪ್ರಯಾಣಿಕರಿಗೆ ತಾಕದಂತೆ ರಕ್ಷಿಸಲಿದೆ. ಅಲ್ಲದೆ, ವಿಮಾನಯಾನ ವಲಯವನ್ನು ಅವಲಂಬಿಸಿರುವ 77 ಲಕ್ಷ ಉದ್ಯೋಗ ಗಳನ್ನು ರಕ್ಷಿಸಲಿದೆ ಎಂದು ತಿಳಿಸಿದ್ದಾರೆ.

### ❖ ಇ85 ಇಂಧನ ನೀತಿ ಪರಿಶೀಲನೆ: ಪುರಿ

- ಶೇಕಡ 85ರಷ್ಟು ಎಥೆನಾಲ್ ಹೊಂದಿರುವ ಪೆಟ್ರೋಲ್ ಬಳಕೆಗೆ ಬೆಂಬಲ ನೀಡುವ ನೀತಿಯನ್ನು ಕೇಂದ್ರ ಸರ್ಕಾರ ಪರಿಶೀಲಿಸುತ್ತಿದೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರದೀಪ್ ಸಿಂಗ್ ಪುರಿ ತಿಳಿಸಿದ್ದಾರೆ.
- ಹೀರೊ ಮೋಟೊಕಾರ್ಪ್ ಕಂಪನಿಯ ಕಾರ್ಯಕ್ರಮ ವೊಂದರಲ್ಲಿ ಅವರು ಮಾತನಾಡಿದ್ದಾರೆ. ಕಂಪನಿಯು ಇ85 ಇಂಧನ (ಶೇ 85ರಷ್ಟು ಎಥೆನಾಲ್, ಶೇ 15ರಷ್ಟು ಪೆಟ್ರೋಲ್ ಇರುವ ಇಂಧನ) ಬಳಸುವ ದ್ವಿಚಕ್ರ ವಾಹನ ಸಿದ್ಧಪಡಿಸಿದ್ದು ಅದನ್ನು ಸಚಿವ ಪುರಿ ಅನಾವರಣ ಮಾಡಿದರು.
- ಇ85 ಇಂಧನವು ಮಾಮೂಲಿ ಇಂಧನಕ್ಕಿಂತ ಬಹಳ ಕಡಿಮೆ ಬೆಲೆಗೆ ಲಭ್ಯವಾಗಲಿದೆ ಎಂದು ಹೇಳಿದ್ದಾರೆ.
- 2026-27ರಲ್ಲಿ ಇ85 ಇಂಧನ ವನ್ನು ಶೇ 1ರಷ್ಟು ಪ್ರಮಾಣದಲ್ಲಿ ಬಳಸಿದರೂ 4 ಕೋಟಿ ಲೀಟರ್ ಎಥೆನಾಲ್ ಗೆ ಬೇಡಿಕೆ ಸೃಷ್ಟಿಯಾಗಲಿದೆ. 'ರೈತರು ಈಗ ಅನ್ನದಾತರಾಗಿದ್ದಾರೆ, ಅವರು ಇಂಧನದಾತರೂ ಆಗುತ್ತಾರೆ' ಎಂದು ಹೇಳಿದ್ದಾರೆ.

### ❖ ಕಾಂಚನ್ ದೇವಿ ನೇತೃತ್ವದಲ್ಲಿ ಸಮಿತಿ ರಚಿಸಿದ ಸುಪ್ರೀಂ ಕೋರ್ಟ್: 'ಅರಾವಳಿ' ಪರಿಶೀಲನೆಗೆ ಸಮಿತಿ

- ಅರಾವಳಿ ಪರ್ವತ ಶ್ರೇಣಿಯ ವ್ಯಾಖ್ಯಾನ ಮತ್ತು ನಿರೂಪಣೆ ಕುರಿತು ಕೇಂದ್ರ ಸರ್ಕಾರವು ಸಲ್ಲಿಸಿರುವ ವರದಿಯನ್ನು ಸ್ವತಂತ್ರವಾಗಿ ಪರಿಶೀಲಿಸಲು ಸುಪ್ರೀಂಕೋರ್ಟ್ ಉನ್ನತಾಧಿಕಾರ ಸಮಿತಿಯೊಂದನ್ನು ರಚಿಸಿದೆ.

Dr Rajkumar IAS/KAS Academy

- ಭಾರತೀಯ ಅರಣ್ಯ ಸಂಶೋಧನೆ ಮತ್ತು ಶಿಕ್ಷಣ ಮಂಡಳಿಯ ಮಹಾನಿರ್ದೇಶಕರಾದ ಕಾಂಚನ್ ದೇವಿ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. 2026ರ ಆಗಸ್ಟ್ 31ರ ಒಳಗಾಗಿ ಸಮಗ್ರ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ. ಈ ಹಿಂದಿನ ವರದಿಯಲ್ಲಿ 'ಪ್ರಮುಖ ದ್ವಂದ್ವ' ಎಂದು ಉಲ್ಲೇಖಿಸಿರುವ ಅಂಶಗಳನ್ನು ಪರಿಹರಿಸುವಂತೆಯೂ ನ್ಯಾಯಾಲಯ ನಿರ್ದೇಶಿಸಿದೆ.
- ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿಯು ಸಿದ್ದಪಡಿಸಿದ ವರದಿಯ ಅನುಷ್ಠಾನವನ್ನು ಸುಪ್ರೀಂ ಕೋರ್ಟ್ ಕಳೆದ ಡಿಸೆಂಬರ್ 29ರಂದು ತಡೆಹಿಡಿದಿತ್ತು. ಹೊಸ ವೈಜ್ಞಾನಿಕ ಮತ್ತು ಪರಿಸರ ಮೌಲ್ಯಮಾಪನವನ್ನು ಕೈಗೊಳ್ಳಲು ಸ್ವತಂತ್ರ ತಜ್ಞರ ಮಂಡಳಿಯ ಅಗತ್ಯವನ್ನು ಒತ್ತಿ ಹೇಳಿತ್ತು.
- ಭಾರತೀಯ ಅರಣ್ಯ ಸರ್ವೇಕ್ಷಣೆಯ ನಿವೃತ್ತ ಮಹಾನಿರ್ದೇಶಕ ಡಾ. ಸುಭಾಷ್ ಅಶುತೋಷ್, ಭಾರತೀಯ ಭೂ ಸರ್ವೇಕ್ಷಣೆಯ ನಿವೃತ್ತ ನಿರ್ದೇಶಕ ಡಾ. ರಾಜೇಂದ್ರ ಕುಮಾರ್ ಶರ್ಮ, ಪರಿಸರ ಸಚಿವಾಲಯದ ನಿವೃತ್ತ ಜಂಟಿ ಕಾರ್ಯದರ್ಶಿ ಬ್ರಿಜ್ ಮೋಹನ್ ಸಿಂಗ್ ರಾಥೋಡ್ ಮತ್ತು ದೆಹಲಿ ವಿಶ್ವವಿದ್ಯಾಲಯದ ಸಸ್ಯವಿಜ್ಞಾನ ವಿಭಾಗದ ನಿವೃತ್ತ ಮುಖ್ಯಸ್ಥ ಪ್ರೊ. ಅಶೋಕ್ ಕೆ. ಭಟ್ನಾಗರ್ ಅವರನ್ನು ಸಮಿತಿಯ ಸದಸ್ಯರಾಗಿ ನೇಮಿಸಲಾಗಿದೆ.
- ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಫಾರ್ ಹ್ಯೂಮನ್ ಸೆಟಲ್‌ಮೆಂಟ್ಸ್‌ನ ಪ್ರಾಧ್ಯಾಪಕ ಜಗದೀಶ್ ಕೃಷ್ಣಮೂರ್ತಿ ಮತ್ತು ಹರಿಯಾಣ ಕೇಂದ್ರೀಯ ವಿಶವಿದ್ಯಾಲಯದ ಪ್ರಾಧ್ಯಾಪಕ ಪ್ರೊ. ಲಕ್ಷ್ಮೀಕಾಂತ್ ಶರ್ಮ ಅವರನ್ನು ಅಗತ್ಯ ಸಮಯದಲ್ಲಿ ಸಮಿತಿಗೆ ನೆರವು ನೀಡಲು ವಿಶೇಷ ಆಹ್ವಾನಿತರಾಗಿ ನ್ಯಾಯಾಲಯ ನೇಮಿಸಿದೆ.
- ಸಮಿತಿಯ ಸದಸ್ಯ ಕಾರ್ಯದರ್ಶಿ ಸ್ಥಾನಕ್ಕೆ ನಿರ್ದೇಶಕರ ಶ್ರೇಣಿಯ ಅಧಿಕಾರಿ ಯೊಬ್ಬರನ್ನು ನಾಮನಿರ್ದೇಶನ ಮಾಡುವಂತೆ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯಕ್ಕೆ ನ್ಯಾಯಾಲಯ ನಿರ್ದೇಶನ ನೀಡಿದೆ.
- 2025 ಅಕ್ಟೋಬರ್‌ನಲ್ಲಿ ಸಲ್ಲಿಕೆಯಾಗಿರುವ ವರದಿಯ ಬಗ್ಗೆ ಎದ್ದಿರುವ ಹಲವು ಪ್ರಶ್ನೆಗಳ ಕುರಿತು ಪರಿಶೀಲನೆ ನಡೆಸುವ ಹೊಣೆಗಾರಿಕೆ ಹೊಸ ಸಮಿತಿಯ ಮೇಲಿದೆ.
- 2025ರ ವರದಿಯಲ್ಲಿ ಅರಾವಳಿ ಬೆಟ್ಟಗಳನ್ನು ಎರಡು ಅಥವಾ ಅದಕ್ಕಿಂತ ಹೆಚ್ಚಿನ ಬೆಟ್ಟಗಳ ನಡುವಿನ 500 ಮೀಟರ್ ಒಳಗಿನ ಪ್ರದೇಶಕ್ಕೆ ಸೀಮಿತ ಗೊಳಿಸಿರುವುದರಿಂದ ಸಂರಕ್ಷಿತ ಪ್ರದೇಶದ ವ್ಯಾಪ್ತಿ ಕಿರಿದಾಗುತ್ತದೆ ಮತ್ತು ಇದರಿಂದ ಗಣಿಗಾರಿಕೆ ಮತ್ತು ಮಾನವಹಸ್ತಕ್ಷೇಪ ಆಗುತ್ತದೆಯೇ ಎಂಬ ಬಗ್ಗೆ ಪರಿಶೀಲನೆ ನಡೆಸುವ ಜವಾಬ್ದಾರಿಯನ್ನು ಸಮಿತಿಗೆ ನೀಡಲಾಗಿದೆ.

## ❖ ದಾಂಪತ್ಯದ ಹಕ್ಕು ನಿರಾಕರಣೆ ಕ್ರೌರ್ಯ: 'ಸುಪ್ರೀಂ'


- 'ಸಕಾರಣವಿಲ್ಲದೇ ಸಂಭೋಗ ನಿರಾಕರಣೆ ಸೇರಿದಂತೆ ನಿರಂತರವಾಗಿ ದಾಂಪತ್ಯದ ಹಕ್ಕುಗಳನ್ನು ನಿರಾಕರಿಸುವುದು ಮಾನಸಿಕ ಕ್ರೌರ್ಯ. ಹಿಂದೂ ವಿವಾಹ ಕಾಯ್ದೆಯ ಸೆಕ್ಷನ್ 13 (1) (iಎ) ಅನುಸಾರ ಇದು ವಿಚ್ಛೇದನಕ್ಕೆ ಬಲವಾದ ಆಧಾರವಾಗಿದೆ ' ಎಂದು ಸುಪ್ರೀಂ ಕೋರ್ಟ್ ಬುಧವಾರ ತೀರ್ಪು ನೀಡಿದೆ.
- ನ್ಯಾಯಮೂರ್ತಿಗಳಾದ ಸಂಜಯ್ ಕರೋಲ್ ಮತ್ತು ಆಗಸ್ಟಿನ್ ಜಾರ್ಜ್ ಮಸೀಹ್ ಅವರಿದ್ದ ಪೀಠವು, 'ದೈಹಿಕ ಸಂಬಂಧ ತಡೆಯುವುದು ಭಾವನಾತ್ಮಕ ಒತ್ತಡಗಳಿಗೆ ಆಸ್ಪದವಾಗಲಿದೆ. ಅಲ್ಲದೆ, ವಿವಾಹದ ಉದ್ದೇಶಕ್ಕೆ ಧಕ್ಕೆ ತರಲಿದೆ' ಎಂದಿದೆ.
- 'ಕಾನೂನು ಮತ್ತು ಸಾಂವಿಧಾನಿಕ ಆಯಾಮದ ದೃಷ್ಟಿಯಿಂದ ವಿವಾಹವನ್ನು, ವೈಯಕ್ತಿಕ ಹಕ್ಕುಗಳಿಗೆ ಸೀಮಿತಗೊಳಿಸಲಾಗದು. ವಿವಾಹವು ನೇರವಾಗಿ ಪರಸ್ಪರ ಗೌರವ ಹಾಗೂ ನಿರೀಕ್ಷೆ, ಹೊಣೆಗಾರಿಕೆಯ ಸಮಾನ ಹಂಚಿಕೆಯ ಆಧಾರದಲ್ಲಿ ಮೂಡುವ ವೈಯಕ್ತಿಕ, ಸಾಮಾಜಿಕ ಪಾಲುದಾರಿಕೆ ಆಗಿದೆ' ಎಂದು ಹೇಳಿತು.
- 'ದಾಂಪತ್ಯದ ಹಕ್ಕು ಮತ್ತು ಕರ್ತವ್ಯಗಳು ಭಿನ್ನವಲ್ಲ' ಎಂದು ಪೀಠ ಅಭಿಪ್ರಾಯಪಟ್ಟಿತು. ಇದೇ ವೇಳೆ, ದಾಂಪತ್ಯದ ಹಕ್ಕು ನಿರಾಕರಣೆ ಮಾನಸಿಕ ಕ್ರೌರ್ಯ ಎಂಬ ಆಧಾರದಲ್ಲಿ, 2025ರ ಜನವರಿ 2ರಂದು ರಾಜಸ್ಥಾನ ಹೈಕೋರ್ಟ್ ನೀಡಿದ್ದ ವಿಚ್ಛೇದನ ಆದೇಶವನ್ನು ಸುಪ್ರೀಂ ಪೀಠವು ಎತ್ತಿಹಿಡಿಯಿತು.

- 'ದಂಪತಿ 15 ವರ್ಷದಿಂದ ಪ್ರತ್ಯೇಕವಾಗಿ ಇದ್ದರು. ಮಕ್ಕಳಿರಲಿಲ್ಲ. ಕೋರ್ಟ್‌ಗಳ ಪುನರಾವರ್ತಿತ ಯತ್ನಗಳ ನಂತರವೂ ಸಮನ್ವಯ ಮೂಡಿರಲಿಲ್ಲ' ಎಂದು ರಾಜಸ್ಥಾನ ಹೈಕೋರ್ಟ್ ವಿಚ್ಛೇದನ ಪ್ರಕರಣದ ತೀರ್ಪು ನೀಡುವಾಗ ಅಭಿಪ್ರಾಯಪಟ್ಟಿತ್ತು.
- ಉಲ್ಲೇಖಿತ ಪ್ರಕರಣದಲ್ಲಿ ದಂಪತಿ 2007ರಲ್ಲಿ ವಿವಾಹವಾಗಿದ್ದರು. ಪತಿ-ಪತ್ನಿ ಇಬ್ಬರೂ ಸರ್ಕಾರಿ ವೈದ್ಯರಾಗಿದ್ದರು. ಪತ್ನಿಯು ಗುಜರಾತ್‌ನಲ್ಲಿ ಹಾಗೂ ಪತಿ ರಾಜಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಹೈಕೋರ್ಟ್‌ನ ತೀರ್ಪು ಪ್ರಶ್ನಿಸಿ ಪತ್ನಿಯು ಸುಪ್ರೀಂ ಕೋರ್ಟ್‌ನ ಮೆಟ್ಟಿಲೇರಿದ್ದರು.
- ಸಂವಿಧಾನದ 142ನೇ ವಿಧಿ ಅನುಸಾರ ದತ್ತವಾದ ಅಧಿಕಾರದಡಿ, ವಿವಾಹವನ್ನು ಅಮಾನ್ಯಗೊಳಿಸಿದ ಪೀಠವು, 'ಇಂತಹ 'ಮೃತ ಸಂಬಂಧ'ವನ್ನು ಮುಂದುವರಿಸುವುದು ಇನ್ನಷ್ಟು ಮಾನಸಿಕ ಹಿಂಸೆ ಮತ್ತು ಜುಗುಪ್ಸೆಗೆ ಕಾರಣ ಆಗುವುದಲ್ಲದೇ ಮತ್ತೇನೂ ಆಗುವುದಿಲ್ಲ' ಎಂದು ಅಭಿಪ್ರಾಯಪಟ್ಟಿತು.

Dr. Rajkumar IAS/KAS Academy

## ❖ ಕುಂದು ಕೊರತೆ ಆಲಿಸಲು ಪ್ರತ್ಯೇಕ ಸಚಿವಾಲಯ

- 'ನಮ್ಮ ಸರ್ಕಾರದಲ್ಲಿ ಸಾರ್ವಜನಿಕರ ಕುಂದುಕೊರತೆ ಆಲಿಸಿ, ಸ್ಪಂದಿಸಲು ಪ್ರತ್ಯೇಕ ಸಚಿವಾಲಯ ಆರಂಭಿಸಲಾಗುವುದು' ಎಂದು ಶಿವಕುಮಾರ್ ತಿಳಿಸಿದರು.
- 'ಈ ಸಚಿವಾಲಯ ಆರಂಭಿಸಿ, ಜನರ ಅರ್ಜಿ, ಅಹವಾಲು, ಸಮಸ್ಯೆ ಆಲಿಸಲು ಪ್ರತ್ಯೇಕ ಸಚಿವರ ನೇಮಕ ಮಾಡಲಾಗುವುದು. ನಿತ್ಯ ವಿವಿಧ ತಂಡಗಳು ಪ್ರತಿಭಟನೆ ನಡೆಸುತ್ತಿದ್ದು, ಅವರ ವಿಚಾರ ಆಲಿಸಿ, ಸ್ಪಂದಿಸಲು ಸರ್ಕಾರ ಸಿದ್ಧವಿದೆ' ಎಂದರು.



# ಹವಾಮಾನ ಬದಲಾವಣೆ ಬೇಕಿದೆ ಕ್ಷಿಪ್ರ ಕಾರ್ಯಯೋಜನೆ

ಪ್ರಜಾವಾಣಿ ವಾರ್ತೆ

### ದಕ್ಷಿಣ ಏಷ್ಯಾದಲ್ಲಿ ಬಿಕ್ಕಟ್ಟು ತೀವ್ರ

### ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ನೆರವು ನಿಧಿ

'Deccan Herald- Prajavani Relief Trust'

https://bit.ly/3xFpoz4

### ತಾಯಿ ಹೆಸರಿನಲ್ಲಿ ಒಂದು ಮರ

### ಇತರರಿಗೂ ಮಾದರಿ

### 'ಪಾಲಕರ ಒತ್ತಡ ತಗ್ಗಿಸಿತು'

### ಮಹಿಳೆಯರ ಮೇಲೆ ಹೆಚ್ಚು ಪರಿಣಾಮ

### ಶೂನ್ಯ ಇಂಗಾಲ @2070

### ಇಂಧನ ಮೂಲವಾರು ವಿದ್ಯುತ್ ಉತ್ಪಾದನಾ ಸಾಮರ್ಥ್ಯ

(ಗಿಗಾವಾಟ್‌ಗಳಲ್ಲಿ) (2026 ಏಪ್ರಿಲ್) (ಆವರಣದಲ್ಲಿರುವುದು ಪ್ರಮಾಣ)



### ಶುದ್ಧ ಇಂಧನ ಮೂಲದಿಂದ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೆಚ್ಚಳ (ಗಿಗಾವಾಟ್‌ಗಳಲ್ಲಿ)



### ವಿದ್ಯುತ್: ಕಲ್ಲಿದ್ದಲೇ ಮೂಲ

### ಯಾವ ಮೂಲದಿಂದ ಎಷ್ಟು ವಿದ್ಯುತ್ ಉತ್ಪಾದನೆ?

(ಕೋಟಿ ಯೂನಿಟ್‌ಗಳಲ್ಲಿ) (2025–26)



## ❖ ವೆನೆಜುವೆಲಾದ ಅಧ್ಯಕ್ಷರ ಜತೆ ಪ್ರಧಾನಿ ಮೋದಿ ಮಾತುಕತೆ

- ಪ್ರಧಾನಿ ನರೇಂದ್ರ ಮೋದಿ ಅವರು ವೆನೆಜುವೆಲಾದ ಹಂಗಾಮಿ ಅಧ್ಯಕ್ಷರಾದ ಡೆಲ್ಸಿ ರಾಡ್ರಿಗಸ್ ಅವರೊಂದಿಗೆ ಗುರುವಾರ ಮಾತುಕತೆ ನಡೆಸಿದರು. ಇಂಧನ, ವ್ಯಾಪಾರ ಮತ್ತು ಹೂಡಿಕೆ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಂಬಂಧಗಳನ್ನು ಬಲಗೊಳಿಸುವ ಬಗ್ಗೆ ಉಭಯ ನಾಯಕರು ಚರ್ಚಿಸಿದ್ದಾರೆ.
- ಡೆಲ್ಸಿ ರಾಡ್ರಿಗಸ್ ಅವರು ಬುಧವಾರ ಭಾರತಕ್ಕೆ ಬಂದಿಳಿದರು.
- ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟಿನಿಂದಾಗಿ ಭಾರತವು ಇಂಧನ ಪೂರೈಕೆಯಲ್ಲಿ ಸಮಸ್ಯೆ ಎದುರಿಸುತ್ತಿರುವ ಕಾರಣ ಇಂಧನ ಕುರಿತಾದ ಒಪ್ಪಂದವನ್ನು ವಿಸ್ತರಿಸಿಕೊಳ್ಳಲು ಎರಡೂ ದೇಶಗಳು ಎದುರು ನೋಡುತ್ತಿವೆ.
- ಈ ಹಿಂದೆ ಭಾರತವು ವೆನೆಜುವೆಲಾದಿಂದ ಹೆಚ್ಚು ಕಚ್ಚಾತೈಲವನ್ನು ಆಮದು ಮಾಡಿಕೊಳ್ಳುತ್ತಿತ್ತು. ದಿನಕ್ಕೆ 4 ಲಕ್ಷ ಬ್ಯಾರೆಲ್ ತೈಲವನ್ನೂ ಆಮದು ಮಾಡಿಕೊಳ್ಳಲಾಗಿದೆ. 2020ರಲ್ಲಿ ಅಮೆರಿಕದ ನಿರ್ಬಂಧ ಮತ್ತು ಇತರ ಕಾರಣಗಳಿಂದಾಗಿ ಅಮದನ್ನು ನಿಲ್ಲಿಸಬೇಕಾಯಿತು.

- ಮಡೊರೊ ಅವರ ಬಂಧನದ ಬಳಿಕ ಭಾರತವು ಮತ್ತೆ ವೆನೆಜುವೆಲಾದಿಂದ ಕಚ್ಚಾತೈಲ ಆಮದು ಮಾಡಿಕೊಳ್ಳಲು ಪ್ರಾರಂಭಿಸಿತು. ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಕಾರಣ ಭಾರತೀಯ ತೈಲ ಕಂಪನಿಗಳು ಇದೀಗ ವೆನೆಜುವೆಲಾದಿಂದ ಕಚ್ಚಾತೈಲ ಆಮದನ್ನು ಹೆಚ್ಚಿಸಿವೆ.
- ಜನವರಿ 3ರಂದು ಅಮೆರಿಕದ ಪಡೆಗಳು ವೆನೆಜುವೆಲಾದ ಆಗಿನ ಅಧ್ಯಕ್ಷ ನಿಕೊಲಸ್ ಮಡೊರೊ ಅವರನ್ನು ವಶಕ್ಕೆ ಪಡೆದು ಕರೆದೊಯ್ದ ನಂತರ ಡೆಲ್ಸಿ ರಾಡ್ರಿಗಸ್ ಅವರು ಹಂಗಾಮಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.
- ಈ ಭೇಟಿಯು ಎರಡೂ ದೇಶಗಳ ನಡುವಿನ ಸಂಬಂಧವನ್ನು ಬಲಪಡಿಸುತ್ತದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದರು.

# ‘100 ಎಥೆನಾಲ್ ಇಂಧನ ಕೇಂದ್ರ’

## 2027ರ ಹೊತ್ತಿಗೆ ದೇಶದಲ್ಲಿ ಒಟ್ಟು 5,000 ಎಥೆನಾಲ್ ಇಂಧನ ಕೇಂದ್ರ ಆರಂಭ

ನವದೆಹಲಿ (ಪಿಟಿಐ): ದೆಹಲಿ, ಪುಣೆ, ಮುಂಬೈ ಮತ್ತು ನಾಗ್ಪುರದಲ್ಲಿ 50ರಿಂದ 100 ಎಥೆನಾಲ್ ಇಂಧನ ಮಾರಾಟ ಕೇಂದ್ರಗಳನ್ನು ಆರಂಭಿಸಲಾಗುವುದು ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರದೀಪ್ ಸಿಂಗ್ ಪುರಿ ಹೇಳಿದ್ದಾರೆ.

ಈ ವರ್ಷದ ಅಂತ್ಯದೊಳಗೆ ಎಥೆನಾಲ್ ಇಂಧನ ಕೇಂದ್ರಗಳ ಸಂಖ್ಯೆಯನ್ನು 500ಕ್ಕೆ ಹೆಚ್ಚಿಸುವ ಗುರಿ ಇದೆ ಎಂದು ಅವರು ತಿಳಿಸಿದ್ದಾರೆ.

ಮಾರುತಿ ಸುಜುಕಿ ಕಂಪನಿ ಆಯೋಜಿಸಿದ್ದ ಕಾರ್ಯಕ್ರಮದ ವೇಳೆ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘2027ರ ಅಂತ್ಯದ ವೇಳೆಗೆ ದೇಶದಲ್ಲಿ ಇಂತಹ ಇಂಧನ ಕೇಂದ್ರಗಳ ಸಂಖ್ಯೆಯು 5 ಸಾವಿರ ಆಗುವ ನಿರೀಕ್ಷೆ ಇದೆ’ ಎಂದು ಹೇಳಿದ್ದಾರೆ.

ಯೂರೊ-6 ಮಾನದಂಡ ಹೊಂದಿರುವ ವಾಹನಗಳನ್ನು ‘ಇ100’ (ಇದರಲ್ಲಿ ಎಥೆನಾಲ್ ಪ್ರಮಾಣ ಸರಿಸುಮಾರು ಶೇ 95ರವರೆಗೂ ಇರುತ್ತದೆ) ಇಂಧನಕ್ಕೆ ಹೊಂದಿಕೊಳ್ಳುವಂತೆ ಮಾಡಬಹುದಾದರೆ ಕಚ್ಚಾ ತೈಲ ಆಮದು ತಗ್ಗಿಸಲು ಸಹಾಯವಾಗುತ್ತದೆ ಎಂದು ಅವರು ವಿವರಿಸಿದ್ದಾರೆ.

ಇಂತಹ ವಾಹನಗಳಿಗೆ ರಸ್ತೆ ತೆರಿಗೆ ವಿನಾಯಿತಿಯಂತಹ ಕೊಡುಗೆಗಳನ್ನು ನೀಡುವ ಬಗ್ಗೆ ಸರ್ಕಾರ ಆಲೋಚನೆ ನಡೆಸಿದೆ ಎಂದಿದ್ದಾರೆ.

ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳದ ನಂತರವೂ ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳು ದಿನವೊಂದಕ್ಕೆ ₹550



ಕೋಟಿಯವರೆಗೆ ನಷ್ಟ ಅನುಭವಿಸುತ್ತಿವೆ ಎಂದು ಪುರಿ ಅವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದ್ದಾರೆ.

ಪ್ರಯಾಣಿಕ ವಾಹನ ವರ್ಗದಲ್ಲಿ ಫ್ಲೆಕ್ಸ್-ಫ್ಯುಯೆಲ್ ಚಾಲಿತ ವಾಹನಗಳನ್ನು ಕಂಪನಿಗಳು ಬಿಡುಗಡೆ ಮಾಡುವುದು ಉತ್ಪನ್ನವೊಂದರ ಬಿಡುಗಡೆ ಮಾತ್ರವೇ ಅಲ್ಲ, ಅದು ದೇಶದ ಇಂಧನ ಪರಿವರ್ತನೆಯಲ್ಲಿ ಹೊಸ ಅಧ್ಯಾಯ ಎಂದೂ ಅವರು ಹೇಳಿದ್ದಾರೆ.

ಭಾರತದಲ್ಲಿ ಪೆಟ್ರೋಲ್‌ನಲ್ಲಿ ಎಥೆನಾಲ್ ಮಿಶ್ರಣ ಮಾಡುತ್ತಿರುವುದು ಇಂಧನ ಪರಿವರ್ತನೆಯ ಉಪಕ್ರಮಗಳಲ್ಲಿನ ಅತಿದೊಡ್ಡ ಯಶಸ್ಸಾಗಿದೆ ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

ಧಾನ್ಯದ ನುಚ್ಚು, ಕೃಷಿ ತ್ಯಾಜ್ಯ, ಬಿದಿರು ಸೇರಿದಂತೆ ಬೇರೆ ಬೇರೆ ಮೂಲಗಳಿಂದ ಎಥೆನಾಲ್ ಉತ್ಪಾದಿಸುವ ಸಾಮರ್ಥ್ಯ ಈಗ ದೇಶಕ್ಕೆ ಇದೆ.

ಕೇಂದ್ರ ಮೋಟಾರು ವಾಹನಗಳ ನಿಯಮ – 1989ಕ್ಕೆ ತಿದ್ದುಪಡಿ ತರಲು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಉದ್ದೇಶಿಸಿದೆ. ‘ಇ85’ (ಪೆಟ್ರೋಲ್‌ನಲ್ಲಿ ಶೇ 85ರಷ್ಟು ಎಥೆನಾಲ್ ಮಿಶ್ರಣ) ಮತ್ತು ಇ100 (ಸರಿಸುಮಾರು ಶೇ 95ರಷ್ಟು ಎಥೆನಾಲ್ ಬಳಕೆ) ಹಾಗೂ ಬಿ100 ಜೈವಿಕ ಡೀಸೆಲ್ ಬಳಸುವ ವಾಹನಗಳನ್ನು ವ್ಯಾಪಕವಾಗಿ ಬಳಕೆಗೆ ತರಲು ಈ ತಿದ್ದುಪಡಿಗಳು ಅವಕಾಶ ಕಲ್ಪಿಸುತ್ತವೆ. ದೇಶದಲ್ಲಿ ‘ಇ20’ ಪೆಟ್ರೋಲ್ ಈಗಾಗಲೇ ಬಳಕೆಯಲ್ಲಿ ಇದೆ.

Publication Date
05/06/2026

Presented by ಪ್ರಜಾವಾಣಿ

## ❖ ವಿಶ್ವ ಯೋಗಾಸನ ಚಾಂಪಿಯನ್‌ಷಿಪ್‌ಗೆ ಮೋದಿ ಚಾಲನೆ

- ಮೊತ್ತಮೊದಲ ವಿಶ್ವ ಯೋಗಾಸನ ಚಾಂಪಿಯನ್‌ಷಿಪ್‌ಗೆ ಇಲ್ಲಿ ಗುರುವಾರ ಚಾಲನೆ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರು, 'ಸ್ಪರ್ಧಾತ್ಮಕ ಕ್ರೀಡೆಯಾಗಿ ಯೋಗ ಬೆಳೆಯಲು ಈ ಕೂಟವು ಸಹಕಾರಿಯಾಗಲಿದೆ' ಎಂದು ಅಭಿಪ್ರಾಯಪಟ್ಟರು.
- 'ಯೋಗಾಸನ ಕ್ರೀಡೆಯಾಗಿ ವಿಸ್ತರಿಸಿದಂತೆ ಅದಕ್ಕೆ ಸಂಬಂಧಿಸಿದ ಹೊಸ ಸಾಧ್ಯತೆಗಳು ಸಹ ತೆರೆದುಕೊಳ್ಳುತ್ತದೆ. ಇದು ಕ್ರೀಡಾಪಟು ಗಳಿಗೆ ಹೊಸ ವೃತ್ತಿ ಅವಕಾಶಗಳನ್ನು ತರುತ್ತದೆ. ತರಬೇತುದಾರರು, ಕ್ರೀಡಾ ವಿಜ್ಞಾನಿಗಳು, ಸಂಶೋಧಕರಿಗೆ ಅವಕಾಶಗಳನ್ನು ಸೃಷ್ಟಿಸುತ್ತದೆ' ಎಂದು ವರ್ಚುವಲ್ ಭಾಷಣದಲ್ಲಿ ಮೋದಿ ಹೇಳಿದರು.
- 'ಯೋಗಾಸನವು ಮುಂದಿನ ದಿನಗಳಲ್ಲಿ ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಸ್ಥಾನ ಪಡೆಯಲಿದೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.
- 'ವಿಶ್ವ ಯೋಗಾಸನ ಚಾಂಪಿಯನ್ ಷಿಪ್ ಭಾರತದಲ್ಲಿ ಆರಂಭವಾಗುತ್ತಿದೆ. ಮೊದಲ ಆವೃತ್ತಿಯಲ್ಲಿ 78 ದೇಶಗಳ 500ಕ್ಕೂ ಹೆಚ್ಚು ಯೋಗಪಟುಗಳು ಪಾಲ್ಗೊಂಡಿದ್ದಾರೆ. ನಮ್ಮ ದೇಶಕ್ಕೆ ಇದು ಐತಿಹಾಸಿಕ ಕ್ಷಣವಾಗಿದೆ' ಎಂದು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಹೇಳಿದರು.

# ಎರ್ರಾನಿ–ಆ್ಯಂಡ್ರಿಯಾಗೆ ಮಿಶ್ರ ಡಬಲ್ಸ್ ಕಿರೀಟ

ಅಗ್ರಶ್ರೇಯಾಂಕದ ಜೋಡಿ ಸಾರಾ ಎರ್ರಾನಿ ಮತ್ತು ಆ್ಯಂಡ್ರಿಯಾ ವವಸ್ಸೋರಿ ಅವರು ಮಿಶ್ರ ಡಬಲ್ಸ್ ಪ್ರಶಸ್ತಿಯನ್ನು ತಮ್ಮಲ್ಲೇ ಉಳಿಸಿಕೊಂಡರು.

ಗುರುವಾರ ನಡೆದ ಫೈನಲ್ ಹಣಾಹಣಿಯಲ್ಲಿ ಇಟಲಿಯ ಜೋಡಿಯು ಮೊದಲ ಸೆಟ್ ಹಿನ್ನಡೆಯಿಂದ ಚೇತರಿಸಿಕೊಂಡು 4-6, 6-3, 10-4ರಿಂದ ಅಮೆರಿಕದ ಇವಾನ್ ಕಿಂಗ್ ಮತ್ತು ಕೆನಡಾದ ಗೇಬ್ರಿಯೆಲಾ ಡಬ್ರೋವ್ಸ್ಕಿ ಅವರನ್ನು ಮಣಿಸುವ ಮೂಲಕ ಮತ್ತೆ ಚಾಂಪಿಯನ್ ಆಯಿತು.

ಫಿಲಿಪ್ ಶಾಟ್ರಿಯೆ ಅಂಕಣದಲ್ಲಿ ನಡೆದ ಪಂದ್ಯದಲ್ಲಿ ಎರ್ರಾನಿ–ಆ್ಯಂಡ್ರಿಯಾ 79 ನಿಮಿಷಗಳ ಹೋರಾಟದಲ್ಲಿ ಗೆಲುವು ಸಾಧಿಸಿದರು. ಈ ಮೂಲಕ ಕ್ರೊವೇಷ್ಯಾದ ಇವಾನ್ ದೋಡಿಗ್ ಮತ್ತು ತೈವಾನ್‌ನ ಲತಿಶಾ ಚಾನ್ (2018 ಮತ್ತು 2019ರಲ್ಲಿ) ನಂತರ ಮಿಶ್ರ ಡಬಲ್ಸ್ ಪ್ರಶಸ್ತಿಯನ್ನು ಉಳಿಸಿಕೊಂಡ ಮೊದಲ ಜೋಡಿ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾದರು.




ಮಿಶ್ರ ಡಬಲ್ಸ್ ಪ್ರಶಸ್ತಿ ಗೆದ್ದ ಇಟಲಿಯಸಾರಾ ಎರ್ರಾನಿ ಮತ್ತು ಆ್ಯಂಡ್ರಿಯಾ ವವಸ್ಸೋರಿ

Dr. Rajkumar IAS

## ❖ ಆರ್ಥಿಕ ವರ್ಷ 2025-26 ಜಿಡಿಪಿ ಶೇ 7.7 ಪ್ರಗತಿ

- ದೇಶದ ಒಟ್ಟಾರೆ ಅಂತರಿಕ ಉತ್ಪನ್ನ (ಜಿಡಿಪಿ) 2025-26ನೇ ಸಾಲಿನ ನಾಲ್ಕನೆಯ ತ್ರೈಮಾಸಿಕದಲ್ಲಿ (ಜನವರಿ-ಮಾರ್ಚ್) ಶೇ 7.8ರಷ್ಟು ಬೆಳವಣಿಗೆ ಕಂಡಿದ್ದು, ಪೂರ್ಣ ಆರ್ಥಿಕ ವರ್ಷದಲ್ಲಿ ಶೇ 7.7ರಷ್ಟು ಬೆಳವಣಿಗೆ ದರ ದಾಖಲಾಗಿದೆ.
- ಕಚ್ಚಾತೈಲದ ಬೆಲೆ ಏರಿಕೆ, ಪೂರೈಕೆ ಸರಪಳಿ ಅಡಚಣೆ ಸೇರಿದಂತೆ ಹಲವು ಅಂಶಗಳು ದೇಶದ ಆರ್ಥಿಕತೆ ಮೇಲೆ ನಕಾರಾತ್ಮಕ ಪರಿಣಾಮ ಬೀರಿದರೂ, ಬೇಡಿಕೆಯಲ್ಲಿನ ಸುಸ್ಥಿರತೆ ಮತ್ತು ಸದೃಢವಾದ ಹೂಡಿಕೆಯಿಂದ 'ಜಿಡಿಪಿ' ದರ ಬೆಳವಣಿಗೆ ಕಂಡಿದೆ. 2024-25ರ ಪೂರ್ಣ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರ ಶೇ 7.1ರಷ್ಟಿತ್ತು.
- ಪಶ್ಚಿಮ ಏಷ್ಯಾ ಸಂಘರ್ಷವು ಸದ್ಯದ ಮಟ್ಟಿಗೆ ದೇಶದ ಜಿಡಿಪಿ ಮೇಲೆ ದೊಡ್ಡ ಮಟ್ಟದಲ್ಲಿ ಪರಿಣಾಮ ಬೀರಿಲ್ಲ. ಜನವರಿ-ಮಾರ್ಚ್ ತ್ರೈಮಾಸಿಕದಲ್ಲಿ ಒಂದು ತಿಂಗಳು ಮಾತ್ರ ಯುದ್ಧದ ಪರಿಣಾಮವನ್ನು ದೇಶದ ಜಿಡಿಪಿ ಎದುರಿಸಿದೆ. ಇಂಧನ, ಅಡುಗೆ ಅನಿಲ, ರಸಗೊಬ್ಬರ ಪೂರೈಕೆಯಲ್ಲಿ ಆಗಿರುವ ಕೊರತೆ ಮತ್ತು ಬೆಲೆ ಏರಿಕೆ ದೇಶದ ಜಿಡಿಪಿ ಮೇಲೆ ಹೇಗೆ ಪರಿಣಾಮ ಬೀರಿದೆ ಎನ್ನುವುದು ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್-ಜೂನ್ ತ್ರೈಮಾಸಿಕದಲ್ಲಿ ಸ್ಪಷ್ಟವಾಗಿ ಗೋಚರಿಸಲಿದೆ ಎಂದು ಆರ್ಥಿಕ ತಜ್ಞರು ವಿಶ್ಲೇಷಿಸಿದ್ದಾರೆ.
- ಆರ್ಥಿಕತೆಯ ಒಟ್ಟು ಮೌಲ್ಯವರ್ಧನೆ ಜನವರಿ-ಮಾರ್ಚ್ ತ್ರೈಮಾಸಿಕದಲ್ಲಿಶೇ 7.9ರಷ್ಟಾಗಿದೆ ಎಂದು ಅಂಕಿ ಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ಹೇಳಿದೆ.
- ಬೇಡಿಕೆ ಹೆಚ್ಚಿರುವುದು ಮಾತ್ರವಲ್ಲ, ಉತ್ಪಾದನೆ ಹೆಚ್ಚಿರುವ ಅಂಶವೂ ಜಿಡಿಪಿ ಪ್ರಗತಿಯಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ ಎಂದು ಡೆಲಾಯ್ಟ್ ಇಂಡಿಯಾದ ಆರ್ಥಿಕ ತಜ್ಞೆ ರುಮ್ಕಿ ಮಜುಂದಾರ್ ಅಭಿಪ್ರಾಯಪಟ್ಟಿದ್ದಾರೆ.
- ಜಾಗತಿಕ ಆರ್ಥಿಕ ಅಸ್ಥಿರತೆಗಳ ನಡುವೆಯೇ ನಿರ್ಣಾಯಕ ನೀತಿಯ ಮೂಲಕ ಸುಸ್ಥಿರ ಜಿಡಿಪಿ ಬೆಳವಣಿಗೆ ದರ ಕಾಯ್ದುಕೊಳ್ಳಲು ಸರ್ಕಾರ ಬದ್ಧವಾಗಿದೆ ನಿರ್ಮಲಾ ಸೀತಾರಾಮನ್, ಹಣಕಾಸು ಸಚಿವ.

Dr. Rajkumar IAS KAS Academy



# ಹಣದುಬ್ಬರ ಅಂದಾಜು ಹೆಚ್ಚಿಸಿದ ಆರ್‌ಬಿಐ

## ಇಂಧನ ದರ ಏರಿಕೆಯಿಂದ ತಯಾರಿಕಾ ವೆಚ್ಚ ಹೆಚ್ಚಳ: ಮಲ್ಹೋತ್ರಾ

ನವದೆಹಲಿ / ಮುಂಬೈ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಚಿಲ್ಲರೆ ಹಣದುಬ್ಬರ ದರವು ಶೇ 5.1ಕ್ಕೆ ಹೆಚ್ಚಳವಾಗಬಹುದು ಎಂದು ಆರ್‌ಬಿಐ ಅಂದಾಜಿಸಿದೆ. ಈ ಮೊದಲು ಶೇ 4.6ರಷ್ಟಾಗಲಿದೆ ಎಂದು ಹೇಳಿತ್ತು.

ಆದರೂ, ಚಿಲ್ಲರೆ ಹಣದುಬ್ಬರವು ಆರ್‌ಬಿಐನ ಸಹಿಷ್ಣುತಾ ಮಟ್ಟವಾದ ಶೇ 2ರಿಂದ ಶೇ 6ರ ನಡುವೆಯೇ ಇದೆ.

ಪಶ್ಚಿಮ ಏಷ್ಯಾದ ಸಂಘರ್ಷದಿಂದ ಜಾಗತಿಕ ಮಟ್ಟದಲ್ಲಿ ಇಂಧನ ಬೆಲೆ ಏರಿಕೆ ಆಗಿದೆ. ಇದರಿಂದ ದೇಶದ ರಿಟೇಲ್ ಮಾರುಕಟ್ಟೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರ ಹೆಚ್ಚಳವಾಗಿದ್ದು, ತಯಾರಿಕಾ ವೆಚ್ಚ ಏರಿಕೆಯಾಗಿದೆ. ಇದು ಹಣದುಬ್ಬರ ಹೆಚ್ಚಳಕ್ಕೆ ಪ್ರಮುಖ ಕಾರಣವಾಗಿದೆ ಎಂದು ತಿಳಿಸಿದೆ.

ಮೇ ತಿಂಗಳಿನಿಂದ ಪೆಟ್ರೋಲ್ ಮತ್ತು ಡೀಸೆಲ್ ದರವು ಕ್ರಮವಾಗಿ ಶೇ 7.4 ಮತ್ತು ಶೇ 8.4ರಷ್ಟು ಹೆಚ್ಚಳವಾಗಿದೆ. ಇದು ನೇರವಾಗಿ ಚಿಲ್ಲರೆ ಹಣದುಬ್ಬರದ ಮೇಲೆ ಪರಿಣಾಮ ಬೀರಲಿದ್ದು, ಶೇ 0.36ರಷ್ಟು ಹಣದುಬ್ಬರ ಹೆಚ್ಚಳವಾಗಲಿದೆ ಎಂದು ಹೇಳಿದೆ.

ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರದಲ್ಲಿನ ಹೆಚ್ಚಳ, ಕೈಗಾರಿಕೆಗಳಲ್ಲಿ ಬಳಸುವ ಕಚ್ಚಾ ವಸ್ತುಗಳು, ರಾಸಾಯನಿಕಗಳು, ರಬ್ಬರ್ ಮತ್ತು ಪ್ಲಾಸ್ಟಿಕ್ ಉತ್ಪನ್ನಗಳ ಬೆಲೆಯಲ್ಲಿ ಏರಿಕೆಯಾಗಿದೆ. ಇದು ಮುಂದಿನ ದಿನಗಳಲ್ಲಿ ಮತ್ತಷ್ಟು ಹಣದುಬ್ಬರ ಹೆಚ್ಚಳಕ್ಕೆ ಕಾರಣವಾಗಲಿದೆ ಎಂದು ಹೇಳಿದೆ.

ಚಿಲ್ಲರೆ ಹಣದುಬ್ಬರವು ಪ್ರಸಕ್ತ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಶೇ 4.2, ಎರಡನೇ ತ್ರೈಮಾಸಿಕದಲ್ಲಿ ಶೇ 5.1, ಮೂರನೇ ತ್ರೈಮಾಸಿಕದಲ್ಲಿ ಶೇ 5.9 ಮತ್ತು ನಾಲ್ಕನೇ ತ್ರೈಮಾಸಿಕದಲ್ಲಿ ಶೇ 5.4ರಷ್ಟಾಗಲಿದೆ ಎಂದು ಅಂದಾಜಿಸಿದೆ. 2026–27ರಲ್ಲಿ ಕೋರ್ ಹಣದುಬ್ಬರವು ಶೇ 4.7ರಷ್ಟಾಗಲಿದೆ ಎಂದಿದೆ.

ಆಹಾರ ಧಾನ್ಯಗಳ ಸಾಕಷ್ಟು ದಾಸ್ತಾನು ಇದೆ ಮತ್ತು ಜಲಾಶಯದಲ್ಲಿನ ನೀರಿನ ಮಟ್ಟ ತೃಪ್ತಿಕರವಾಗಿದೆ. ಆದರೆ, ಈ ಬಾರಿ ಸಾಮಾನ್ಯಕ್ಕಿಂತ ಮುಂಗಾರು ಮುನ್ಸೂಚನೆ ಕಡಿಮೆ ಇರುವ ಅಂದಾಜು, ಎಲ್ ನಿನೊ ಆಹಾರದ ಬೆಲೆಗಳ ಪರಿಣಾಮ ಬೀರಲಿದೆ ಎಂದು ಮಲ್ಹೋತ್ರಾ ಹೇಳಿದ್ದಾರೆ.

ಏಪ್ರಿಲ್-ಮೇ ಅವಧಿಯಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ಬೆಲೆ ಪ್ರತಿ ಬ್ಯಾರೆಲ್‌ಗೆ ಸರಾಸರಿ 110 ಡಾಲರ್‌ನಷ್ಟಿತ್ತು.

### ರೂಪಾಯಿ ಮೌಲ್ಯ 56 ಪೈಸೆ ಏರಿಕೆ

ವಿದೇಶಿ ಬಂಡವಾಳದ ಒಳಹರಿವು ಹೆಚ್ಚಿಸಲು ಮತ್ತು ರೂಪಾಯಿ ಮೌಲ್ಯ ಸದೃಢತೆಗೆ ಆರ್‌ಬಿಐ ತೆಗೆದುಕೊಂಡ ನಿರ್ಧಾರದಿಂದ ಶುಕ್ರವಾರದ ವಹಿವಾಟಿನಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯವು 56 ಪೈಸೆ ಏರಿಕೆಯಾಗಿದೆ. ವಹಿವಾಟಿನ ಅಂತ್ಯದ ವೇಳೆಗೆ ರೂಪಾಯಿ ಮೌಲ್ಯ 95.18ಕ್ಕೆ ತಲುಪಿದೆ.

### ರೆಪೊ ದರ ಮತ್ತೆ ಯಥಾಸ್ಥಿತಿ

ಸತತ ಮೂರನೇ ಬಾರಿಯೂ ರೆಪೊ ದರದಲ್ಲಿ ಯಾವುದೇ ಬದಲಾವಣೆ ಮಾಡದೆ ಇರುವ ತೀರ್ಮಾನವನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು ಶುಕ್ರವಾರ ತೆಗೆದುಕೊಂಡಿದೆ.

ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ನೇತೃತ್ವದ ಸಮಿತಿಯು ರೆಪೊ ದರವನ್ನು ಶೇ 5.25ರಲ್ಲೇ ಉಳಿಸಿಕೊಳ್ಳಲು ನಿರ್ಧರಿಸಿದೆ. ಅಲ್ಲದೆ, 'ತಟಸ್ಥ' ಹಣಕಾಸಿನ ನೀತಿಯನ್ನು ಮುಂದುವರಿಸಲು ಕೂಡ ಅದು ನಿರ್ಣಯಿಸಿದೆ. ಜೂನ್ 3ರಿಂದ 5ರವರೆಗೆ ಹಣಕಾಸು ನೀತಿ ಸಮಿತಿ ಸಭೆ ನಡೆಯಿತು.

**ಪಾಲಿಮರ್ ಕರೆನ್ಸಿ ನೋಟುಗಳನ್ನು ಪರಿಚಯಿಸುವ ಪ್ರಸ್ತಾವ ಇನ್ನೂ ಪ್ರಾಥಮಿಕ ಹಂತದಲ್ಲಿದೆ**
**ಸಂಜಯ್ ಮಲ್ಹೋತ್ರಾ,**
ಆರ್‌ಬಿಐ ಗವರ್ನರ್

ಆರ್ಥಿಕ ಸ್ಥಿರತೆ ಸಾಧಿಸಲು, ಜಾಗತಿಕ ಮಟ್ಟದಲ್ಲಿ ಹೆಚ್ಚುತ್ತಿರುವ ಕಚ್ಚಾ ತೈಲದ ಬೆಲೆ, ಪಶ್ಚಿಮ ಏಷ್ಯಾದ ಸಂಘರ್ಷ ಸೇರಿದಂತೆ ವಿವಿಧ ಕಾರಣದಿಂದಾಗಿ ಆರ್‌ಬಿಐ ರೆಪೊ ದರವನ್ನು ಯಥಾಸ್ಥಿತಿಯಲ್ಲಿ ಇರಿಸಿದೆ.

ಇದೇ ವೇಳೆ ವಿದೇಶಿ ಬಂಡವಾಳ ಆಕರ್ಷಿಸಲು ಮತ್ತು ರೂಪಾಯಿ ಸದೃಢತೆಗೆ ಹಲವಾರು ಕ್ರಮಗಳನ್ನು ಆರ್‌ಬಿಐ ಘೋಷಿಸಿದೆ.

ಪಶ್ಚಿಮ ಏಷ್ಯಾ ಸಂಘರ್ಷ, ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ರಾಜಕೀಯ ಬಿಕ್ಕಟ್ಟು, ಹೆಚ್ಚುತ್ತಿರುವ ಸರಕುಗಳ ಬೆಲೆ ಮತ್ತು ಪೂರೈಕೆ ಸರಪಳಿಯಲ್ಲಿನ ಅಡಚಣೆಯು ದೇಶದ ಆರ್ಥಿಕ ಬೆಳವಣಿಗೆಗೆ ಅಡ್ಡಿ ಉಂಟು ಮಾಡುತ್ತಿವೆ ಎಂದು ಸಂಜಯ್ ಮಲ್ಹೋತ್ರಾ ಹೇಳಿದ್ದಾರೆ.

ಸಾಮಾನ್ಯಕ್ಕಿಂತ ಮುಂಗಾರು ಮುನ್ಸೂಚನೆ ಕಡಿಮೆ ಇರುವುದು, ಎಲ್ ನಿನೊ ಆಹಾರ ಬೆಲೆಗಳ ಪರಿಣಾಮ ಬೀರುವ ಸಾಧ್ಯತೆ ಇದೆ. ಅಲ್ಲದೆ, ಹೆಚ್ಚುತ್ತಿರುವ ಇಂಧನ ದರವು ಹಣದುಬ್ಬರದ ಮೇಲೆ ಪರಿಣಾಮ ಬೀರುವ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ.

ದೇಶದಲ್ಲಿ ಸರಕು ಮತ್ತು ಸೇವೆಗಳಿಗೆ ಬೇಡಿಕೆ ಸದೃಢವಾಗಿದೆ. ತಯಾರಿಕಾ ಮತ್ತು ಸೇವಾ ವಲಯದಲ್ಲಿ ಹೂಡಿಕೆಯು ನಿರಂತರವಾಗಿ ಹೆಚ್ಚಳವಾಗುತ್ತಿದೆ. ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ಮೇ 29ಕ್ಕೆ ಕೊನೆಗೊಂಡ ವಾರದಲ್ಲಿ ₹64.79 ಲಕ್ಷ ಕೋಟಿಯಷ್ಟಾಗಿದೆ ಎಂದು ತಿಳಿಸಿದ್ದಾರೆ.

'ನಿರೀಕ್ಷೆಯಂತೆ ರೆಪೊ ದರವನ್ನು ಆರ್‌ಬಿಐ ಬದಲಾಯಿಸಿಲ್ಲ. ವಿದೇಶಿ ಬಂಡವಾಳ ಆಕರ್ಷಣೆಗೆ ತೆಗೆದುಕೊಂಡಿರುವ ಕ್ರಮಗಳು ರೂಪಾಯಿ ಮೇಲಿನ ಒತ್ತಡ ತಗ್ಗಿಸಲು ನೆರವಾಗಲಿದೆ' ಎಂದು ಕೋಟಕ್ ಮಹೀಂದ್ರ ಬ್ಯಾಂಕ್‌ನ ಮುಖ್ಯ ಅರ್ಥಶಾಸ್ತ್ರಜ್ಞೆ ಉಪಾಸನಾ ಭಾರದ್ವಾಜ್ ಹೇಳಿದ್ದಾರೆ.

### ಜಿಡಿಪಿ ಪ್ರಗತಿ ಅಂದಾಜು ಇಳಿಕೆ

ಪಶ್ಚಿಮ ಏಷ್ಯಾದ ಸಂಘರ್ಷದಿಂದ 2026–27ರ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರ ಶೇ 6.6ಕ್ಕೆ ಇಳಿಯಬಹುದು ಎಂದು ಆರ್‌ಬಿಐ ಅಂದಾಜಿಸಿದೆ. ಏಪ್ರಿಲ್ ತಿಂಗಳಿನಲ್ಲಿ ಜಿಡಿಪಿ ಪ್ರಗತಿ ಶೇ 6.9ರಷ್ಟಾಗಲಿದೆ ಎಂದು ಆರ್‌ಬಿಐ ಅಂದಾಜಿಸಿತ್ತು.

ಪಶ್ಚಿಮ ಏಷ್ಯಾದ ಸಂಘರ್ಷದಿಂದ ಇಂಧನ ಮತ್ತು ಸರಕುಗಳ ದರ ಹೆಚ್ಚಳವಾಗಿದೆ. ಅಲ್ಲದೆ, ಸರಕುಗಳ ಪೂರೈಕೆಗೆ ನಿರಂತರವಾಗಿ ಅಡಚಣೆ ಉಂಟಾಗಿದೆ. ಇದು ಜಿಡಿಪಿ ದರ ಪರಿಷ್ಕರಣೆಗೆ ಕಾರಣ ಎಂದು ಆರ್‌ಬಿಐ ಹೇಳಿದೆ.

ದೀರ್ಘಕಾಲದವರೆಗಿನ ಪೂರೈಕೆ ಸರಪಳಿಯಲ್ಲಿನ ಅಡಚಣೆಗಳು, ಜಾಗತಿಕ ಮಾರುಕಟ್ಟೆಗಳಲ್ಲಿ ಹೆಚ್ಚಿದ ಏರಿಳಿತ ಮತ್ತು ಹವಾಮಾನ ಸಂಬಂಧಿತ ಅಪಾಯಗಳು ದೇಶದ ಬೆಳವಣಿಗೆಯ ಮುನ್ನೋಟಕ್ಕೆ ಪ್ರತಿಕೂಲ ಅಂಶಗಳಾಗಿವೆ ಎಂದು ಹೇಳಿದೆ.

ಪ್ರಸಕ್ತ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಜಿಡಿಪಿ ಪ್ರಗತಿ ಶೇ 6.6, ದ್ವಿತೀಯ ತ್ರೈಮಾಸಿಕದಲ್ಲಿ ಶೇ 6.3, ತೃತೀಯ ತ್ರೈಮಾಸಿಕದಲ್ಲಿ ಶೇ 6.5 ಮತ್ತು ನಾಲ್ಕನೇ ತ್ರೈಮಾಸಿಕದಲ್ಲಿ ಶೇ 6.8ರಷ್ಟಾಗಲಿದೆ ಎಂದು ಅಂದಾಜಿಸಿದೆ.

ದೇಶದ ತಯಾರಿಕಾ ಮತ್ತು ಸೇವಾ ವಲಯದ ಪ್ರಗತಿಯು ವಿಸ್ತರಣೆಯ ಹಾದಿಯಲ್ಲಿದ್ದು, ವಲಯದ ವ್ಯವಹಾರದ ನಿರೀಕ್ಷೆಯು ಸಕಾರಾತ್ಮಕ ಆಗಿದೆ ಎಂದು ಮಲ್ಹೋತ್ರಾ ತಿಳಿಸಿದ್ದಾರೆ.

**ಆರ್ಥಿಕ ಸ್ಥಿರತೆ ಮತ್ತು ಪೂರೈಕೆ ಸುಧಾರಣೆಯಿಂದಾಗಿ 2027–28ರಲ್ಲಿ ದೇಶದ ಜಿಡಿಪಿ ಪ್ರಗತಿ ಶೇ 7ಕ್ಕಿಂತ ಹೆಚ್ಚಾಗುವ ನಿರೀಕ್ಷೆ ಇದೆ**
**ಅನಂತ ನಾಗೇಶ್ವರನ್,**
ಮುಖ್ಯ ಆರ್ಥಿಕ ಸಲಹೆಗಾರ

### ಎಫ್‌ಪಿಐಗಳಿಗೆ ತೆರಿಗೆ ವಿನಾಯಿತಿ

ರೂಪಾಯಿ ಮೇಲಿನ ಒತ್ತಡ ತಗ್ಗಿಸಲು, ವಿದೇಶಿ ಬಂಡವಾಳ ಆಕರ್ಷಿಸುವ ಉದ್ದೇಶದಿಂದ ವಿದೇಶಿ ಹೂಡಿಕೆದಾರರಿಗೆ (ಎಫ್‌ಪಿಐ) ಸರ್ಕಾರದ ಸಾಲ ಪತ್ರಗಳಿಂದ ಬರುವ ಬಡ್ಡಿ ಗಳಿಕೆ ಮತ್ತು ಬಂಡವಾಳ ಲಾಭದ ಮೇಲಿನ ತೆರಿಗೆಯಿಂದ ಕೇಂದ್ರ ಸರ್ಕಾರ ವಿನಾಯಿತಿ ನೀಡಿದೆ.

ಏಪ್ರಿಲ್ 1ರಿಂದ ಅನ್ವಯ ಆಗುವಂತೆ ಸರ್ಕಾರಿ ಸಾಲಪತ್ರಗಳ ಮಾರಾಟ, ವಿನಿಮಯ ಅಥವಾ ವರ್ಗಾವಣೆಯಿಂದ ಬರುವ ಬಡ್ಡಿ ವರಮಾನ ಮತ್ತು ಬಂಡವಾಳ ಗಳಿಕೆ ಮೇಲಿನ ತೆರಿಗೆ ವಿನಾಯಿತಿಗಳನ್ನು ಒದಗಿಸಲು ಆದಾಯ ತೆರಿಗೆ ಕಾಯ್ದೆಗೆ ತಿದ್ದುಪಡಿ ತರಲು ಸರ್ಕಾರ ಸುಗ್ರೀವಾಜ್ಞೆಯನ್ನು ಪ್ರಕಟಿಸಿದೆ.

ಈ ಸುಗ್ರೀವಾಜ್ಞೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಹಿ ಹಾಕಿದ್ದಾರೆ.

12 ತಿಂಗಳಿಗಿಂತ ಹೆಚ್ಚಿನ ಅವಧಿಗೆ ನೋಂದಾಯಿತ ಷೇರುಗಳು ಮತ್ತು ಸಾಲಪತ್ರಗಳನ್ನು ಹೊಂದಿರುವ ವಿದೇಶಿ ಹೂಡಿಕೆದಾರರು ದೀರ್ಘಾವಧಿ ಬಂಡವಾಳ ಗಳಿಕೆ ಮೇಲಿನ ತೆರಿಗೆಯಾಗಿ ಶೇ 12.5ರಷ್ಟು ಪಾವತಿಸಬೇಕಿತ್ತು.

Publication Date
06/06/2026

Presented by

## ❖ 'ಇ-85': ಇಂಧನ ಮಾರಾಟ ಶುರು

- ಫ್ಲೆಕ್ಸ್-ಫ್ಯುಯೆಲ್ ವಾಹನಗಳಿಗೆ ಎಥೆನಾಲ್ ಪ್ರಮಾಣ ಹೆಚ್ಚಾಗಿರುವ 'ಇ-85' ಇಂಧನದ ಬಳಕೆಗೆ ಕೇಂದ್ರ ಸರ್ಕಾರ ಮುಕ್ತಗೊಳಿಸಿದ್ದು, ಸಾಮಾನ್ಯ ಪೆಟ್ರೋಲ್ ದರಕ್ಕಿಂತ ಪ್ರತಿ ಲೀಟರ್‌ಗೆ ₹20ರಷ್ಟು ರಿಯಾಯಿತಿ ಪ್ರಕಟಿಸಿದೆ.
- ಈ ಇಂಧನವು ಆರಂಭಿಕವಾಗಿ ಆಯ್ದ ಪೆಟ್ರೋಲ್ ಬಂಕ್‌ಗಳಲ್ಲಿ ಮಾತ್ರ ದೊರೆಯಲಿದೆ. ಫ್ಲೆಕ್ಸ್ ಫ್ಯುಯೆಲ್ ಎಂಜಿನ್ ಹೊಂದಿರುವ ವಾಹನಗಳು ಮಾತ್ರ ಈ ಇಂಧನವನ್ನು ಬಳಕೆ ಮಾಡಬಹುದಾಗಿದೆ.
- ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರದೀಪ್ ಸಿಂಗ್ ಪುರಿ ಅವರು ವಿಶ್ವ ಪರಿಸರ ದಿನದ ಅಂಗವಾಗಿ ದೆಹಲಿಯಲ್ಲಿ ಇಂಡಿಯನ್ ಆಯಿಲ್ ಕಾರ್ಪೊರೇಷನ್ ಈ ಮಳಿಗೆಯನ್ನು ಉದ್ಘಾಟಿಸಿದರು. ಇದೇ ವೇಳೆ ದೇಶದಾದ್ಯಂತ 48 ಮಳಿಗೆಗೆ ಚಾಲನೆ ನೀಡಲಾಯಿತು.
- ಪ್ರಸಕ್ತ ವರ್ಷದ ಡಿಸೆಂಬರ್ ಅಂತ್ಯದ ವೇಳೆಗೆ 500 ಮತ್ತು 2027ರ ಅಂತ್ಯದ ವೇಳೆಗೆ 5 ಸಾವಿರ ಮಳಿಗೆಗಳಲ್ಲಿ ಈ ಇಂಧನ ಮಾರಾಟ ಆರಂಭಿಸಲಾಗುವುದು ಎಂದು ಸಚಿವರು ಹೇಳಿದ್ದಾರೆ.
- 'ಇ-85' ಇಂಧನವು ಶೇ 80ರಿಂದ ಶೇ 85ರಷ್ಟು ಎಥೆನಾಲ್ ಹೊಂದಿದ್ದು, ಶೇ 14ರಿಂದ ಶೇ 19ರಷ್ಟು ಪೆಟ್ರೋಲ್ ಹೊಂದಿರಲಿದೆ.

## ❖ 'ವ್ಯಾಪಾರ ಒಪ್ಪಂದ ಶೀಘ್ರ ಅಂತಿಮ

- 'ಪ್ರಧಾನಿ ನರೇಂದ್ರ ಮೋದಿ ಅವರು ನನ್ನ ಆತ್ಮೀಯ ಸ್ನೇಹಿತ' ಎಂದಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅಮೆರಿಕ ಮತ್ತು ಭಾರತದ ನಡುವಿನ ವ್ಯಾಪಾರ ಒಪ್ಪಂದ ಶೀಘ್ರದಲ್ಲೇ ಅಂತಿಮಗೊಳ್ಳಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.
- 'ಪ್ರಧಾನಿ ಮೋದಿ ಅವರನ್ನು ತುಂಬಾ ಇಷ್ಟಪಡುತ್ತೇನೆ. ನಮ್ಮಿಬ್ಬರ ನಡುವೆ ಉತ್ತಮ ಬಾಂಧವ್ಯ ಇದೆ. ಆದ್ದರಿಂದ ನಾವು ವ್ಯಾಪಾರ ಒಪ್ಪಂದ ಮಾಡಿಕೊಳ್ಳಲಿದ್ದೇವೆ' ಎಂದು ಗುರುವಾರ ಓವಲ್ ಕಚೇರಿಯಲ್ಲಿ ಸುದ್ದಿಗಾರರಿಗೆ ತಿಳಿಸಿದರು.
- ವ್ಯಾಪಾರ ಒಪ್ಪಂದ ಅಂತಿಮಗೊಳಿಸಲು ಉಭಯ ದೇಶಗಳ ನಡುವೆ ಪ್ರಗತಿಯಲ್ಲಿರುವ ಮಾತುಕತೆ ಬಗ್ಗೆ ಕೇಳಿದಾಗ ಟ್ರಂಪ್, ಭಾರತವು ಹಲವು ವರ್ಷಗಳಿಂದ ಅಮೆರಿಕದ ನೀತಿಗಳ ಲಾಭವನ್ನು ಪಡೆದುಕೊಂಡಿದೆ ಎಂದು ಹೇಳಿದರು. 'ಅವರು ನಮ್ಮ ಕಂಪನಿಗಳಿಗೆ ಭಾರಿ ಪ್ರಮಾಣದ ಸುಂಕ ವಿಧಿಸಿದರು. ಅದಕ್ಕೆ ಪ್ರತಿಯಾಗಿ ನಾವು ಅವರಿಗೆ ಏನನ್ನೂ ವಿಧಿಸಲಿಲ್ಲ' ಎಂದರು.
- ಮೊದಲ ಹಂತದ ದ್ವಿಪಕ್ಷೀಯ ವ್ಯಾಪಾರ ಒಪ್ಪಂದವನ್ನು (ಬಿಟಿಎ) ಅಂತಿಮಗೊಳಿಸುವುದಕ್ಕೆ ಸಂಬಂಧಿಸಿದ ಮಾತುಕತೆ ನಡೆಸಲು ಅಮೆರಿಕದ ನಿಯೋಗವು ಈ ವಾರದ ಆರಂಭದಲ್ಲಿ
- ಭಾರತಕ್ಕೆ ಬಂದಿತ್ತು. ಭಾರತದ ನಿಯೋಗದ ಜತೆಗಿನ ನಾಲ್ಕು ದಿನಗಳ ಮಾತುಕತೆ ಗುರುವಾರ ಕೊನೆಗೊಂಡಿದೆ. 'ಮೊದಲ ಹಂತದ ವ್ಯಾಪಾರ ಒಪ್ಪಂದದ ಬಹುತೇಕ ಅಂಶಗಳನ್ನು ಭಾರತ ಮತ್ತು ಅಮೆರಿಕ ಅಂತಿಮಗೊಳಿಸಿವೆ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು ಹೇಳಿದ್ದಾರೆ.
- ಹಾರ್ಲಿ-ಡೇವಿಡ್ಸನ್ ದ್ವಿಚಕ್ರ ವಾಹನದ ಹೆಸರು ಉಲ್ಲೇಖಿಸಿದ ಟ್ರಂಪ್, ಭಾರತವು ಹೆಚ್ಚಿನ ಸುಂಕ ವಿಧಿಸುತ್ತಿರುವುದರಿಂದ ಅಮೆರಿಕದ ಈ ಜನಪ್ರಿಯ ಕಂಪನಿಗೆ ಭಾರತದಲ್ಲಿ ತನ್ನ ದ್ವಿಚಕ್ರ ವಾಹನಗಳನ್ನು ಮಾರಾಟ ಮಾಡುವುದು ಕಷ್ಟಕರವಾಗಿ ಪರಿಣಮಿಸಿದೆ ಎಂದರು.
- 'ಈ ಹಿಂದೆ ಅವರು (ಭಾರತವು) ಹಾರ್ಲಿ-ಡೇವಿಡ್ಸನ್ ಕಂಪನಿಗೆ ದ್ವಿಚಕ್ರ ವಾಹನಗಳನ್ನು ಮಾರಾಟ ಮಾಡಲು ಬಿಡುತ್ತಿರಲಿಲ್ಲ. ಅವರು ಶೇಕಡಾ 200ರಷ್ಟು ಸುಂಕ ವಿಧಿಸಿ, ಹಾರ್ಲಿ-ಡೇವಿಡ್ಸನ್ ಕಂಪನಿಗೆ ತಡೆಯೊಡ್ಡಿದರು. ಕಂಪನಿಯು ಬೇರೆ ದಾರಿಯಿಲ್ಲದೆ ತನ್ನ ತಯಾರಿಕಾ ಘಟಕಗಳನ್ನು ಸ್ಥಾಪಿಸಲು ಭಾರತಕ್ಕೆ ಹೋಗಬೇಕಾಯಿತು. ಇದು ತೀರಾ ದುರದೃಷ್ಟಕರ ಬೆಳವಣಿಗೆ' ಎಂದು ಹೇಳಿದರು.
- 'ಭಾರತದ ದ್ವಿಚಕ್ರ ವಾಹನ ತಯಾರಿಕಾ ಕಂಪನಿಗಳು ಅಮೆರಿಕದಲ್ಲಿ ಈ ರೀತಿಯ ಯಾವುದೇ ಅಡೆತಡೆ ಎದುರಿಸಲಿಲ್ಲ. ಅವರು ನಮ್ಮಲ್ಲಿಗೆ ಬಂದು ದ್ವಿಚಕ್ರ ವಾಹನಗಳನ್ನು ಮಾರಾಟ ಮಾಡಿದರು. ಭಾರತದ ಕಂಪನಿಗಳಿಗೆ ನಾವು ಎಷ್ಟು ಸುಂಕ ವಿಧಿಸಿದ್ದೇವೆ ಎಂಬುದು ನಿಮಗೆ ತಿಳಿದಿದೆಯೇ? ಏನೂ ಇಲ್ಲ. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಭಾರತದ ಸರಕುಗಳ ಮೇಲೆ ಸುಂಕ ವಿಧಿಸಿರುವುದರಿಂದ ನಾವು ಸಾಕಷ್ಟು ಹಣ ಗಳಿಸುತ್ತಿದ್ದೇವೆ' ಎಂದರು.

## ❖ 'ಎಸ್‌ಯು 57' ಅಭಿವೃದ್ಧಿಗೆ ಸಹಭಾಗಿತ್ವ'

- 'ಅತ್ಯಾಧುನಿಕ ಯುದ್ಧ ವಿಮಾನ ಸುಕೋಯ್ 'ಎಸ್‌ಯು-57' ಅನ್ನು ಭಾರತಕ್ಕೆ ಪೂರೈಸಲು ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಮುಂದಾಗಿದ್ದಾರೆ.
- 'ಸದೃಢವಾದ ಕಾರ್ಯತಂತ್ರ ಪಾಲುದಾರಿಕೆಯಲ್ಲಿ ಈ ಯುದ್ಧ ವಿಮಾನವನ್ನು ಭಾರತದಲ್ಲಿಯೇ ಉತ್ಪಾದಿಸಲೂ ರಷ್ಯಾ ಸಿದ್ಧವಿದೆ' ಎಂದೂ ಪುಟಿನ್ ಹೇಳಿದ್ದಾರೆ.
- ಗುರುವಾರ ರಾತ್ರಿ ಇಲ್ಲಿ ವಿವಿಧ ಸುದ್ದಿಸಂಸ್ಥೆಗಳ ಪ್ರತಿನಿಧಿಗಳ ಜೊತೆಗೆ ಸಂವಾದ ನಡೆಸಿದ ಪುಟಿನ್ ಅವರು, 'ಭಾರತ ಜೊತೆಗಿನ ರಕ್ಷಣಾ ಕ್ಷೇತ್ರ ಮತ್ತು ಸೇನಾ ಸಹಭಾಗಿತ್ವವನ್ನು ಉಲ್ಲೇಖಿಸಿದರು.
- ಭಾರತ ಇತ್ತೀಚೆಗೆ 5ನೇ ಪೀಳಿಗೆಯ ಬಹುಉದ್ದೇಶದ ಯುದ್ಧ ವಿಮಾನ (ಎಎಂಸಿಎ) ಯೋಜನೆ ಅನುಷ್ಠಾನಕ್ಕೆ ಚಾಲನೆ ನೀಡಿದೆ. ಇದನ್ನು ದೇಶದ ಅತಿದೊಡ್ಡ ದೇಶಿ ಉತ್ಪಾದನೆ ವೈಮಾನಿಕ ಯೋಜನೆ ಎಂದೂ ಬಣ್ಣಿಸಲಾಗಿದೆ.

Dr. Rajkumar IAS/KAS Academy

- 'ನನ್ನ ಪ್ರಕಾರ, 'ಎಸ್‌ಯು-57' ಈವರೆಗಿನ ಅತ್ಯುತ್ತಮ ಯುದ್ಧ ವಿಮಾನ ಅಭಿವೃದ್ಧಿ ಯೋಜನೆ. ಜಂಟಿ ಸಹಭಾಗಿತ್ವ ಕುರಿತ ಸಲಹೆಗೆ 'ಪರಿಶೀಲಿಸೋಣ' ಎಂದೂ ಭಾರತ ಪ್ರತಿಕ್ರಿಯಿಸಿದೆ' ಎಂದು ಸಂವಾದದಲ್ಲಿ ಪಿಟಿಐ ಸುದ್ದಿಸಂಸ್ಥೆಯ ಸಿಇಒ, ಪ್ರಧಾನ ಸಂಪಾದಕ ವಿಜಯ್ ಜೋಷಿ ಅವರ ಪ್ರಶ್ನೆಗೆ ಪುಟಿನ್ ಪ್ರತಿಕ್ರಿಯಿಸಿದರು.
- 'ರಷ್ಯಾದ ಆಹ್ವಾನವನ್ನು ಭಾರತ ಪೂರ್ಣವಾಗಿ ತಿರಸ್ಕರಿಸಿಲ್ಲ. ಯೋಜನೆಗೆ ಸಂಬಂಧಿಸಿ ಭಾರತದ ಎಚ್‌ಎಎಲ್ ಸಂಸ್ಥೆಯು ಸುಕೋಯ್ ಸಂಸ್ಥೆಯ ವಿನ್ಯಾಸ ವಿಭಾಗದ ಜೊತೆಗೆ ಸಂಪರ್ಕದಲ್ಲಿದೆ' ಎಂದು ತಿಳಿದುಬಂದಿದೆ.
- ಉಲ್ಲೇಖಿತ ಎಸ್‌ಯು-57 ಯುದ್ಧ ವಿಮಾನವು ಭಾರತದ ವಾಯುಪಡೆಗೆ 2035ರ ಮೊದಲು ಸೇರ್ಪಡೆ ಆಗುವ ಸಂಭವ ಇಲ್ಲ. ಎಲ್ಲ ತಾಂತ್ರಿಕ ವಿವರಗಳು ತೃಪ್ತಿಕರವಾಗಿದ್ದಲ್ಲಿ 36 ವಿಮಾನಗಳನ್ನು ಖರೀದಿಸುವ ಸಾಧ್ಯತೆಯನ್ನು ಭಾರತ ಸರ್ಕಾರ ಪರಿಶೀಲಿಸುತ್ತಿದೆ ಎಂದು ತಿಳಿದುಬಂದಿದೆ.

**-----------------------------------------ಶುಭವಂದನೆಗಳು---------------------------------------**

Dr. Rajkumar IAS/KAS Academy